ಶಿವಮೊಗ್ಗ
ಸೋಮವಾರ, 22 ಜೂನ್ 2026
ಸಂಪುಟ 17, ಸಂಚಿಕೆ 59, ಪುಟಗಳು 12
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
RNI: KAR KAN 2010/64051 ₹4
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕಾರ್ಯಕರ್ತರಿಗೆ ಅಧಿಕಾರ: ಸಿಎಂ ಡಿಕೆಶಿ | ೦೯
ಆರು ಸಂಸದರು ಶಿಂಧೆ ಬಣಕ್ಕೆ ಶೀಘ್ರ | ೦೭
ಬ್ರಿಟನ್ ಪ್ರಧಾನಿ ರಾಜೀನಾಮೆ ಸಾಧ್ಯತೆ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉತ್ತರೆ

ದಿನದ ಮಾತು

ಗೆಲುವು ಸೋಲುಗಳೆರಡನ್ನು ಸಮಾನವಾಗಿ ಸ್ವೀಕರಿಸುವವರೇ ಬಾಳಿನಲ್ಲಿ ಆನಂದವನ್ನು ಹೊಂದುತ್ತಾರೆ.

▲ ಗೌತಮ ಬುದ್ಧ

'ಬಾಲ್ಯನೀಕರಣ'ದ ಅಪಾಯಗಳು

ಗುರುಪ್ರಸಾದ ಭಟ್ ಉಡುಪಿ

• ಪುಟ ೬

ಕಿರುಸುದ್ದಿ

ಮೈಸೂರಲ್ಲಿ ಬಾಂಗ್ಲಾ 40 ಶಂಕಿತ ವಲಸಿಗರ ವಿಚಾರಣೆ

• **ಮೈಸೂರು:** ರೈಲು ನಿಲ್ದಾಣದಲ್ಲಿ 40ಕ್ಕೂ ಹೆಚ್ಚು ಶಂಕಿತ ಬಾಂಗ್ಲಾ ವಲಸಿಗರು ಪತ್ತೆಯಾಗಿದ್ದು, ಹಿಂದು ಜಾಗರಣ ವೇದಿಕೆ ಕಾರ್ಯಕರ್ತರು ಇವರನ್ನು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೋಲ್ಕತ್ತಾದಿಂದ ವಾರಕ್ಕೊಮ್ಮೆ ಸಂಚರಿಸುವ ಹೌರಾ ಎಕ್ಸ್‌ಪ್ರೆಸ್ ರೈಲಿನ ಮೂಲಕ ಇವರು ಮೈಸೂರಿಗೆ ಬಂದಿರುವುದಾಗಿ ತಿಳಿದುಬಂದಿದೆ. ರೈಲು ನಿಲ್ದಾಣದಲ್ಲಿ ಕಾರ್ಯಕರ್ತರು ಅವರ ಗುರುತಿನ ಚೀಟಿಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದಾರೆ.

• ಪುಟ ೮

ಇರಾನ್-ಅಮೆರಿಕ ಶಾಂತಿ ಮಾತುಕತೆ ಸ್ವಿಸ್‌ನಲ್ಲಿ ಶುರು

• **ಜ್ಯೂರಿಚ್:** ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ನಿಟ್ಟಿನಲ್ಲಿ, ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಭಾನುವಾರ ಸ್ವಿಟ್ಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶಾಂತಿ ಮಾತುಕತೆ ಆರಂಭಿಸಿದ್ದಾರೆ. ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಪಿಕಾರ್‌ನ ಹಿರಿಯ ನಾಯಕರು ಮಧ್ಯವರ್ತಿಗಳಾಗಿ ಪಾಲ್ಗೊಂಡಿದ್ದಾರೆ.

• ಪುಟ ೭

ಅನಿಲ ಸೋರಿಕೆ: 7 ಬಲಿ, 67 ಜನರ ಸ್ಥಿತಿ ಗಂಭೀರ

• **ತಿರುವಳ್ಳೂರು:** ತಮಿಳುನಾಡಿನ ತಿರುವಳ್ಳೂರಿನ ಸೀಫುಡ್ ರಫ್ತು ಕಾರ್ಖಾನೆಯಲ್ಲಿ ಸಂಭವಿಸಿದ ಅಮೋನಿಯಾ ಅನಿಲ ಸೋರಿಕೆಯಿಂದಾಗಿ 7 ಮಂದಿ ಸಾವನ್ನಪ್ಪಿದ್ದು, 40ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರವಾಗಿದೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಈ ದುರಂತ, ಸೇಂಟ್ ಪೀಟರ್ ಅಂಡ್ ಪಾಲ್ ಸೀಫುಡ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಂಭವಿಸಿದೆ.

• ಪುಟ ೭

ಧರ್ಮಸ್ಥಳದ ಶ್ರೀಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

• ಪುಟ ೮



ವಯಸ್ಸಿಗೂ ಬಲ ಮನಸ್ಸಿಗೂ ಛಲ

• ಪುಟ ೭

ಸುದ್ದಿ ಸಮಗ್ರ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೋದಿ ಚಾಲನೆ

ವಿಶ್ವ ಶಾಂತಿಗೆ ಯೋಗ





• **ಕೋಲ್ಕತ್ತಾ:** ಯೋಗವು ವೈಯಕ್ತಿಕ ಆರೋಗ್ಯ ರಕ್ಷಕ ಮಾತ್ರವಲ್ಲ, ಜಾಗತಿಕ ಶಾಂತಿಗೆ ಹಾದಿ ತೆರೆಯಬಲ್ಲ ವೇಗವರ್ಧಕ ಶಕ್ತಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಯೋಗಾಭ್ಯಾಸದ ಅನನ್ಯ ಮಹತ್ವ ಗ್ರಾಹಕ ಬೆಳಕು ಚೆಲ್ಲಿದ್ದಾರೆ. ಜಗತ್ತಿನ ಹಲವು ರಾಷ್ಟ್ರಗಳು ನಿರಂತರ ಸಂಘರ್ಷಗಳಿಂದ ತತ್ತರಿಸುವ ಪ್ರಸಕ್ತ ಸನ್ನಿವೇಶದಲ್ಲಿ, ಶಾಂತಿಯ ಮರುಸ್ಥಾಪನೆ ಮತ್ತು ಸಮಾಜದಲ್ಲಿ ಸೌಹಾರ್ದ ಸೃಷ್ಟಿಸಲು ಯೋಗ ಅತ್ಯಂತ ಅಮೂಲ್ಯ ಮಾಧ್ಯಮವೆಂದು ಪ್ರಧಾನಿ ಮೋದಿ ಅಭಿಮತ ಸಾರ್ವಕಾಲಿಕ ಮತ್ತು ಹೆಚ್ಚು ಮಹತ್ವಪೂರ್ಣವೆನಿಸಿದೆ.

ಯೋಗವು ಕಲಿಸುವ ಸಮತೋಲಿತ ಜೀವನಶೈಲಿ ಪಾಲಿಸುವುದು ಅತ್ಯವಶ್ಯ. ಎಲ್ಲಾ ವಯೋಮಿತಿಯವರೂ ಯೋಗಾಭ್ಯಾಸ ರೂಢಿಸಿಕೊಳ್ಳುವುದು ಕೂಡ ಅಗತ್ಯವೆಂದ ಪ್ರಧಾನಿ ಮೋದಿ, ಸಮಸ್ಯೆಗಳಿಂದ ಹೊರಬರಲು ದುಡಿಮೆ, ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಮತ್ತು ನಿದ್ರೆ ತೀರಾ ಮುಖ್ಯ, ಈ ರೀತಿಯ ಸಮತೋಲಿತ ಜೀವನಶೈಲಿ ಪಾಲಿಸುವವರಿಗೆ ಸಮಸ್ಯೆಗಳೆದುರಾಗದು ಎಂದು ಭಗವದ್ಗೀತೆ ಸಾರಿದೆ.

ಪುಟ ೮

ದೇಶವ್ಯಾಪಿ ಯೋಗ ಪ್ರದರ್ಶನ

• ಪುಟ ೭

ಬದುಕಿನ ಭಾಗವಾಗಲಿ

ಯೋಗವನ್ನು ನಿರ್ದಿಷ್ಟ ದಿನ ಅಥವಾ ಕಾರ್ಯಕ್ರಮಕ್ಕೆ ಸೀಮಿತಗೊಳಿಸುವ ಬದಲು ಅದನ್ನು ನಮ್ಮ ಮತ್ತು ನಮ್ಮ ಕುಟುಂಬಗಳು ಹಾಗೂ ಭಾವೀ ಪೀಳಿಗೆಗಳ ಬದುಕಿನ ಭಾಗವಾಗಿ ಮಾರ್ಪಡಿಸುವ ಸಂಕಲ್ಪವನ್ನು ತೊಡೋಣ. ವಿವಿಧ ದೇಶಗಳು, ವಿಭಿನ್ನ ಸಂಸ್ಕೃತಿಗಳ ಜನರನ್ನು ಒಗ್ಗೂಡಿಸುವ ಯೋಗವು ಜಗತ್ತಿನ ಬೃಹತ್ ಸಾಮುದಾಯಿಕ ಆಚರಣೆಯಾಗಿ ರೂಪುಗೊಂಡಿದೆ. ಭೂಮಿಯಲ್ಲಿ ಅತಿ ದೊಡ್ಡ ಹಗಲಿನ ದಿನವಾಗಿರುವ ಜೂ.21 ಇಂದೀಗ ಯೋಗದಿಂದಾಗಿ ಬೃಹತ್ ಸಾಮುದಾಯಿಕ ಆಚರಣಾ ದಿನವಾಗಿ ಪರಿವರ್ತಿತವಾಗಿದೆ. ಜನರನ್ನು ಒಗ್ಗೂಡಿಸುವ ಶಕ್ತಿಯಿದೆ ಯೋಗಕ್ಕೆ. ಯೋಗ ದಿನಾಚರಣೆಯ ಸಡಗರದಲ್ಲಿ ನಾನು ಜಗತ್ತಿನ ಜನರೆಲ್ಲರನ್ನು ಅಭಿನಂದಿಸುವುದಾಗಿ ಪ್ರಧಾನಿ ಮೋದಿ ಹೇಳಿದ್ದಾರೆ.

ರಾಜ್ಯದ ವಿವಿಧೆಡೆ ಯೋಗ ಕಾರ್ಯಕ್ರಮ

• **ಬೆಂಗಳೂರು:** ರಾಜ್ಯಾದ್ಯಂತ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಅತ್ಯಂತ ಸಡಗರ ಮತ್ತು ಉತ್ಸಾಹದಿಂದ ಆಚರಿಸಲಾಯಿತು. ಆರೋಗ್ಯಕರ ವ್ಯಕ್ತಿತ್ವಕ್ಕಾಗಿ ಯೋಗ ಧ್ಯೇಯವಾಕ್ಯದಲ್ಲಿ ನಡೆದ ಈ ಆಚರಣೆಗಳಲ್ಲಿ, ಮಕ್ಕಳು, ಯುವಕರು ಹಾಗೂ ಹಿರಿಯರು ಸೇರಿದಂತೆ ಲಕ್ಷಾಂತರ ಮಂದಿ ಸ್ವಯಂಪ್ರೇರಿತರಾಗಿ ಪಾಲ್ಗೊಂಡಿದ್ದರು. ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ನಡೆದ ಯೋಗ ದಿನಾಚರಣೆಯಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್, ಆರೋಗ್ಯ ಸಚಿವ ಯು.ಟಿ.ಖಾದರ್ ಭಾಗವಹಿಸಿದ್ದರು. ಸಾವಿರಾರು ಯೋಗಪಟುಗಳು ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿದರು.

ಪುಟ ೮

20 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳ ಹಾಜರಿ

ದೇಶದಾದ್ಯಂತ ನೀಟ್ ಮರುಪರೀಕ್ಷೆ ಸುಗಮ



• **ಹೊಸದಿಲ್ಲಿ:** ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ರದ್ದುಗೊಂಡಿದ್ದ ನೀಟ್ (ಯುಜಿ)-2026 ಪರೀಕ್ಷೆಯ ಮರುಪರೀಕ್ಷೆ ಭಾನುವಾರ ದೇಶಾದ್ಯಂತ ಕಟ್ಟುನಿಟ್ಟಿನ ಭದ್ರತಾ ಕ್ರಮಗಳ ನಡುವೆ ಯಶಸ್ವಿಯಾಗಿ ನಡೆಯಿತು. 20 ಲಕ್ಷಕ್ಕೂ ಹೆಚ್ಚು ವೈದ್ಯಕೀಯ ಪ್ರವೇಶಾಕಾಂಕ್ಷಿಗಳು ಮರುಪರೀಕ್ಷೆಯಲ್ಲಿ ಭಾಗವಹಿಸಿದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಾಹಿತಿ ಪ್ರಕಾರ, ಭಾರತದಲ್ಲಿನ 5,440 ಪರೀಕ್ಷಾ ಕೇಂದ್ರಗಳು ಹಾಗೂ ವಿದೇಶಗಳ 14 ಕೇಂದ್ರಗಳಲ್ಲಿ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಯಿತು. ಸುಮಾರು 7 ಲಕ್ಷ ಅಧಿಕಾರಿಗಳು, ಸಿಬ್ಬಂದಿ, ವೀಕ್ಷಕರು ಮತ್ತು ಪೊಲೀಸ್ ಸಿಬ್ಬಂದಿಯನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿತ್ತು.



ಬಯೋಮೆಟ್ರಿಕ್, ಸಿಸಿಟಿವಿ, ಜಾಮರ್‌ಗಳ ಕಣ್ಗಾವಲು: ಆಧಾರ್ ಆಧಾರಿತ ಬಯೋಮೆಟ್ರಿಕ್ ಪರಿಶೀಲನೆ, ಮುಖ ಗುರುತಿಸುವಿಕೆ, ಸಿಸಿಟಿವಿ ನಿಗಾ ವ್ಯವಸ್ಥೆ, ಮೊಬೈಲ್ ಜಾಮರ್‌ಗಳು ಹಾಗೂ ಎರಡು ಹಂತದ ತಪಾಸಣೆ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ರಾಜ್ಯ ಪೊಲೀಸ್ ಇಲಾಖೆಗಳ ಸಹಯೋಗದಲ್ಲಿ, ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿ ಪರೀಕ್ಷೆಯ ಮೇಲೆ ನಿಗಾ ವಹಿಸಲಾಯಿತು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ದಿಲ್ಲಿಯ ಎನ್‌ಟಿಎ ಕೇಂದ್ರದಲ್ಲಿ ಪರೀಕ್ಷಾ ವ್ಯವಸ್ಥೆಗಳ ಪರಿಶೀಲನೆ ನಡೆಸಿದರು. ಪಾರದರ್ಶಕ ಹಾಗೂ ಸುಗಮ ಪರೀಕ್ಷೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಪುಟ ೮

ರಾಜ್ಯದಲ್ಲಿ ಬಿಗಿಭದ್ರತೆ ನಡುವೆ ನೀಟ್ ಪರೀಕ್ಷೆ

• ಪುಟ ೯

ದಿಲ್ಲಿ ಏರ್‌ಪೋರ್ಟ್‌ನಲ್ಲಿ 45 ನಿಮಿಷ ಕಾದ ಮೋದಿ

ನೀಟ್ ಪರೀಕ್ಷಾರ್ಥಿಗಳಿಗೆ ತೊಂದರೆ ತಪ್ಪಿಸುವ ಉದ್ದೇಶ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು, ನೀಟ್ -ಯುಜಿ ಪರೀಕ್ಷಾರ್ಥಿಗಳ ಸಂಚಾರಕ್ಕೆ ತೊಂದರೆಯಾಗಬಾರದೆಂಬ ಕಾಳಜಿ ಹಿನ್ನೆಲೆ ದಿಲ್ಲಿ ವಿಮಾನ ನಿಲ್ದಾಣದಲ್ಲೇ 45 ನಿಮಿಷಗಳ ಕಾಲ ಕಾದು ಕುಳಿತ ಘಟನೆ ಭಾನುವಾರ ನಡೆದಿದೆ. ಪ್ರಧಾನಿಯವರು ಕೋಲ್ಕತ್ತಾದಿಂದ ಮಧ್ಯಾಹ್ನ 1:15ಕ್ಕೆ ದಿಲ್ಲಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಪ್ರಧಾನಿಯವರ ವಾಹನದ ಸುಗಮ ಸಂಚಾರಕ್ಕಾಗಿ ನಿರ್ದಿಷ್ಟ ಮಾರ್ಗಗಳಲ್ಲಿ ಸಂಚಾರ ನಿಯಂತ್ರಣ ಮತ್ತು ತಾತ್ಕಾಲಿಕ ನಿರ್ಬಂಧಗಳನ್ನು ಜಾರಿಗೊಳಿಸಲಾಗುತ್ತದೆ. ಆದರೆ, ಮೋದಿಯವರು ನೀಟ್ -ಯುಜಿ ಮರುಪರೀಕ್ಷೆ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತೆರಳುವ ವೇಳೆ ಅವರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ವಿಮಾನ ನಿಲ್ದಾಣದಲ್ಲೇ 45 ನಿಮಿಷ ಕಾಯಲು ನಿರ್ಧರಿಸಿದರು.

ಪುಟ ೮

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಹೇಳಿಕೆ

ಬೇನಾಮಿ ಆಸ್ತಿ ಸಾಬೀತಾದ್ರೆ ದಾನ

• **ರಾಮನಗರ:** ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೇನಾಮಿ ಆಸ್ತಿ ಹೊಂದಿರುವುದನ್ನು ಸಾಬೀತುಮಾಡಿದರೆ ಆ ಜಮೀನನ್ನು ನಾನು ಶಾಲೆಗೆ ಅಥವಾ ಆಸ್ಪತ್ರೆಗೆ ದಾನವಾಗಿ ಕೊಡುತ್ತೇನೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಬಿಡದಿ ಹೋಬಳಿಯ ಮರಳೇಗೌಡನದೊಡ್ಡಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಈ ಭಾಗದಲ್ಲಿ 100 ಎಕರೆ ಬೇನಾಮಿ ಆಸ್ತಿ ಹೊಂದಿದ್ದಾರೆ ಎಂದು ಸ್ಥಳೀಯ ಶಾಸಕ ಹೇಳಿದ್ದಾರೆ. ಕೇತಗಾನಹಳ್ಳಿ ಗ್ರಾಮದಲ್ಲಿ 1985ರಲ್ಲಿ ನಮ್ಮ ತಂದೆ ಜಾಗ ಖರೀದಿ ಮಾಡಿದ್ದಾರೆ. ಯಾರ ತಲೆ ಹೊಡೆದು ಅದನ್ನು ಖರೀದಿ ಮಾಡಿಲ್ಲ, ಈ ಜಮೀನನ್ನು ಸಿನಿಮಾ ಹಂಚಿಕೆ ಮಾಡಿದ ದುಡ್ಡಲ್ಲಿ ಖರೀದಿ ಮಾಡಿದ್ದೇವೆ ಎಂದು ತಿಳಿಸಿದರು. ನಮ್ಮ ತಾಯಿ ಹೆಸರಲ್ಲಿ 27 ಎಕರೆ, ನನ್ನ ಹೆಸರಲ್ಲಿ 5 ಎಕರೆ ಜಾಗವನ್ನು ಕೋವಿಡ್ ಟೈಂನಲ್ಲಿ ನಾವು ಖರೀದಿ ಮಾಡಿದ್ದೇವೆ. ನಮ್ಮ ಜಾಗದಲ್ಲಿ ಕಮರ್ಷಿಯಲ್ ಬಿಲ್ಡಿಂಗ್ ಕಟ್ಟಿಲ್ಲ.

ಪುಟ ೮



ಪಾದಯಾತ್ರೆ ವೇಳೆ ವಾಗ್ವಾದ

ತಾಲೂಕಿನ ಬಿಡದಿ ಹೋಬಳಿಯಲ್ಲಿ ತಲೆಯೆತ್ತಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಪಕ್ಷದ ವತಿಯಿಂದ ಯೋಜನಾ ಪ್ರದೇಶದ ಗ್ರಾಮಗಳಲ್ಲಿ ನಡೆದ ಪಾದಯಾತ್ರೆ ಸಂದರ್ಭದಲ್ಲಿ ಪರ ಮತ್ತು ವಿರೋಧ ಇರುವವರ ನಡುವೆ ವಾಗ್ವಾದ ನಡೆಯಿತು.

ಪುಟ ೮

ಕಾಂಗ್ರೆಸ್ ಮತ್ತಷ್ಟು ಬಲಪಡಿಸಲು ಮಹತ್ವದ ನಿರ್ಣಯ

ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್

• **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಭಾನುವಾರ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು. ನಗರದ ಅರಮನೆ ಮೈದಾನದಲ್ಲಿ ನಡೆದ ಬೃಹತ್ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹರಿಪ್ರಸಾದ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಸಮಾರಂಭದಲ್ಲಿ ಕಾಂಗ್ರೆಸ್ ನಾಯಕರು ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, 2028ರ ಕರ್ನಾಟಕ ವಿಧಾನಸಭೆ ಚುನಾವಣೆ ಹಾಗೂ 2029ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಮಹತ್ವದ ನಿರ್ಣಯಗಳನ್ನು ಕೈಗೊಂಡರು. ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಈ ವೇಳೆ ತಾವು ಅಧಿಕಾರ ವಹಿಸಿಕೊಂಡ ದಿನವನ್ನು ನೆನಪಿಸಿಕೊಂಡರು.

ಪುಟ ೮



> ಕಾಂಗ್ರೆಸ್ ಮಾದರಿ ದೇಶಕ್ಕೆ ಮಾದರಿ. ಕಾಂಗ್ರೆಸ್ ನಾಯಕತ್ವ ದೇಶಕ್ಕೆ ಮಾದರಿ. ಕರ್ನಾಟಕ ಮಾದರಿ ಇಡೀ ದೇಶಕ್ಕೆ ಮಾದರಿ. ಸಮಾಜದ ಕಟ್ಟಕಡೆಯ ಪ್ರಜೆಗೆ ನ್ಯಾಯ ಒದಗಿಸುವುದೇ ಕಾಂಗ್ರೆಸ್ ತತ್ವ
>
> ■ ರಣದೀಪ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ನೌಕಾಪಡೆಗೆ 3 ಹಡಗು ಸೇರ್ಪಡೆ

• **ಕೋಲ್ಕತ್ತಾ:** ಬಲಿಷ್ಠ ಸಮುದ್ರ ಸಾಮರ್ಥ್ಯ, ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವನ್ನು ನಿರ್ಧರಿಸುವ ಪ್ರಮುಖ ಅಂಶ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು. ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗುಗಳನ್ನು ಸೇರ್ಪಡೆಗೊಳಿಸಿದ ಬಳಿಕ ಮಾತನಾಡಿದ ಅವರು, ಭಾರತ ಈ ವಾಸ್ತವವನ್ನು ಅರಿತು ಅದಕ್ಕೆ ತಕ್ಕ ಸಿದ್ಧತೆ ನಡೆಸುತ್ತಿದೆ ಎಂದರು.

ಮೋದಿ ಸ್ವದೇಶಿ ನಿರ್ಮಿತ ಸ್ಟೆಲ್ತ್ ಫ್ರಿಗೇಟ್ ಮಹಗಿರಿ, ಸರ್ವೇ ಹಡಗು ಸಂಶೋಧಕ್ ಹಾಗೂ ಜಲಾಂತರ್ಗಾಮಿ ವಿರೋಧಿ ಯುದ್ಧನೌಕೆ ಅಗ್ರಯ್ ಅನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಈ ವೇದಿಕೆಗಳು ಸಮುದ್ರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೇ ಮತ್ತು ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಲ್ಲಿ ಪ್ರಮುಖ ಸಾಮರ್ಥ್ಯ ಹೊಂದಿವೆ ಎಂದು ಹೇಳಿದರು.

• ವಿವರ ಪುಟ ೭

ಪ್ರಕಾಶ್ ರಾಜ್‌ಗೆ ಕಾನೂನು ಸಂಕಷ್ಟ

• **ಬೆಂಗಳೂರು:** 4 ರಾಜ್ಯಗಳಲ್ಲಿ ಕಾನೂನು ಬಾಹಿರವಾಗಿ ಮತದಾರರ ಗುರುತಿನ ಚೀಟಿ ಹೊಂದಿರುವ ಆರೋಪದ ಮೇಲೆ ನಟ ಪ್ರಕಾಶ್ ರಾಜ್ ಅವರಿಗೆ ಕಾನೂನು ಸಂಕಷ್ಟ ಎದುರಾಗಿದೆ. ನ್ಯಾಯಾಲಯ ನೀಡಿದ್ದ ಸಮನ್ಸ್‌ಗೆ ಸತತ ಗೈರು ಹಾಜರಾಗಿ, ಯಾವುದೇ ಪ್ರತಿಕ್ರಿಯೆ ನೀಡದ ಹಿನ್ನೆಲೆಯಲ್ಲಿ ಬೆಂಗಳೂರಿನ 48ನೇ ಎಸಿಜೆಎಂ ನ್ಯಾಯಾಲಯವು ಬಂಧನ ವಾರೆಂಟ್ ಜಾರಿಗೊಳಿಸಿ ಆದೇಶಿಸಿದೆ. 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಪ್ರಕಾಶ್ ರಾಜ್ ಅವರು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಪುಟ ೮

ಕಿರುಸುದ್ದಿ

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-58,000-83,996	ರಾಶಿ-38,500-59,270
ರಾಶಿ-45,099-54,009	ಚಾಲಿ-30,022-41,699
ಬೆಟ್ಟೆ-51,000-61,599	ಕೆಂಪುಗೋಟು-26,699-40,189
ಗೊರಬಲು-19,010-42,909	ಬಿಳೆಗೋಟು-20,022-34,099
	ಸಿಪ್ಪೆಗೋಟು-9,699-22,089

ಸಹಕಾರ ಡಿಪ್ಲೋಮಾ ಕೋರ್ಸ್ ತರಬೇತಿ ಪ್ರವೇಶಕ್ಕೆ ಅರ್ಜಿ

• **ಶಿವಮೊಗ್ಗ :** ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ವತಿಯಿಂದ ಆರು ತಿಂಗಳ ಅವಧಿಯ ಸಹಕಾರ ಡಿಪ್ಲೊಮಾ ಕೋರ್ಸ್ ತರಬೇತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಾಂಶುಪಾಲ ಡಾ.ಎಂ.ವಿಶ್ವೇಶ್ವರಯ್ಯ ತಿಳಿಸಿದರು. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿನೋಬ ನಗರದಲ್ಲಿ ಈ ತರಬೇತಿ ಕೇಂದ್ರವಿದ್ದು, ಆಸಕ್ತರು ಅರ್ಜಿ ಸಲ್ಲಿಸಲು ಜೂ. 30 ಕೊನೆ ದಿನ. ರೆಗ್ಯುಲರ್ ಡಿಸಿಎಂ ಕೋರ್ಸ್ ತರಬೇತಿ ಪಡೆಯುವ ಉದ್ಯೋಗಾಕ್ಷಾಂಕಿಗಳಿಗೆ ಹಲವು ಅವಕಾಶಗಳು ಸಹಕಾರ ಇಲಾಖೆಗಳಲ್ಲಿ ಇವೆ. ಕನಿಷ್ಠ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರು ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ; 08182-248873, 9449075746 ಗೆ ಸಂಪರ್ಕಿಸಬಹುದಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ವಿಕಾಂತ್ ಇದ್ದರು.

ಅಕ್ರಮವಾಗಿ ನಾಡ ಬಂದೂಕು ತಯಾರಿಸುತ್ತಿದ್ದ ಓರ್ವನ ಬಂಧನ

• **ಶಿವಮೊಗ್ಗ :** ತೀರ್ಥಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಕ್ಲಾಪುರ ಗ್ರಾಮದಲ್ಲಿ ಅಕ್ರಮವಾಗಿ ನಾಡಬಂದೂಕು ತಯಾರಿಸುತ್ತಿದ್ದ ಸುಬ್ರಹರ ಆಚಾರಿ (56)ಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಈತನಿಂದ ಒಂದು ನಾಡ ಬಂದೂಕು ವಶಕ್ಕೆ ಪಡೆಯಲಾಗಿದೆ. ಇವರು ಅಕ್ರಮವಾಗಿ ನಾಡ ಬಂದೂಕು ತಯಾರಿಸುತ್ತಿದ್ದಾರೆಂಬ ಖಚಿತ ಮಾಹಿತಿಯ ಮೇರೆಗೆ ಎಸ್ಪಿ ನಿಖಿಲ್ ಬಿ. ಇವರ ಮಾರ್ಗದರ್ಶನದಲ್ಲಿ ತೀರ್ಥಹಳ್ಳಿ ಠಾಣೆಯ ಪಿಎಸ್ಐ ಅವ‌ರ್. ಸುಕ್ಕ ನೇತೃತ್ವದ ಪೊಲೀಸ್ ತಂಡ ಬಂಧಿಸಿದೆ.

ಗಾಂಜಾ ಮಾರಾಟಕ್ಕೆ ಯತ್ನ: ಪೊಲೀಸರಿಂದ ಇಬ್ಬರ ಬಂಧನ

• **ಶಿವಮೊಗ್ಗ :** ಶಿಕಾರಿಪುರ ಟೌನ್ ಠಾಣಾವ್ಯಾಪ್ತಿಯಲ್ಲಿ ಯಾತ್ರೀ ನಿವಾಸಕ್ಕೆ ಹೋಗುವ ಸಾರ್ವಜನಿಕ ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಸುನೀಲ್ ನಾಯ್ಕ (32) ಹಾಗೂ ಸುನೀಲ್ ಟಿ.ಪಿ (30) ಬಂಧಿತರು. ಇವರಿಂದ ಸುಮಾರು 15,000 ರೂ. ಮೌಲ್ಯದ 658 ಗ್ರಾಂ ತೂಕದ ಗಾಂಜಾ ಅಮಾನತುಪಡಿಸಿಕೊಳ್ಳಲಾಗಿದೆ.

ಅಪ್ರಾಪ್ತಳನ್ನು ಮದುವೆಯಾಗಿ ಲೈಂಗಿಕ ದೌರ್ಜನ್ಯ: ನಾಲ್ವರು ಆರೋಪಿಗಳಿಗೆ ಕಾರಾಗೃಹ ಶಿಕ್ಷೆ

• **ಶಿವಮೊಗ್ಗ :** ತಾಲೂಕಿನ 27 ವರ್ಷದ ಯುವಕನೊಬ್ಬ 17 ವರ್ಷದ ಅಪ್ರಾಪ್ತಳನ್ನು ಮದುವೆಯಾಗಿ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರಿಗೆ 20 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ನ್ಯಾಯಾಲಯ ತೀರ್ಪು ನೀಡಿದೆ. ಈ ಸಂಬಂಧ ಕುಂಸಿ ಪೊಲೀಸ್ ಠಾಣೆಯಲ್ಲಿ ಲೈಂಗಿಕ ದೌರ್ಜನ್ಯ, ಪೋಕ್ಸೋ ಕಾಯ್ದೆ ಮತ್ತು ಬಾಲ್ಯ ವಿವಾಹ ನಿಷೇಧ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಆಗಿನ ತನಿಖಾಧಿಕಾರಿ ಕುಂಸಿ ಠಾಣೆಯ ಪಿಐ ಹರೀಶ್ ಕೆ. ಪಾಟೀಲ್ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ನಿಂಗನಗೌಡ ಭ. ಪಾಟೀಲ್ ಆರೋಪ ದೃಢಪಟ್ಟಿದ್ದರಿಂದ ಶಿಕ್ಷೆ ವಿಧಿಸಿದ್ದಾರೆ. 1,85,000 ರೂ. ದಂಡ ಹಾಗೂ ನೊಂದ ಬಾಲಕಿಗೆ 4,00,000 ರೂ. ಪರಿಹಾರ ನೀಡಲು ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಶ್ರೀಧರ್ ವಾದ ಮಂಡಿಸಿದ್ದರು.

ರೈತರಿಂದ ಅರ್ಜಿ ಆಹ್ವಾನ

• **ಶಿವಮೊಗ್ಗ :** ತೋಟಗಾರಿಕೆ ಇಲಾಖೆಯು 2026-27ನೇ ಸಾಲಿಗೆ ಜಿಲ್ಲೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್, ಹನಿ ನೀರಾವರಿ, ಕೃಷಿ ಯಾಂತ್ರೀಕರಣ ಉಪಯೋಜನೆ, VBGRAMG, RKVY, ಜೇನು ಸಾಕಾಣಿಕೆ, ಸುಗ್ಗಿ ತೋಟಗಾರಿಕೆ ಅಭಿವೃದ್ಧಿ ಮುಂತಾದ ಯೋಜನೆಗಳಡಿ ವಿವಿಧ ಕಾರ್ಯಕ್ರಮಗಳಿಗೆ ಸಹಾಯಧನ ಒದಗಿಸಲಾಗುತ್ತಿದ್ದು, ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಿದೆ. ರೈತರು ನಿಗದಿತ ನಮೂನೆ ಅರ್ಜಿಯನ್ನು ಆಯಾ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ, ಹತ್ತಿರದ ರೈತ ಸಂಪರ್ಕ ಕೇಂದ್ರಗಳಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ನಿಗದಿತ ಸಮಯದಲ್ಲಿ ಸಲ್ಲಿಸುವಂತೆ ತೋಟಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ಶಿವಮೊಗ್ಗ – 08182-279415, 9980009438, ಭದ್ರಾವತಿ -08282-295029, 91082 52536, ಶಿಕಾರಿಪುರ- 08187-223544, 8310662972, ಸೊರಬ - 08184-295112, 9663634388, ಸಾಗರ- 08183-295124, 990090 3393, ಹೊಸನಗರ - 08185-295364, 9591695327, ತೀರ್ಥಹಳ್ಳಿ- 08181-228151, 9108280642 ಸಂಪರ್ಕಿಸುವುದು.

ಕಾರುಗಳ ನಡುವೆ ಅಪಘಾತ: ಹಲವರಿಗೆ ಗಾಯ

• **ತೀರ್ಥಹಳ್ಳಿ :** ರಾಜ್ಯ ಹೆದ್ದಾರಿ ಆಗುಂಬೆ –ತೀರ್ಥಹಳ್ಳಿ ನಡುವಿನ ಬಾಳೆಬೈಲು ಸಮೀಪದ ಶಿವರಾಜಪುರ ಬಳಿ ಎರಡು ಕಾರುಗಳ ನಡುವೆ ಭೀಕರ ಅಪಘಾತ ಸಂಭವಿಸಿದ್ದು ಎರಡು ಕಾರುಗಳು ಸಂಪೂರ್ಣ ನುಜ್ಜುಗುಜ್ಜಾದ ಘಟನೆ ಭಾನುವಾರ ಸಂಜೆ ನಡೆದಿದೆ.

ತೀರ್ಥಹಳ್ಳಿ ಕಡೆಯಿಂದ ಉಡುಪಿ ಕಡೆಗೆ ಹೋಗುತ್ತಿದ್ದ ರಿಡ್ಜ್ ಕಾರು ಹಾಗೂ ಉಡುಪಿ ಕಡೆಯಿಂದ ತೀರ್ಥಹಳ್ಳಿ ಕಡೆಗೆ ಬರುತ್ತಿದ್ದ ಇನೋವಾ ಕಾರು ನಡುವೆ ಈ ಅಪಘಾತ ಸಂಭವಿಸಿದೆ. ಎರಡು ಕಾರಿನಲ್ಲಿದ್ದ ಹಲವರಿಗೆ ಗಾಯವಾಗಿದ್ದು ಪಟ್ಟಣದ ಜೆಸಿ ಆಸ್ಪತ್ರೆಗೆ ರವಾನಿಸಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ಕರದೊಯ್ಯಲಾಗಿದೆ.

ಇನೋವಾ ಕಾರು ದಾವಣಗೆರೆ ಮೂಲದ್ದು ಎಂದು ತಿಳಿದು ಬಂದಿದ್ದು, ರಿಡ್ಜ್ ಕಾರು ಮೇಲಿನ ಕುರುವಳ್ಳಿಯದ್ದು ಎಂದು ತಿಳಿದು ಬಂದಿದೆ. ತೀರ್ಥಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿನಿಲಯದ ಸೌಲಭ್ಯದಿಂದ ಉನ್ನತ ಸಾಧನೆ ಮಾಡಿ: ಸಿ.ಎಸ್. ಷಡಾಕ್ಷರಿ

• **ಶಿವಮೊಗ್ಗ :** ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತಮ ವಸತಿ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ವಿದ್ಯಾರ್ಥಿ ನಿಲಯವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರೂ ಆಗಿರುವ ಶಿವಕುಮಾರ ಸ್ವಾಮೀಜಿಗಳ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದರು.

ಶಿವಕುಮಾರ ಸ್ವಾಮೀಜಿಗಳ ನೌಕರರ ಸಂಘದ ವತಿಯಿಂದ ವೀರಶೈವ ಲಿಂಗಾಯತ ಸಮಾಜದ ಉಚಿತ ವಿದ್ಯಾರ್ಥಿ ನಿಲಯದ 2026-27ನೇ



ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಆಯೋಜಿಸಿದ್ದ ಸಂದರ್ಶನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು. ಉದ್ಯೋಗಕ್ಕೆ ಸೇರಿದ ಬಳಿಕ ಸಮಾಜಕ್ಕೆ ಕೊಡುಗೆ ನೀಡುವಂತೆ ಹೇಳಿದರು.

ಈ ಬಾರಿ ಸಂದರ್ಶನದಲ್ಲಿ ಸುಮಾರು 60 ವಿದ್ಯಾರ್ಥಿಗಳು ಪ್ರವೇಶ ಪಡೆದರು. 2004 ರಿಂದ ಇಲ್ಲಿಯವರೆಗೆ ಸುಮಾರು 2000 ವಿದ್ಯಾರ್ಥಿಗಳು ವಸತಿ ನಿಲಯದಲ್ಲಿದ್ದು ಉಚಿತ ಶಿಕ್ಷಣ ಪಡೆದಿದ್ದಾರೆ. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿದ ಶಾಸಕ ಎಸ್.ಎನ್. ಚನ್ನಬಸಪ್ಪ

ವಿಶ್ವಕ್ಕೆ ಭಾರತ ನೀಡಿದ ಕೊಡುಗೆ 'ಯೋಗ'



• **ಶಿವಮೊಗ್ಗ :** ವಸುಧೈವ ಕುಟುಂಬಕಂ ಎಂದು ನಂಬಿರುವ ಭಾರತ ಪ್ರಪಂಚಕ್ಕೆ ನೀಡಿರುವ ಶಕ್ತಿ ಯೋಗ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಹೇಳಿದರು.

ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆಯುಷ್ ಇಲಾಖೆ ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತ ಬೋಧನಾ ಆಸ್ಪತ್ರೆ ಇವರುಗಳ ಸಹಯೋಗದಲ್ಲಿ ಭಾನುವಾರ ನಗರದ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲರಿಗೂ ಶಾಂತಿ, ನೆಮ್ಮದಿ ದೊರಕಬೇಕು ಎಂದು ಬಯಸುವ ನಮ್ಮ ದೇಶ ಪ್ರಪಂಚಕ್ಕೆ ಒಳ್ಳೆಯ ಸಂಗತಿಗಳನ್ನು ನೀಡುವ ಕೆಲಸ ಮಾಡುತ್ತಾ ಬಂದಿದೆ. ಕೊರೋನಾದಂತಹ ಸಂದರ್ಭದಲ್ಲಿ ನಮ್ಮದೇಶ ಇತರ ದೇಶಗಳಿಗೆ ಲಸಿಕೆಯನ್ನು ಹಂಚಿದೆ. ಅದೇ ರೀತಿ ಉತ್ತಮ ಅಂಶಗಳನ್ನು ನೀಡುತ್ತಾ ಬಂದಿದ್ದೇವೆ ಎಂದರು.

ಮುಂದಿನ ವರ್ಷ ಯೋಗ ದಿನಾಚರಣೆಗೂ ಮುನ್ನ ಶಿವಮೊಗ್ಗದಲ್ಲಿ ರಾಷ್ಟ್ರಮಟ್ಟದ ಯೋಗ ಸ್ಪರ್ಧೆಯನ್ನು ಏರ್ಪಡಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ. ಇದರಿಂದ ಯೋಗವನ್ನು ಜನರಿಗೆ ಇನ್ನಷ್ಟು ಹತ್ತಿರ ಮಾಡಲಾಗುತ್ತದೆ ಎಂದರು.

ವಿಧಾನ ಪರಿಷತ್ ಶಾಸಕರಾದ ಡಿ.ಎಸ್.ಅರುಣ್ ಮಾತನಾಡಿ, ಇಂದು 190ಕ್ಕೂ ಹೆಚ್ಚು ದೇಶಗಳಲ್ಲಿ ಯೋಗ ದಿನ ಆಚರಿಸುತ್ತಿರುವುದು ಹೆಮ್ಮೆಯ ವಿಷಯ. ದೇಹ, ಮನಸ್ಸು ಮತ್ತು ಆತ್ಮವನ್ನು ಸಮತೋಲನದಲ್ಲಿರುವ ಯೋಗವನ್ನು ನಾವೆಲ್ಲರೂ ಅಭ್ಯಾಸ ಮಾಡಬೇಕಿದೆ. ಸಂಸ್ಕೃತಿ ಉಳಿಯಬೇಕಾದರೆ ನಮ್ಮ ಪರಂಪರೆ, ನಮ್ಮ ನಂಬಿಕೆಗಳು ಉಳಿಯಬೇಕು. ಇಂತಹ ಸಂಸ್ಕೃತಿಯನ್ನು ನಾವು ವಿಶ್ವಕ್ಕೆ ಹಂಚುತ್ತಿದ್ದೇವೆ. ಪ್ರಧಾನಿ ಮೋದಿಯವರು ಇಂದು ಕೋಲ್ಕತ್ತಾದಲ್ಲಿ 1 ಲಕ್ಷಕ್ಕೂ ಅಧಿಕ ಜನರೊಂದಿಗೆ ಯೋಗಾಭ್ಯಾಸ ಮಾಡಿದ್ದಾರೆ ಎಂದರು.

2047ಕ್ಕೆ ನಮ್ಮ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರ ಆಗಲಿದೆ. ಈ ನಿಟ್ಟಿನಲ್ಲಿ ನಮ್ಮ ಮತ್ತು ದೇಶದ ಆರೋಗ್ಯ ಮಹತ್ವದ ಪಾತ್ರ ವಹಿಸುತ್ತದೆ. ಆರೋಗ್ಯಯುತ ನಾಗರಿಕರೊಂದಿಗೆ, ಆರೋಗ್ಯಕರ ಬೆಳವಣಿಗೆಯೊಂದಿಗೆ ದೇಶ ಆರೋಗ್ಯಕರವಾಗಿರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಪರ ಜಿಲ್ಲಾಧಿಕಾರಿ ಅಭಿಷೇಕ್ ವಿ. ಮಾತನಾಡಿ, ಯೋಗ ಭಾರತದ ಶಕ್ತಿ. ಹಾಗೂ ನಾವು ಪ್ರಪಂಚಕ್ಕೆ ನೀಡಿದ ಕೊಡುಗೆ. ಇಂತಹ ಪ್ರಾಚೀನ ವಿಜ್ಞಾನವನ್ನು ಕೊಡುಗೆ ನೀಡಿರುವುದು ಹೆಮ್ಮೆಯ ವಿಷಯವಾಗಿದ್ದು ಇದು ಎಲ್ಲರ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಸಹಕಾರಿಯಾಗಿದೆ ಎಂದರು.

ತೀರ್ಥಹಳ್ಳಿ ವೈದ್ಯಾಧಿಕಾರಿ ಡಾ. ರವಿಶಂಕರ್ ಉಡುವ ಪ್ರಾಸ್ತಾವಿಕವಾಗಿ ಮಾತನಾಡಿ, ಯೋಗ ಒಂದು ಅದ್ಭುತ ವಿಜ್ಞಾನ. ಇದಕ್ಕೆ 5000 ವರ್ಷಗಳ ಇತಿಹಾಸವಿದೆ. ಹಿಂದೆ ಯೋಗಿಗಳು ಮಾನಸಿಕ ಸ್ಥೈರ್ಯ ಮತ್ತು ಆಧ್ಯಾತ್ಮ ಸಾಧನೆ ಮಾಡಲು ಇದನ್ನು ಅಭ್ಯಾಸ ಮಾಡುತ್ತಿದ್ದರು. ನಂತರದಲ್ಲಿ ಪತಂಜಲಿ ಗುರುಗಳು ಸಾಮಾನ್ಯರೂ ಈ ಅಭ್ಯಾಸ ಮಾಡಲು ಅಷ್ಟಾಂಗ ಯೋಗ ಪರಿಚಯಿಸಿದರು. ಅದ್ದರಿಂದ ಇವರನ್ನು ಯೋಗದ ಪಿತಾಮಹ ಎಂದು ಕರೆಯಲಾಗುತ್ತದೆ ಎಂದರು.

ಬಾಪೂಜಿ ಆಯುರ್ವೇದ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯರು ಯೋಗ ನೃತ್ಯ ಪ್ರದರ್ಶಿಸಿದರು. ಯೋಗ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಹಾಗೂ ಯೋಗಾಭ್ಯಾಸದಲ್ಲಿ ಸಾಧನೆ ಮಾಡಿದ ಅಭ್ಯರ್ಥಿಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಆಯುಷ್ ಅಧಿಕಾರಿ ಡಾ.ಲಿಂಗರಾಜ್ ಹಿಂಡಸಗಟ್ಟಿ, ಡಿಡಿಪಿಐ ಮಂಜುನಾಥ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರೇಖ್ಯಾನಾಯ್ಕ್, ಕೆಎಸ್‌ಆರ್‌ಪಿ ಡೆಪ್ಯುಟಿ ಕಮಾಂಡೆಂಟ್ ಮಂಜುನಾಥ್ ಆಣತಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆಯ ಪ್ರಾಚಾರ್ಯರಾದ ಡಾ. ವೀಣಾ ಎಂ.ಎಸ್, ಬಾಪೂಜಿ ಆಯುರ್ವೇದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಶೀಲಾ, ಡಾ.ಮಹೇಶ್ ಇದ್ದರು.



ಶಿವಮೊಗ್ಗ : ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಭಾನುವಾರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಯೋಗ ಸಾಧಕರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಶಾಸಕರಾದ ಚನ್ನಬಸಪ್ಪ, ಡಿ.ಎಸ್. ಅರುಣ್, ಡಾ. ಧನಂಜಯ್ ಸರ್ಜಿ, ರಾಜ್ಯ ಪ್ರಕೋಷ್ಠಗಳ ಸಂಯೋಜಕ ಎಸ್. ದತ್ತಾತ್ರಿ, ನಗರಾಧ್ಯಕ್ಷ ಮೋಹನ್ ರೆಡ್ಡಿ, ಮಾಜಿ ಶಾಸಕ ಆರ್.ಕೆ. ಸಿದ್ದರಾಮಣ್ಣ ಇದ್ದರು.

ಶ್ರೀ ರೇಣುಕಾಂಬಾ ದೇವಿ ದೇವಸ್ಥಾನದ ಕಾಣಿಕೆ ಹುಂಡಿ ನಾಣ್ಯಗಳ ಎಣಿಕೆ ಕಾರ್ಯ



• **ಚಂದ್ರಗುತ್ತಿ :** ಪುರಾಣ ಹಾಗೂ ಐತಿಹಾಸಿಕ ಪ್ರಸಿದ್ಧ ಚಂದ್ರಗುತ್ತಿ ಶ್ರೀ ರೇಣುಕಾಂಬಾ ದೇವಿ ದೇವಸ್ಥಾನದ ಕಾಣಿಕೆ ಹುಂಡಿ ನಾಣ್ಯಗಳ ಎಣಿಕೆ ಕಾರ್ಯವನ್ನು ಶನಿವಾರ ಆಡಳಿತ ಮಂಡಳಿಯ ಕಚೇರಿಯಲ್ಲಿ ನಡೆಯಿತು.

ದೇವಸ್ಥಾನದ ಕಾರ್ಯನಿರ್ವಾಹಕಾಧಿಕಾರಿ ಪ್ರಮೀಳಾ ಕುಮಾರಿ ಸಮ್ಮುಖದಲ್ಲಿ ಭಕ್ತಾದಿಗಳು ಹುಣ್ಣಿಮೆ ಹಾಗೂ ವಿಶೇಷ ದಿನಗಳ ಸಂದರ್ಭದಲ್ಲಿ ದೇವಿಗೆ ಸಮರ್ಪಿಸಿದ್ದ ಕಾಣಿಕೆ ಹುಂಡಿಯ ನಾಣ್ಯಗಳ ಎಣಿಕೆ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಕಳೆದ 10 ದಿನಗಳ ಹಿಂದೆಯಷ್ಟೇ ದೇವಸ್ಥಾನದ ಕಾಣಿಕೆ ಹುಂಡಿಯ ನೋಟುಗಳನ್ನು ಎಣಿಕೆ ಮಾಡಲಾಗಿತ್ತು. ಆ ಸಂದರ್ಭದಲ್ಲಿ 33,90,580 ರೂ. ನಗದು ಸಂಗ್ರಹವಾಗಿತ್ತು. ಇದರ ಮುಂದುವರಿದ ಭಾಗವಾಗಿ ಶನಿವಾರ ನಾಣ್ಯಗಳ ಎಣಿಕೆಕಾರ್ಯ ನಡೆಸಲಾಗಿದ್ದು, ಸುಮಾರು 2,29,60 ರೂ ನಾಣ್ಯಗಳು ಸಂಗ್ರಹವಾಗಿದೆ ಎಂದು ದೇವಸ್ಥಾನದ ಇ.ಒ ಪ್ರಮೀಳಾ ಕುಮಾರಿ ತಿಳಿಸಿದ್ದಾರೆ.

ನಾಣ್ಯಗಳ ಎಣಿಕೆ ಕಾರ್ಯ ನಡೆಯುತ್ತಿದ್ದ ಕೊಠಡಿಯಸುತ್ತಲೂ ಮುನ್ನೆಚ್ಚರಿಕಾಕ್ರಮವಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಎಣಿಕೆ ಕಾರ್ಯದಲ್ಲಿ ಮುಜರಾಯಿ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾಮ ಲೆಕ್ಕಿಗರು, ಗ್ರಾಮ ಸಹಾಯಕರು ಹಾಗೂ ದೇವಸ್ಥಾನದ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು. ಸ್ಥಳೀಯ ಪೊಲೀಸ್ ಠಾಣೆಯ ನಾಗೇಶ್ ಮತ್ತು ಪ್ರದೀಪ್ ಸ್ಥಳದಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ಜೂ.23ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

• **ಶಿವಮೊಗ್ಗ :** ತಾಲೂಕಿನ ಗಾಜನೂರು 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿದ್ದು ಜೂ. 23 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಗಾಜನೂರು, ಕ್ಯಾಂಪ್ ಮತ್ತು ಡ್ಯಾಂ, ಸಕ್ರೆಬೈಲು, ನವೋದಯ ಶಾಲೆ, ಶಿವಮೊಗ್ಗ ಕುಡಿಯುವ ನೀರಿನ ಸ್ಥಾವರ, ಹಾಲಲಕ್ಕವಳ್ಳಿ, ಕಡೆಕಲ್, ಯರಗನಾಳ್, ಕುಸ್ಕೂರು, ವೀರಾಪುರ, ತಟ್ಟೆಕೆರೆ, ಹೊಸಕೊಪ್ಪ, ಇಂದಿರಾನಗರ ಹೊಸಹಳ್ಳಿ, ಮುಳ್ಳೆರೆ, ಅನೆಬಿಡಾರ, ತಿಮ್ಮಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಒತ್ತಡ ನಿಯಂತ್ರಿಸಲು ಯೋಗ ಸಹಕಾರಿ: ಹೆಚ್.ಆರ್. ಸುರೇಶ್

• **ಹೊಸನಗರ:** ಯೋಗವು ಕೇವಲ ದೈಹಿಕ ಕಸರತ್ತು ಮಾಡುವುದು ಮಾತ್ರವಲ್ಲ, ಯೋಗ ಮಾಡುವುದರಿಂದ ದೇಹ, ಮನಸ್ಸು ಮತ್ತು ಆಧ್ಯಾತ್ಮವನ್ನು ಬೆಸೆಯುವ ಶಕ್ತಿಯಾಗಿ ಪರಿವರ್ತನೆಯಾಗಿದೆ ಎಂದು ಮಾವಿನಕೊಪ್ಪ ಸರ್ಕಾರಿ ಪ್ರಾಥಮಿಕ ಪಾಠ ಶಾಲೆಯ ಮುಖ್ಯೋಪಾಧ್ಯಾಯ ಹೆಚ್. ಆರ್. ಸುರೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಭಾನುವಾರ ರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಶಾಲೆಯ ವಿದ್ಯಾರ್ಥಿಗಳಿಗೆ ಯೋಗ ತರಬೇತಿ ನಡೆಸಿ ಅವರು ಮಾತನಾಡಿದರು.



ಯೋಗವು ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆ ಯನ್ನು ಇಡೀ ಜಗತ್ತಿಗೆ ತಲುಪಿಸಿದ ಹೆಮ್ಮೆ ನಮ್ಮದಾಗಿದೆ. ನಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ನಿರಂತರ ಹವ್ಯಾಸವಾಗಿಸಿಕೊಂಡು ಮಾನಸಿಕ ಒತ್ತಡಗಳಿಂದ ಮುಕ್ತರಾಗಿ ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸಲು ಪಣ ತೊಡೋಣ ಎಂದು ಕರೆ ನೀಡಿದರು.

ವಿದ್ಯಾರ್ಥಿಗಳು ಅತ್ಯಂತ ಶ್ರದ್ಧೆ ಮತ್ತು ಉತ್ಸಾಹದಿಂದ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಿಕ್ಷಕರಾದ ಆರ್. ಸುರೇಶ್, ವೇದಾವತಿ, ರಾಧ, ಶರ್ಮದಾ, ಸವಿತಾ, ರಕ್ಷಿತಾ, ಆಶಾ, ಶಿಲ್ಪಾ, ಎಸ್‌ಡಿಎಂಸಿ ಅಧ್ಯಕ್ಷ ಗುರುರಾಜ್ ಆರ್. ಉಪಸ್ಥಿತರಿದ್ದರು.

ಕುಮುದ್ವತಿ ನದಿ ಉಗಮ ಸ್ಥಾನದಲ್ಲಿ ಸ್ವಚ್ಛ ಭಾರತ್ ಅಭಿಯಾನ

• **ಹುಂಚ :** ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಯಶಸ್ವಿ ಆಡಳಿತದ ಅಂಗವಾಗಿ ಭಾರತೀಯ ಜನತಾ ಪಾರ್ಟಿ ಯುವ ಮೋರ್ಚಾ ವತಿಯಿಂದ ಹುಂಚದ ಕುಮುದ್ವತಿ ನದಿ ಉಗಮ ಸ್ಥಾನದಲ್ಲಿ ಸ್ವಚ್ಛ ಭಾರತ್ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಹುಂಚ ಹೋಬಳಿ ಯುವ ಮೋರ್ಚಾ ಅಧ್ಯಕ್ಷ ಆಕಾಶ್ ಕಲ್ಲೂರು ನೇತೃತ್ವದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ಯುವ ಮೋರ್ಚಾ ಕಾರ್ಯಕರ್ತರು ಉಗಮ ಸ್ಥಳದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿ ಪರಿಸರ ಸಂರಕ್ಷಣೆ ಹಾಗೂ ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ್ ಪರಿಕಲ್ಪನೆಯನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಕಾರ್ಯಕರ್ತರು ಸ್ವಚ್ಛತೆಯ ಮಹತ್ವವನ್ನು ತಿಳಿಸಿದರು. ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವ ಹೊಂದಿರುವ ಕುಮುದ್ವತಿ ನದಿ ಉಗಮ ಸ್ಥಾನವನ್ನು ಸ್ವಚ್ಛಗೊಳಿಸುವ



ಮೂಲಕ ಪರಿಸರ ಸಂರಕ್ಷಣೆಯ ಸಂದೇಶವನ್ನು ಸಾರಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಯುವ ಮೋರ್ಚಾ ಅಧ್ಯಕ್ಷ ವಿಶ್ವನಾಥ್ ಗಂಧ್ರಹಳ್ಳಿ, ಜಿಲ್ಲಾ ಯುವ ಮೋರ್ಚಾದ ದೇವರಾಜ್ ಹೆಗ್ಗರವಳ್ಳಿ, ತಾಲೂಕು ಕಾರ್ಯದರ್ಶಿ ಅಭಿಲಾಷ್ ಹುಂಚ, ಚರಣ್ ಹುಂಚ ಹಾಗೂ ಮಂಜುನಾಥ್ ಗುಳಿಗದ್ದೆ, ದಿನೇಶ್ ಕಲ್ಲುಕೊಪ್ಪ ಮತ್ತು ಗಣೇಶ್ ನಾಯ್ಕ್, ನಿರಂಜನ್, ಮಂಜುನಾಥ್, ಶ್ರೀನಿವಾಸ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಸ್ವಚ್ಛತಾ ಅಭಿಯಾನ ಯಶಸ್ವಿಯಾಗಿ ನೆರವೇರಿದ್ದು, ಸ್ಥಳೀಯ ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರವಾಯಿತು.

ಯೋಗ ದಿನಾಚರಣೆ ಉದ್ಘಾಟಿಸಿದ ನಗರಸಭೆ ಮಾಜಿ ಅಧ್ಯಕ್ಷ ಟಿ.ಡಿ. ಮೇಘರಾಜ್

ಯೋಗದಿಂದಾಗಿ ಜಗತ್ತು ಭಾರತದತ್ತ ನೋಡುವಂತಾಗಿದೆ

• **ಸಾಗರ :** ಯೋಗದ ಮಹತ್ವವನ್ನು ವಿಶ್ವಕ್ಕೆ ತೋರಿಸುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿಯವರು ಮಾಡಿದ್ದಾರೆ. ಯೋಗಕ್ಕೆ ಜಗತ್ತಿನಲ್ಲಿ ಅತಿಹೆಚ್ಚು ಮಹತ್ವ ಸಿಕ್ಕಿದ್ದು ಜಗತ್ತು ಭಾರತದ ಕಡೆ ನೋಡುವಂತೆ ಆಗಿದೆ ಎಂದು ನಗರಸಭೆ ಮಾಜಿ ಅಧ್ಯಕ್ಷ ಟಿ.ಡಿ.ಮೇಘರಾಜ್ ತಿಳಿಸಿದರು.

ಇಲ್ಲಿನ ಶೃಂಗೇರಿ ಶಂಕರಮಠ, ಜೋಷಿ ಫೌಂಡೇಶನ್, ಲಯನ್ಸ್ ಕ್ಲಬ್ ಹಾಗೂ ವಿವಿಧ ಯೋಗ ಕೇಂದ್ರಗಳ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಯೋಗ ದಿನಾಚರಣೆ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಭಾರತದ ಜೀವನ ಪದ್ಧತಿಯನ್ನು, ಪರಂಪರೆಯನ್ನು ಜಗತ್ತಿಗೆ ಪರಿಚಯಿಸಿದ ಪ್ರಧಾನ ಮಂತ್ರಿಗಳಿಗೆ ನಾವು ಕೃತಜ್ಞತೆ ಸಲ್ಲಿಸಬೇಕು. ಕಲುಷಿತ ವಾತಾವರಣ, ಆಹಾರ ಸೇವನೆಯಿಂದ ಮನುಷ್ಯ ಅನಾರೋಗ್ಯದ ಕಡೆ ಸಾಗುತ್ತಿದ್ದಾನೆ. ಔಷಧಿಯ ನೆರವಿಲ್ಲದೆ ಅನೇಕ ಕಾಯಿಲೆಗಳಿಗೆ ಯೋಗ ರಾಮಬಾಣ



ಎನ್ನುವುದು ಸಾಬೀತಾಗಿದೆ. ಇಂತಹ ಹೊತ್ತಿನಲ್ಲಿ ಯೋಗ ದಿನಾಚರಣೆ ಮೂಲಕ ಯೋಗವನ್ನು ಜನರ ಬಳಿಗೆ ಒಯ್ಯುವ ಎಲ್ಲರ ಪ್ರಯತ್ನ ಸ್ವಾಗತಾರ್ಹವಾದದ್ದು. ಯೋಗ ಸಾಧನೆ ಮಾಡುವವರನ್ನು ಸನ್ಮಾನಿಸುವುದರಿಂದ ಇನ್ನಷ್ಟು ಜನ ಯೋಗಾಭ್ಯಾಸದ ಕಡೆ ಉತ್ತೇಜಿತರಾಗುತ್ತಾರೆ ಎಂದು ಹೇಳಿದರು.

ಸಾಧಕ ಯೋಗಪಟುಗಳನ್ನು ಸನ್ಮಾನಿಸಿ ಮಾತನಾಡಿದ ನ್ಯಾಯವಾದಿ ನಾಗರಾಜ್ ಒತ್ತಡದಿಂದಾಗಿ ಇರಲು ಯೋಗ ಅಗತ್ಯ. ಮಾನಸಿಕ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗಾಭ್ಯಾಸದ ಕಡೆ ಹೋಗುವ ಸಂಕಲ್ಪ ಕೈಗೊಳ್ಳಬೇಕು. ನಮಗೆ ಯಾವುದು ಆರೋಗ್ಯದ ಕಡೆ ಕರೆಯ್ಯುತ್ತದೆಯೋ ಅಂತಹ ಮಾರ್ಗವನ್ನು ನಾವು ಅಗತ್ಯವಾಗಿ ಅನುಸರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶೃಂಗೇರಿ ಶಂಕರಮಠದ ಧರ್ಮದರ್ಶಿ ಅಶ್ವಿನಿ ಕುಮಾರ್, ಸತತ 12 ವರ್ಷಗಳಿಂದ ಯೋಗದಿನ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ ಎಂದರೆ ಅದಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಕಾರಣ. ಈ ನಿಟ್ಟಿನಲ್ಲಿಯೇ ಭಾರತ ವಿಶ್ವಗುರುವಾಗಿ, ಮೋದಿಯವರು ವಿಶ್ವನಾಯಕರಾಗಿ ಗುರುತಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲಯನ್ ದಿನೇಶಕುಮಾರ್ ಜೋಷಿ, ಟಿ.ವಿ.ಪಾಂಡುರಂಗ, ಲಯನ್ ದಿನೇಶ ಕುಮಾರ್ ಜೋಷಿ ಮಾತನಾಡಿದರು. ಯೋಗ ಸಾಧಕರಾದ ಅಕ್ಷತಾ ಕೆ.ಎಸ್., ಜಯಶ್ರೀ ವೈ. ಎಸ್., ಪ್ರವೀಣ್ ಕೆ. ರಾಯ್ಕರ್, ತಿಮ್ಮಪ್ಪ ಎಚ್.ಎಚ್., ಸೀತಾರಾಮ್ ಪಟಗಾರ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಜಿ.ಎಚ್.ಕೃಷ್ಣಮೂರ್ತಿ, ಪ್ರಸನ್ನ ಜಿ.ಕೆ., ಪಾಂಡುರಂಗ ಟಿ.ಆರ್., ನೇತ್ರಾ ಉಡುಪ, ಎಚ್.ಎ.ಮಂಜಪ್ಪ, ಕುಮಾರ್, ಜ್ಯೋತಿ ಶಶಿಕಾಂತ್, ರಾಜೇಶ್ ಉಪಸ್ಥಿತರಿದ್ದರು. ಮ.ಸ.ನಂಜುಂಡಸ್ವಾಮಿ ಸ್ವಾಗತಿಸಿ, ಜಿ.ಕೆ.ಕೃಷ್ಣಮೂರ್ತಿ ವಂದಿಸಿದರು. ನಾರಾಯಣಮೂರ್ತಿ ನಿರೂಪಿಸಿದರು.

ದೈಹಿಕ ಶಿಕ್ಷಕರ ಪಾತ್ರ ಬಹು ಮುಖ್ಯ: ಲೋಕೇಶ್ವರಪ್ಪ

• **ಶಿಕಾರಿಪುರ:** ಪಠ್ಯದ ಜತೆ ಪಠ್ಯೇತರ ಚಟುವಟಿಕೆಯು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಅತ್ಯಗತ್ಯವಾಗಿದ್ದು, ಶಿಕ್ಷಣಕ್ಕೆ ಸಮಾನ ಮಹತ್ವ ಹೊಂದಿರುವ ಕ್ರೀಡಾ ಚಟುವಟಿಕೆ ಬಗ್ಗೆ ಮಕ್ಕಳಲ್ಲಿ ಆಸಕ್ತಿಯನ್ನು ಹೆಚ್ಚಿಸುವಲ್ಲಿ ದೈಹಿಕ ಶಿಕ್ಷಕರ ಪಾತ್ರ ಬಹು ಮುಖ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್ವರಪ್ಪ ತಿಳಿಸಿದರು.

ಪಟ್ಟಣದ ಬಾಪೂಜಿ ಶಿಕ್ಷಣ ಸಂಸ್ಥೆಯಲ್ಲಿ ದೈಹಿಕ ಶಿಕ್ಷಕರ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ ಕಾಂತರಾಜ್ ಶಿವಶಂಕರಪ್ಪನವರ ಅಭಿನಂದನಾ ಸಮಾರಂಭ ಶನಿವಾರ ಆಯೋಜಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪಠ್ಯದ ಜತೆ ಚಟುವಟಿಕೆಯಲ್ಲಿ ಮಕ್ಕಳ ಸಾಧನೆಗೆ ದೈಹಿಕ ಶಿಕ್ಷಕರ ನಿಸ್ವಾರ್ಥ ಸೇವೆ ಅತ್ಯಂತ ಪ್ರಮುಖ ಪಾತ್ರ ವಹಿಸಲಿದ್ದು, ಕ್ರೀಡಾ ಚಟುವಟಿಕೆಯಲ್ಲಿ ಮಕ್ಕಳ ಉನ್ನತ ಮಟ್ಟದ ಸಾಧನೆಯು ದೈಹಿಕ ಶಿಕ್ಷಕ ಶ್ರಮಕ್ಕೆ ಸಂದ ಕೊಡುಗೆಯಾಗಿದ್ದು ಎಂದ ಅವರು ಈ ದಿಸೆಯಲ್ಲಿ ಕಾಂತರಾಜ್



ಸುದೀರ್ಘ ಕಾಲದಿಂದ ಬಾಪೂಜಿ ಶಿಕ್ಷಣ ಸಂಸ್ಥೆಯಲ್ಲಿ ದೈಹಿಕ ಶಿಕ್ಷಕರಾಗಿ ಹಲವು ಕ್ರೀಡಾ ಪ್ರತಿಭೆಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಸಾಧನಾ ಅಕಾಡೆಮಿ ಸಂಸ್ಥಾಪಕ, ಉಪನ್ಯಾಸಕ ಕೆ.ಪಿ ಮಂಜುನಾಥ್ ಮಾತನಾಡಿ, ಕಾಂತರಾಜ್ ಅವರು ಶಿಸ್ತಿನ ವ್ಯಕ್ತಿ ಮೂಲಕ ಸಾವಿರಾರು ವಿದ್ಯಾರ್ಥಿಗಳನ್ನು ವೃತ್ತಿಪರರನ್ನಾಗಿಸಿದ ಹಿರಿಮೆ ಹೊಂದಿದ್ದಾರೆ. ಇದರಿಂದಾಗಿ ಶಿಕ್ಷಣದಲ್ಲಿ ಮಕ್ಕಳು ಸ್ವರ್ಧಾತ್ಮಕ ಮನೋಭಾವನೆ ಮೂಲಕ ಸಾಧನೆಯ ಛಲಕ್ಕೆ ಪ್ರೇರಣೆ ನೀಡಿದ್ದಾರೆ ಎಂದು ಪ್ರಶಂಸಿಸಿದರು.

ಬಾಪೂಜಿ ವಿದ್ಯಾ ಸಂಸ್ಥೆ ಸಂಸ್ಥಾಪಕ ಬಿ.ಪಾಪಯ್ಯ ವಹಿಸಿ ಮಾತನಾಡಿದರು. ನಿವೃತ್ತ ದೈಹಿಕ ಶಿಕ್ಷಕ ಕಾಂತರಾಜ್ ದಂಪತಿಗಳನ್ನು ಸಂಸ್ಥೆ ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು. ಸಂಸ್ಥೆ ಕಾರ್ಯದರ್ಶಿ ಪವಿತ್ರ, ಪಪ್ಪು, ಮುಖ್ಯೋಪಾಧ್ಯಾಯ ರಾಘವೇಂದ್ರ ಕುರಕರ್ಣ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ರವಿಕುಮಾರ್, ಅಶೋಕ್ ಕುಮಾರ್, ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ್, ದೈಹಿಕ ಶಿಕ್ಷಣ ಪರಿವೀಕ್ಷಕ ಅಸ್ಲಾಂ ಖಾನ್ ಮತ್ತಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ವಿವಿಧ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಹಿರಿಯೂರು: ನಗರಸಭೆ ವ್ಯಾಪ್ತಿಯ ಸಾರ್ವಜನಿಕರಿಗೆ 2024-25ನೇ ಸಾಲಿನ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4ರ ಅಡಿಯಲ್ಲಿ ವಿವಿಧ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಜೂನ್ 30 ಅರ್ಜಿ ಸಲ್ಲಿಸಲು ಕೊನೆಯ ದಿನ. ಈ ಯೋಜನೆಯಡಿ ನಿಗದಿಪಡಿಸಲಾದ ಶೇ.24.10, ಶೇ.7.25 ಮತ್ತು ಶೇ.5ರ ಹಾಗೂ ಮೀಸಲಿಟ್ಟ ಅನುದಾನದಲ್ಲಿ ಹಿರಿಯೂರು ನಗರ ವ್ಯಾಪ್ತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಜನಾಂಗದ ವಿದ್ಯಾರ್ಥಿಗಳಿಗೆ ವಿಶೇಷ ಆರ್ಥಿಕ ನೆರವು ನೀಡಲಾಗುತ್ತದೆ.

ಸರ್ಕಾರಿ ಅಥವಾ ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಎಂಬಿಬಿಎಸ್ ಹಾಗೂ ಬಿ.ಇ ವ್ಯಾಸಂಗಕ್ಕಾಗಿ ಸೀಟು ಪಡೆದಿರುವ ವಿದ್ಯಾರ್ಥಿಗಳಿಗೆ ಶೇ.50ರಷ್ಟು ಪ್ರವೇಶ ಶುಲ್ಕವನ್ನು ಭರಿಸಲಾಗುವುದು. ಇದರೊಂದಿಗೆ, ಪರಿಶಿಷ್ಟ ಜಾತಿಯ ಸಣ್ಣ ಉದ್ದಿಮೆದಾರರಿಗೆ ಸಹಾಯಧನ ಹಾಗೂ ನಗರಸಭೆ ವ್ಯಾಪ್ತಿಯ ದಿವ್ಯಾಂಗ (ವಿಕಲಚೇತನ) ಚೇತನರಿಗೆ ತ್ರಿಚಕ್ರ ವಾಹನ ವಿತರಿಸಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅರ್ಹ ಫಲಾನುಭವಿಗಳು ಇದೇ ಜೂನ್ 19ರಿಂದ 30ರೊಳಗೆ ನಗರಸಭೆ ಕಾರ್ಯಾಲಯಕ್ಕೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಈ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹಿರಿಯೂರು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಇಂದು ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

ಚಿತ್ರದುರ್ಗ: ವಿವಿಧ ಜಯಂತಿಗಳ ಆಚರಣೆ ಸಂಬಂಧವಾಗಿ ಜೂ.22ರಂದು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಗಳನ್ನು ಕರೆಯಲಾಗಿದೆ. ಬೆಳಗ್ಗೆ 10:30ಕ್ಕೆ ನಾಡಪ್ರಭು ಕೆಂಪೇಗೌಡ ಜಯಂತಿ ಹಾಗೂ ಬೆಳಗ್ಗೆ 11 ಗಂಟೆಗೆ ಡಾ.ಫ.ಗು. ಹಳಕಟ್ಟಿ ಜನ್ಮದಿನದ ಅಂಗವಾಗಿ ಆಚರಿಸುವ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಪೂರ್ವಭಾವಿ ಸಭೆಗಳು ನಡೆಯಲಿವೆ. ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮುದಾಯದ ಮುಖಂಡರು, ಸಾರ್ವಜನಿಕರು ಆಗಮಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ. ಗುರುನಾಥ್ ಕೋರಿದ್ದಾರೆ.





ಮಾದಾರ ಶ್ರೀಗೆ ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಪ್ರಶಸ್ತಿ

ಚಿತ್ರದುರ್ಗ: ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ನೀಡಲಾಗುವ ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿಗಳ ಪೈಕಿ ಈ ಬಾರಿ ಚಿತ್ರದುರ್ಗದ ಶಿವಶರಣ ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಪೀಠಾಧ್ಯಕ್ಷರಾದ ಡಾ. ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರನ್ನು ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ನಾಡಪ್ರಭು ಕೆಂಪೇಗೌಡರ 517ನೇ ಜನ್ಮ ಜಯಂತಿ ಪ್ರಯುಕ್ತ ಜೂನ್ 27 ರಂದು ಶನಿವಾರ



ಬೆಂಗಳೂರಿನ ವಿಶ್ವ ವಿದ್ಯಾಲಯದ ಸಭಾಂಗಣದಲ್ಲಿ ನಡೆಯಲಿರುವ ಭವ್ಯ ಸಮಾರಂಭದಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಪ್ರಶಸ್ತಿ ನೀಡಿ ಗೌರವಿಸುವರು.

ಶಾರದಾ ನ್ಯಾಷನಲ್ ಶಾಲೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ

ಚಳ್ಳಕೆರೆ: ಇಲ್ಲಿನ ಶ್ರೀ ಶಾರದ ನ್ಯಾಷನಲ್ ಸ್ಕೂಲ್‌ನಲ್ಲಿ ಭಾನುವಾರ ಅಕ್ಷರಾಭ್ಯಾಸ ಕಾರ್ಯಕ್ರಮ ಭಕ್ತಿಭಾವದಿಂದ ನಡೆಯಿತು.

ಕಾರ್ಯಕ್ರಮದ ಆರಂಭದಲ್ಲಿ ವಿದ್ಯಾರ್ಥಿಗಳು ಶ್ರೀ ಶಾರದಾದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಸಂಸ್ಥೆಯ ಅಧ್ಯಕ್ಷೆ ಶಾರದಮ್ಮ, ಸಂಸ್ಥೆಯ ಕಾರ್ಯದರ್ಶಿ ಕೆ.ಎನ್. ರಂಗನಾಥ್, ಶಾಲೆಯ ಆಡಳಿತ ಅಧಿಕಾರಿ ಬಿ.ಎನ್. ಯೋಗೀಶ್, ಮುಖ್ಯಶಿಕ್ಷಕ ಟಿ. ಸಂತೋಷ್ ಕುಮಾರ್, ಶ್ರೀನಿವಾಸ ಶಾಸ್ತ್ರಿಗಳು ಹಾಗೂ ಶಾಲೆಯ ಎಲ್ಲ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



365 ದಿನವೂ ಯೋಗ ಮಾಡಿ | ಯೋಗ ದಿನಾಚರಣೆಯಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಕರೆ

ಯೋಗದಿಂದ ರೋಗ ಮುಕ್ತ ಸಮಾಜ ನಿರ್ಮಾಣ

ಚಿತ್ರದುರ್ಗ: ಯೋಗದಿಂದ ವೈಯಕ್ತಿಕ ಆರೋಗ್ಯ ಜೊತೆಗೆ, ರೋಗ ಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಹೇಳಿದರು.

ನಗರದ ಮುರುಘರಾಜೇಂದ್ರ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಬಾರಿಯ ಯೋಗ ದಿನಾಚರಣೆ ಘೋಷ ವಾಕ್ಯ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬುದು ಅತ್ಯಂತ ಅರ್ಥಪೂರ್ಣವಾಗಿದೆ. ಯೌವ್ವನ ಹಾಗೂ ಮಧ್ಯ ವಯಸ್ಸಿನಲ್ಲಿ ಇರುವಾಗ ನಾವು ದೈಹಿಕ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸುವುದಿಲ್ಲ, ಆದರೆ ವಯಸ್ಸಾದ ನಂತರ ಎದುರಾಗುವ ಹತ್ತು ಹಲವು ಆರೋಗ್ಯ ಸಮಸ್ಯೆಗಳಿಂದಾಗಿ ನೆಮ್ಮದಿ ಕಳೆದುಕೊಳ್ಳುತ್ತೇವೆ ಎಂದರು.

ಜಿಲ್ಲೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಯೋಗ ಸಂಸ್ಥೆಗಳು ನಿರಂತರವಾಗಿ ಯೋಗ ಪ್ರಸಾರದಲ್ಲಿ ತೊಡಗಿವೆ. ಕೇವಲ ಜೂನ್ 21ರಂದು ಮಾತ್ರ ಯೋಗ ಮಾಡುವುದಕ್ಕೆ ಸೀಮಿತವಾಗದೆ ವರ್ಷದ 365 ದಿನಗಳೂ ಯೋಗವನ್ನು ಜೀವನದ ಭಾಗವಾಗಿಸಿಕೊಳ್ಳಬೇಕು. ಇದಕ್ಕಾಗಿ ಶಾಲಾ- ಕಾಲೇಜುಗಳ ಬೇಸಿಗೆ ರಜೆಯ ಅವಧಿಯಿಂದಲೇ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಸೂಕ್ತ ತರಬೇತಿ ನೀಡುವ ಮೂಲಕ ಮುಂದಿನ ವರ್ಷ ಕನಿಷ್ಠ 5,000 ಜನರನ್ನು ಸೇರಿಸಿ ಬೃಹತ್ ಯೋಗ ದಿನಾಚರಣೆ ಹಮ್ಮಿಕೊಳ್ಳಲು ಸಿದ್ಧತೆ ನಡೆಸಬೇಕು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಮಾತನಾಡಿ, ಯೋಗವನ್ನು ಒಂದು ದಿನದ ಆಚರಣೆಗೆ ಸೀಮಿತಗೊಳಿಸದೆ ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ರೂಢಿಸಿಕೊಳ್ಳಬೇಕು. ಬದಲಾಗುತ್ತಿರುವ ಇಂದಿನ ಜೀವನ ಶೈಲಿಯಲ್ಲಿ ಜೀವನ 20-20 ಮ್ಯಾಚ್‌ನಂತೆ ವೇಗವಾಗಿ ಬಿಟ್ಟಿದೆ. ಹಿಂದೆ ನೂರು ವರ್ಷ ಬದುಕುತ್ತಿದ್ದ ನಮಗೆ ಈಗ 50-60 ವರ್ಷ ಬದುಕುವುದು ಕಷ್ಟವಾಗುತ್ತಿದೆ. ಇನ್ನು 30 ವರ್ಷದ ಯುವಕರಿಗೆ ಹೃದಯಾಘಾತ ಹಾಗೂ ಇತರ ಕಾಯಿಲೆಗಳು ಬಲಿಯಾಗುತ್ತಿರುವುದು ಆತಂಕಕಾರಿಯಾಗಿದೆ ಎಂದರು.



- ಸುಮಾರು 45 ನಿಮಿಷ ಸಾಮೂಹಿಕ ಯೋಗಾಭ್ಯಾಸ.
- ಯೋಗ ಶಿಕ್ಷಕ ಬಸವರಾಜ ಅವರಿಂದ ಯೋಗ ಆಸನಗಳನ್ನು ಬೋಧಿಸಿದರು.
- ನಶಾ ಮುಕ್ತ ಭಾರತ ಅಭಿಯಾನದ ಮಾದಕ ಪದಾರ್ಥಗಳ ದುರ್ಬಳಕೆ ವಿರುದ್ಧ ಪ್ರತಿಜ್ಞಾ ವಿಧಿ ಬೋಧಿಸಿದ ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್.

ಆಯುಷ್ ವೈದ್ಯಾಧಿಕಾರಿ ನಾರದಮುನಿ ಪ್ರಾಸ್ತಾವಿಕವಾಗಿ ಮಾತನಾಡಿ, ಯೋಗವು ಭಾರತದ ನೆಲ ಜಗತ್ತಿಗೆ ನೀಡಿದ ಅತ್ಯಂತ ಅಮೂಲ್ಯವಾದ ಕೊಡುಗೆಯಾಗಿದೆ. ಪ್ರಸ್ತುತ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಸಾರ್ವಜನಿಕರ ಆರೋಗ್ಯ ಸುಧಾರಣೆಗಾಗಿ ಕಾರ್ಡಿಯೋ, ಕಾರ್ಸಿನೋ ಹಾಗೂ ಮಾನಸಿಕ ಯೋಗ ಎಂಬ ಶೀರ್ಷಿಕೆಗಳ ಅಡಿಯಲ್ಲಿ ವಿಶೇಷ ಜಾಗೃತಿ ಮೂಡಿಸಲಾಗುತ್ತಿದೆ. ಡಿಆರ್‌ಡಿಓ ಸಂಸ್ಥೆಯಲ್ಲಿ ವಿಜ್ಞಾನ ಯೋಗ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿದೆ. ವರ್ಷದ 365 ದಿನಗಳೂ ಯೋಗ ಮಾಡಲು ಉತ್ತೇಜನ ನೀಡುವ ಯೋಗ ಫಾರ್ 365 ಡೇಸ್ ಎಂಬ ವಿಶೇಷ ಕಾರ್ಯಕ್ರಮದಡಿ ಆನ್‌ಲೈನ್ ಲಿಂಕ್ ಮೂಲಕ ಸಾರ್ವಜನಿಕರು ಯೋಗ ಸಾಧನೆ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದರು.

> ವೃದ್ಧಾಪ್ಯದಲ್ಲಿ ಬರುವ ರೋಗಗಳಿಗಾಗಿ ಇಡೀ ಜೀವನದ ಗಳಿಕೆಯನ್ನು ಆಸ್ಪತ್ರೆಗಳಿಗೆ ವ್ಯಯಿಸುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಇದರ ಬದಲು ಆರಂಭದಲ್ಲಿ ಪ್ರತಿನಿತ್ಯ ಯೋಗ ಹಾಗೂ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಂಡರೆ ವೃದ್ಧಾಪ್ಯ ಸಂತಸಕರವಾಗಿರಲಿದೆ.
> ■ ಕೆ.ಎಸ್.ನವೀನ್, ಪರಿಷತ್ ಸದಸ್ಯ

> ಯುವಜನತೆ ಯೋಗದ ಕಡೆಗೆ ತಮ್ಮ ಮನಸ್ಸು ಹಾಗೂ ಧ್ಯಾನವನ್ನು ಹರಿಸಬೇಕು. ಯೋಗದ ಮೂಲಕ ಉತ್ತಮ ಆರೋಗ್ಯವನ್ನು ವೃದ್ಧಿಸಿಕೊಳ್ಳಲು ಸಾಧ್ಯವಿದೆ.
> ■ ಬಿ.ಟಿ. ಕುಮಾರಸ್ವಾಮಿ, ಅಪರ ಜಿಲ್ಲಾಧಿಕಾರಿ

ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಾಲತೇಶ್ ಮುದ್ದಜ್ಜಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಚಂದ್ರಕಾಂತ್ ನಾಗಸಮುದ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕಾಶಿ, ಆರ್ ಸಿಹೆಚ್ ಅಧಿಕಾರಿ ಡಾ. ಅಭಿನವ್, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಜೆ. ವೈಶಾಲಿ ಪಾಲ್ಗೊಂಡಿದ್ದರು.



ಗುಡ್ಡದರಂಗವ್ವನಹಳ್ಳಿ ಶಾಲೆಯಲ್ಲಿ ಶಾಲಾ ಸಂಸತ್ ಚುನಾವಣೆ | ಡಯಟ್ ಉಪನ್ಯಾಸಕ ಎಸ್. ಬಸವರಾಜು

ಮತದಾನದ ನೈಜ ಅನುಭವ ನೀಡುವ ಶಾಲಾ ಸಂಸತ್

ಚಿತ್ರದುರ್ಗ: ಶಾಲಾ ಸಂಸತ್ ಚುನಾವಣೆಯಿಂದ ವಿದ್ಯಾರ್ಥಿಗಳಿಗೆ ಮತದಾನ ಪ್ರಕ್ರಿಯೆಯ ನೈಜ ಅನುಭವ ದೊರೆಯಲು ಸಹಕಾರಿಯಾಗುತ್ತದೆ ಎಂದು ಡಯಟ್ (ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ) ಉಪನ್ಯಾಸಕ ಎಸ್. ಬಸವರಾಜು ಹೇಳಿದರು.

ತಾಲೂಕಿನ ಗುಡ್ಡದರಂಗವ್ವನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಶಾಲಾಸಂಸತ್ ಚುನಾವಣಾ ಪ್ರಕ್ರಿಯೆ ವೀಕ್ಷಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಶಾಲಾ ಹಂತದಲ್ಲಿ ಚುನಾವಣೆ ಪ್ರಕ್ರಿಯೆ, ಮತದಾನ, ಮತ ಎಣಿಕೆ, ಪ್ರಮಾಣ ವಚನ ಸ್ವೀಕಾರ ಪ್ರಕ್ರಿಯೆ ತಿಳಿಯಲು ಶಾಲಾ ಸಂಸತ್ ಪೂರಕವಾಗಿದೆ ಎಂದರು.

ವಿದ್ಯಾರ್ಥಿಗಳು 18 ವರ್ಷ ಪೂರ್ಣಗೊಂಡ ಬಳಿಕ



ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಮತದಾನ ನಮ್ಮ ಪವಿತ್ರ ಹಕ್ಕು ಪ್ರತಿ ಮತವೂ ಅಮೂಲ್ಯವಾಗಿದೆ. ಶಾಲಾ ಸಂಸತ್ ಚುನಾವಣೆಯಲ್ಲಿ ಭಾಗವಹಿಸಿದಂತೆ ಮತದಾನದ ಹಕ್ಕು ದೊರೆತ ನಂತರ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಪ್ಪದೇ ಮತ ಹಾಕಬೇಕು ಎಂದು ತಿಳಿಸಿದರು.

ಮುಖ್ಯ ಶಿಕ್ಷಕ ಹೆಚ್. ಗೋವಿಂದಪ್ಪ ಮಾತನಾಡಿ, ಮತದಾನ ಪ್ರಕ್ರಿಯೆಯ ಅರಿವು ಮೂಡಿಸಲು ನಾಮಪತ್ರ ಸಲ್ಲಿಕೆ, ಹಿಂತೆಗೆದುಕೊಳ್ಳುವಿಕೆ, ಚುನಾವಣಾ ಪ್ರಚಾರ, ಮತಗಟ್ಟೆ ರಚನೆ, ಮತದಾನ, ಮತ ಪತ್ರಗಳ ಬಳಕೆ, ಮತ ಎಣಿಕೆ ಮತ್ತು ಪ್ರಮಾಣ ವಚನ ಸ್ವೀಕಾರ ಪ್ರಕ್ರಿಯೆ ನಿರ್ವಹಿಸುವ ಮೂಲಕ ಚುನಾವಣಾ ಪ್ರಕ್ರಿಯೆಯ ಪರಿಕಲ್ಪನೆ ಮೂಡಿಸಲಾಗಿದೆ ಎಂದು ತಿಳಿಸಿದ್ದಲ್ಲದೇ ಶೇ.98.61ರಷ್ಟು ಮತದಾನವಾಗಿದ್ದು ಅಧಿಕ ಮತಗಳನ್ನು ಪಡೆದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು 11 ಜನರ ಶಾಲಾ ಸಂಸತ್‌ನ ಸಚಿವ ಸಂಪುಟ ರಚಿಸಲಾಗಿದೆ ಎಂದರು.

ಮತಗಟ್ಟೆ ಅಧಿಕಾರಿಗಳಾಗಿ ಶಿಕ್ಷಕರಾದ ರಶೀದಾ ಬಾನು, ಡಾ.ಎಸ್. ಸವಿತ, ಕೆ.ಎಂ.ಆರ್. ಶೋಭ, ಬಿ.ಪಿ ಕವಿತ, ಹೆಚ್.ಕೆ. ಮಹೇಶ್, ಎಂ.ಆರ್. ನಾಗರಾಜು, ವಾಣಿಶ್ರೀ ಕಾರ್ಯನಿರ್ವಹಿಸಿದರು. ದ್ವಿದ ಸಹಾಯಕ ಎಂ.ಎಸ್. ಕಿರಣ್‌ಕುಮಾರ್, ಡಿ.ದರ್ಜೆ ನೌಕರರಾದ ದೇವಮ್ಮ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಯೋಗದಿಂದ ದೈಹಿಕ, ಮಾನಸಿಕ ಆರೋಗ್ಯ: ಚೆನ್ನಕೇಶವ

ಪರಶುರಾಂಪುರ: ಗ್ರಾಮದ ಪಾವಗಡ ರಸ್ತೆಯಲ್ಲಿ ಬರುವ ಸರ್ವೋದಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಭಾನುವಾರ ಆಯೋಜಿಸಿದ್ದ ವಿಶ್ವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

ಈ ವೇಳೆಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಎಸ್. ಚೆನ್ನಕೇಶವ ಮಾತನಾಡಿ, ಯೋಗದಿಂದ ದೇಹ ಮತ್ತು ಮನಸ್ಸನ್ನು ಕೂಡಿಸಲು ಸಾಧ್ಯ. ನಾವು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿರಲು ಯೋಗ ಬೇಕು. ಇದು ಒಂದು ದಿನಕ್ಕೆ ಸೀಮಿತವಾಗದೆ ಪ್ರತಿನಿತ್ಯವೂ ಯೋಗ ಮಾಡಬೇಕು. ಊಟ ನಮ್ಮ ಜೀವನಕ್ಕೆ ಎಷ್ಟು ಮುಖ್ಯವೋ ಯೋಗವೂ ಅಷ್ಟೇ ಮುಖ್ಯ ಎಂದು ತಿಳಿಸಿದರು.

ಶಿಕ್ಷಕ ಹರೀಶ್ ಮಾತನಾಡಿ, ದಿನನಿತ್ಯ ಮಕ್ಕಳು ಯೋಗಾಭ್ಯಾಸ ಮಾಡುವುದರಿಂದ ನೆನಪಿನ ಶಕ್ತಿ ಹೆಚ್ಚುತ್ತದೆ. ಶಾಲೆಯಲ್ಲಿ ಪಠ್ಯ ಮತ್ತು ಕ್ರೀಡೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಲು ಸಹಕಾರಿ ಆಗುತ್ತದೆ. ವಿಶ್ವಕ್ಕೆ ಯೋಗ ವನ್ನು ಪರಿಚಯಿಸಿದವರು ಭಾರತೀಯರು. ಆದ್ದರಿಂದ ಇದು ಭಾರತೀಯರು ಹೆಮ್ಮೆಪಡುವ ದಿನ ಎಂದು ಹೇಳಿದರು.

ಶಾಲೆಯ ಸಿಬ್ಬಂದಿಗಳಾದ ಹರೀಶ್, ಪಂಚಾಕ್ಷರಪ್ಪ, ಶಾಂತಕುಮಾರ್, ಶ್ರೀಶೈಲ ಮೂರ್ತಿ, ಅಶ್ವಿನಿ ಉಪಸ್ಥಿತರಿದ್ದರು.



ವ್ಯಕ್ತಿತ್ವ ವಿಕಸನಕ್ಕೆ ಯೋಗ ಮುಖ್ಯ: ಯೋಗಪಟು ತಿಪ್ಪೇಸ್ವಾಮಿ ಭರಮಸಾಗರ

ಚಿತ್ರದುರ್ಗ: 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಭಾರತೀಯ ಯೋಗ ಶಿಕ್ಷಣ ಸಂಸ್ಥೆ ನಗರದ ಹುರುಳಿನೂರು ರಸ್ತೆಯ ಭಾನುವಾರ ಮಹಿಳೆಯರಿಗಾಗಿ ಯೋಗಾಸನ ಸ್ಪರ್ಧೆ ಏರ್ಪಡಿಸಿದ್ದರು.

ಸ್ಪರ್ಧೆಯ ತೀರ್ಪುಗಾರರಾಗಿ ಭಾಗವಹಿಸಿದ್ದ ಹಿರಿಯ ಯೋಗಪಟು ತಿಪ್ಪೇಸ್ವಾಮಿ ಭರಮಸಾಗರ ಮಾತನಾಡಿ, ಯೋಗಾಸನ ಸ್ಪರ್ಧೆಗಳು ಕೇವಲ ಬಹುಮಾನ ಗೆಲ್ಲುವುದಕ್ಕೆ ಮಾತ್ರ ಸೀಮಿತವಲ್ಲ, ವ್ಯಕ್ತಿತ್ವ ವಿಕಸನ ಮತ್ತು ಯೋಗದ ಪ್ರಚಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾರ್ವಜನಿಕವಾಗಿ ಇಂತಹ ಸ್ಪರ್ಧೆಗಳು ನಡೆದಾಗ ಸಾಮಾನ್ಯ ಜನರಲ್ಲಿ ಯೋಗದ ಬಗ್ಗೆ ಆಸಕ್ತಿ ಮೂಡುತ್ತದೆ ಎಂದರು.



ವಿಶಾಲ ಸಮಾಜಕ್ಕೆ ಯೋಗದ ವಿವಿಧ ಆಸನಗಳು ಮತ್ತು ಅದರ ಸೌಂದರ್ಯ ಪರಿಚಯಿಸಲು ಇವು ಅತ್ಯುತ್ತಮ ವೇದಿಕೆಗಳಾಗಿವೆ. ಗೆಲುವು-ಸೋಲುಗಳನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ಯೋಗ ಸ್ಪರ್ಧೆಗಳು ಕಲಿಸುತ್ತವೆ. ಕೇವಲ ಗೆಲ್ಲುವುದಷ್ಟೇ ಅಲ್ಲ, ಇತರರ ಪ್ರತಿಭೆಯನ್ನು ಗೌರವಿಸುವ ಮತ್ತು ಅವರಿಂದ ಕಲಿಯುವ ಮನೋಭಾವ ಬೆಳೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಯೋಗಾಸನ ಸ್ಪರ್ಧೆಗಳ ಆಯೋಜಕರಾದ ಭಾರತೀಯ ಯೋಗ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ಯೋಗ ಶಿಕ್ಷಕ ರವಿ ಕೆ. ಅಂಬೇಕರ್ ಮಾತನಾಡಿದರು.

18 ರಿಂದ 45 ವರ್ಷದೊಳಗಿನ ಸ್ಪರ್ಧಾ ವಿಭಾಗದಲ್ಲಿ ಪ್ರಥಮ ಬಹುಮಾನ ಅನಿತಾ, ದ್ವಿತೀಯ ಅರುಣ ಹಾಗೂ ತೃತೀಯ ಬಹುಮಾನ ರಮಾ ಪಡೆದರು. 45 ರಿಂದ 70 ವರ್ಷದೊಳಗಿನ ವಿಭಾಗದಲ್ಲಿ ವನಜಾಕ್ಷಮ್ಮ ಪ್ರಥಮ, ತಿಪ್ಪಮ್ಮ ದ್ವಿತೀಯ ಹಾಗೂ ಸುಧಾ ತೃತೀಯ ಬಹುಮಾನ ಪಡೆದರು.

ಎಸ್‌ಜೆಎಂ ವಿಶ್ವವಿದ್ಯಾಲಯಕ್ಕೆ ಸಂಸದ ಗೋವಿಂದ ಕಾರಜೋಳ ಭೇಟಿ

ಚಿತ್ರದುರ್ಗ: ನಗರದ ಎಸ್.ಜೆ.ಎಂ. ವಿಶ್ವವಿದ್ಯಾಲಯಕ್ಕೆ ಸಂಸದ ಗೋವಿಂದ ಎಂ. ಕಾರಜೋಳ ಭೇಟಿ ನೀಡಿ ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆ, ಶೈಕ್ಷಣಿಕ ಚಟುವಟಿಕೆಗಳು, ಆಡಳಿತ ವ್ಯವಸ್ಥೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಭವಿಷ್ಯದ ಯೋಜನೆಗಳ ಕುರಿತು ಅವಲೋಕನ ನಡೆಸಿದರು.

ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಬಿ. ಗುಡಸಿ ಹಾಗೂ ಕುಲಸಚಿವ ಡಾ.ಎಂ.ಎಸ್. ಗಣಾಚಾರಿ ಅವರು ವಿಶ್ವವಿದ್ಯಾಲಯದ ಸ್ಥಾಪನೆ, ಶೈಕ್ಷಣಿಕ ಬೆಳವಣಿಗೆ, ವಿವಿಧ ವಿಭಾಗಗಳ ಕಾರ್ಯ ಚಟುವಟಿಕೆಗಳು, ವಿಶ್ವವಿದ್ಯಾಲಯದ ಚಿತ್ರಣದ ಕುರಿತು ಸಂಕ್ಷಿಪ್ತವಾಗಿ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಎಸ್‌ಜೆಎಂ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಪಿ.ಬಿ. ಭರತ್, ಎಸ್‌ಜೆಎಂ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ಹರೀಶ ಮತ್ತಿತರರಿದ್ದರು.



ಶ್ರೀವಿಜಯ ಮಹಾಂತೇಶ್ವರ ಶಾಖಾಮಠದ ಕಾಯಕಯೋಗಿ ಶ್ರೀ ಬಸವಲಿಂಗ ಸ್ವಾಮೀಜಿ

ಜಾನಪದ ಕಲೆಯನ್ನು ಮಕ್ಕಳಿಗೆ ಮೈಗೂಡಿಸಿ

ಮೊಳಕಾಲ್ಮೂರು: ನಶಿಸಿ ಹೋಗುತ್ತಿರುವ ಜಾನಪದ ಕಲೆ ಉಳಿಸಲು ಸಪ್ತಸ್ವರ ಸಾಂಸ್ಕೃತಿಕ ಸಂಸ್ಥೆಯು ಅನೇಕ ವರ್ಷಗಳಿಂದ ಕಾರ್ಯಕ್ರಮ ಮಾಡುತ್ತಾ ಬರುತ್ತಿದೆ. ಗಡಿ ಭಾಗದಲ್ಲಿ ಇಂತಹ ಹಲವಾರು ಕಾರ್ಯಕ್ರಮಗಳನ್ನು ನಡೆಯುತ್ತಿರುವುದು ಬಹಳ ಸಂತೋಷವಾಗಿದೆ ಎಂದು ಸಿದ್ದಯ್ಯನಕೋಟೆಯ ಚಿತ್ರರಗಿ ಶ್ರೀವಿಜಯ ಮಹಾಂತೇಶ್ವರ ಶಾಖಾಮಠದ ಪೀಠಾಧಿಪತಿ ಕಾಯಕಯೋಗಿ ಶ್ರೀ ಬಸವಲಿಂಗ ಸ್ವಾಮೀಜಿ ಹೇಳಿದರು.

ಗೌರಸಮುದ್ರದಲ್ಲಿ ಶನಿವಾರ ಸಪ್ತಸ್ವರ ಸಾಂಸ್ಕೃತಿಕ ಸಂಸ್ಥೆ ರಿ. ಕುಮತರ್ಲಹಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಜಾನಪದ ಸಾಂಸ್ಕೃತಿಕ ಸಂಭ್ರಮೋತ್ಸವ ಉದ್ಘಾಟಿಸಿ ಮಾತನಾಡಿದರು.

ಸಂಘ-ಸಂಸ್ಥೆಯು ಕನ್ನಡ ಜಾಗೃತಿ ಜಾನಪದ ಸಂಸ್ಕೃತಿ ಉತ್ಸವಗಳ ಕಾರ್ಯಕ್ರಮಗಳು ನಿರಂತರವಾಗಿ ಸಾಗಬೇಕು. ಇಂದಿನ ದಿನಮಾನದಲ್ಲಿ ಮೊಬೈಲ್ ಹಾವಳಿ ಹೆಚ್ಚಾಗಿರುವುದರಿಂದ ಮೊಬೈಲ್ ಕಡೆ ಮೊರೆ ಹೋಗದೆ ಸಂಗೀತ, ಸಾಹಿತ್ಯ, ಸಂಸ್ಕೃತಿ ಹಾಗೂ ಸಂಸ್ಕಾರ ಮಕ್ಕಳಿಗೆ ಮೈಗೂಡಿಸಿಕೊಳ್ಳಲು ತಿಳಿಸಿದರು.



ಮೊಳಕಾಲ್ಮೂರು ಪೊಲೀಸ್ ಠಾಣೆಯ ಪಿಎಸ್‌ಐ ಮಹೇಶ್ ಹೊಸಪೇಟೆ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಇಂತಹ ಜಾನಪದ ಸಂಗೀತ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು. ಯಾವುದೇ ದ್ವೇಷ, ಅಸೂಯೆ ಬರುವುದಿಲ್ಲ. ಸದಾ ಎಲ್ಲರೂ ಸಂಗೀತವನ್ನು ಆಲಿಸಿದರೆ ನಮ್ಮ ಸಮಸ್ಯೆಗಳು ಪರಿಹರಿಸುವ ಶಕ್ತಿ ಸಂಗೀತಕ್ಕಿದೆ ಎಂದು ತಿಳಿಸಿದರು.

ಮಠದ ಕಾರ್ಯದರ್ಶಿ ಪಿ.ಆರ್. ಕಾಂತರಾಜ್ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಲಾವಿದರ ನಡೆ ಜನರ ಕಡೆ ಎನ್ನುವಂತಹ ಹಲವಾರು ಹೊಸ ಕಾರ್ಯಕ್ರಮಗಳನ್ನ ತಂದಿರುವುದು ಎಲ್ಲಾ ಗ್ರಾಮೀಣ ಭಾಗದ ಕಲಾವಿದರಿಗೂ ಅನುಕೂಲವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆ.ಪಿ. ಪಂಪಾಪತಿ, ಮೀನಾ ಕೆರೆ ಗೌಡ್ರು, ರಾಜಣ್ಣ ಎಂ.ಬಿ. ಭೋಗೇಶ್ ಗೌಡ್ರು, ಸಿದ್ದಯ್ಯನಕೋಟೆ, ಚಳ್ಳಂಗಿ ಹನುಮಂತಪ್ಪ, ಡಾ. ರಂಗಪ್ಪ, ಗೌಡ್ರು ತಿಪ್ಪೇಸ್ವಾಮಿ ಇದ್ದರು.

ಜಾನಪದ ಪರಿಷತ್ತು ತಾಲೂಕು ಘಟಕದ ಅಧ್ಯಕ್ಷ ಎಸ್.ಜೆ. ರಂಗಸ್ವಾಮಿ ಸಕ್ಕರ

ಮನಸ್ಸು ಹಗುರಗೊಳಿಸುವ ಶಕ್ತಿ ಸಂಗೀತಕ್ಕಿದೆ

ಹಿರಿಯೂರು: ಸಂಗೀತ ಕೇಳುವುದರಿಂದ ಮತ್ತು ಹಾಡುವುದರಿಂದ ಸೃಜನಶೀಲತೆ, ಮಾನಸಿಕ ನೆಮ್ಮದಿ ದೊರೆಯುತ್ತದೆ. ಸಂಗೀತವು ದುಃಖ, ದುಮ್ಮಾನ, ಸಂಕಟ, ವೇದನೆ, ದೂರ ಮಾಡಿ ಮನಸ್ಸನ್ನು ಹಗುರಗೊಳಿಸುತ್ತದೆ. ಆದುದರಿಂದ ಸಂಗೀತವು ದಿವ್ಯ ಔಷಧಿಯಾಗಿದೆ ಎಂದು ಕರ್ನಾಟಕ ಜಾನಪದ ಪರಿಷತ್ತು ತಾಲೂಕು ಘಟಕದ ಅಧ್ಯಕ್ಷ ಎಸ್.ಜೆ. ರಂಗಸ್ವಾಮಿ ಸಕ್ಕರ ಹೇಳಿದರು.

ಪಟ್ಟಣದ ಕೆ.ಎಂ ಕೊಟ್ಟಿಗೆಯ ಸುಪ್ರಿಯಾ ಶಾಲೆ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರಗೀತೆ ತರಬೇತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿ, ಸಂಗೀತ ಒಂದು ವರ್ಗ ಜಾತಿ ಧರ್ಮಕ್ಕೆ ಸೀಮಿತವಲ್ಲ, ಇದು ನಾಡಿನ ಸಂಸ್ಕೃತಿಯ ಪ್ರತೀಕ. ಸಂಗೀತಕ್ಕೆ ರೋಗ ರುಜಿನ ದೂರ ಮಾಡುವ, ಸಾಂಕ್ರಾಮಿಕ ರೋಗ ತಡೆಯುವ ಹಾಗೂ ಮಳೆ ತರಿಸುವ ಶಕ್ತಿಯಿದೆ ಎಂದರು.

ಸಂಗೀತಕ್ಕೆ ಮಹರ್ಷಿ ಮಾತಂಗಮುನಿ, ಪುರಂದರ ದಾಸರು, ಕನಕದಾಸರು ತ್ಯಾಗರಾಜ್ ಮಹಾಸ್ವಾಮಿಗಳು, ಶರಣರು, ದಾಸರು, ಗದುಗಿನ ಪುಟ್ಟರಾಜ ಗವಾಯಿಗಳು, ಪಂಚಾಕ್ಷರಿ ಗವಾಯಿಗಳು, ಭೀಮಸೇನ ಜೋಷಿ, ಮಲ್ಲಿಕಾರ್ಜುನ್ ಮನ್ಸೂರ್, ಗಂಗೂ ಬಾಯಿ ಹಾನಗಲ್ಲು ಹೀಗೆ ಹಲವಾರು ಸಂಗೀತ ಪ್ರಿಯರು ಸಂಗೀತಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಎಂದು ಹೇಳಿದರು.



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕಿ ಕೆ. ರಾಜೇಶ್ವರಿ ಮಾತನಾಡಿ, ನಾಡಿನ ಮಹಾಪುರುಷರು ತಮ್ಮಲ್ಲಿದ್ದ ಸರ್ವಸ್ವ ತ್ಯಜಿಸಿ ದಾಸರಾಗಿ ಶರಣರಾಗಿ ಸಾಮಾನ್ಯ ಜನರಲ್ಲಿದ್ದ ಕಂದಾಚಾರ, ರೂಢಿ ಸಂಪ್ರದಾಯ, ಮೇಲು ಕೀಳು, ಅಸಮಾನತೆ ಇವುಗಳನ್ನು ಹೋಗಲಾಡಿಸಲು ಕೀರ್ತನೆ, ವಚನಗಳನ್ನು ರಚನೆ ಮಾಡಿ ಸಾಹಿತ್ಯದ ಮೂಲಕ ಜಾಗೃತಿ ಮೂಡಿಸಿದ್ದಾರೆ ಎಂದು ಹೇಳಿದರು.

ಕಲಾವಿದರಾದ ಟಿ. ಯಮುನಾ, ಎಂ.ವಿ. ನಾಗರತ್ನಮ್ಮ ತಂಡದವರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಎಸ್‌ಡಿಎಂಸಿ ಅಧ್ಯಕ್ಷ ಎಂ. ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಸಂಗೀತ ವಿದ್ವಾನ್ ಆರ್. ತಿಪ್ಪೇಸ್ವಾಮಿ, ಪೂಜಾರ್ ಮಹಲಿಂಗಪ್ಪ, ಎಂ.ಬಿ. ಲಿಂಗಪ್ಪ, ಪಿ.ಎಂ. ತಿಪ್ಪೇಸ್ವಾಮಿ, ಸಂಗೀತ ವಿದುಷಿ ಎಸ್. ಜಗದಾಂಬ, ಎಸ್. ಬಸವರಾಜ್, ಹಾರ್ಮೋನಿಯಂ ವಾದಕ ಎಸ್. ಶಿವಲಿಂಗಪ್ಪ, ತಬಲವಾದಕ ಬಿ.ಎಸ್. ಅಭಿಷೇಕ್, ಎಸ್. ಶಿವ ಮೂರ್ತಿ, ಎಂ. ಹೇಮಗಿರಿ, ಹೇಲೆನ್ ಮೇರಿ ಉಪಸ್ಥಿತರಿದ್ದರು.

ಕಿರುಸುದ್ದಿ

ಪ್ರತ್ಯೇಕ ಘಟನೆಯಲ್ಲಿ ಇಬ್ಬರು ದುರ್ಮರಣ

ದಾವಣಗೆರೆ: ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶನಿವಾರ ಎರಡು ಪ್ರತ್ಯೇಕ ದುರ್ಘಟನೆಗಳಲ್ಲಿ ಇಬ್ಬರು ವ್ಯಕ್ತಿಗಳು ಮೃತಪಟ್ಟಿದ್ದಾರೆ. ದಾವಣಗೆರೆ ತಾಲೂಕು ಕ್ಯಾಗಲೆ ಗ್ರಾಮದ ಅಂಜನಪ್ಪ(30) ಎಂಬುವರು ತೋಟದಲ್ಲಿ ತೆಂಗಿನಕಾಯಿ ಕೀಳುವ ವೇಳೆ ಮರದಿಂದ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಹಾಗೂ ಎರಡು ವರ್ಷದ ಗಂಡು ಮಗು ಇದ್ದಾರೆ. ಈ ಬಗ್ಗೆ ಹದಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನೊಂದು ಘಟನೆಯಲ್ಲಿ ಚನ್ನಗಿರಿ ತಾಲೂಕಿನ ಹರೋನಹಳ್ಳಿ ಗ್ರಾಮದ ತೋಟದಲ್ಲಿ ಅಡಿಕೆ ಮರ ಕಡಿಯುವ ಕೆಲಸಕ್ಕೆ ತೆರಳಿದ್ದ ಮಂಜುನಾಥ್(32) ಮೇಲೆ ಅಡಿಕೆ ಮರ ಬಿದ್ದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇಬ್ಬರ ಮೃತದೇಹಗಳನ್ನು ಚಿಗಟೇರಿ ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಇರಿಸಿದ್ದ ವೇಳೆ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ ನೀಡಿ, ಮೃತರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ದುರ್ಘಟನೆಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯ ಹಾಗೂ ಅಗತ್ಯ ನೆರವು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

ಗರ್ಭಗುಡಿಯಲ್ಲಿ ಫ್ಲೆಕ್ಸ್: ಭಕ್ತರ ಭಾವನೆಗೆ ಧಕ್ಕೆ ಆರೋಪ

ದಾವಣಗೆರೆ: ನಗರದೇವತೆ ದುರ್ಗಾಂಬಿಕಾ ದೇವಸ್ಥಾನದಲ್ಲಿ ಇದೇ ಜೂ.23ರಂದು ನಡೆಯಲಿರುವ ಎಡೆ ಜಾತ್ರೆ ಪ್ರಯುಕ್ತ ದೇವಸ್ಥಾನ ಒಳಭಾಗದ ದೇವಿ ಗರ್ಭಗುಡಿ ಬಾಗಿಲಿನ ಬಳಿ ದೇವರಿಗಿಂತ ಎತ್ತರವಾಗಿ ಫ್ಲೆಕ್ಸ್ ಅಳವಡಿಸಿರುವುದು ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡಿದೆ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಫ್ಲೆಕ್ಸ್‌ನಲ್ಲಿ ದೇವಸ್ಥಾನದ ಹಿಂದಿನ ಅಧ್ಯಕ್ಷರಾದ ದಿವಂಗತ ಶಾಮನೂರು ಶಿವಶಂಕರಪ್ಪ ಹಾಗೂ ಹಾಲಿ ಅಧ್ಯಕ್ಷ ಎಸ್.ಎಸ್.ಮಲ್ಲಿಕಾರ್ಜುನ್ ಅವರುಗಳ ಭಾವಚಿತ್ರ ಹಾಗೂ ಟ್ರಸ್ಟ್‌ಗೆ ಯಾವುದೇ ಸಂಬಂಧವಿಲ್ಲದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ದಾವಣಗೆರೆ ದಕ್ಷಿಣ ಶಾಸಕ ಸಮರ್ಥ ಶಾಮನೂರು ಹೆಸರುಗಳನ್ನು ಮುದ್ರಿಸಲಾಗಿದೆ. ದುರ್ಗಾಂಬಿಕಾ ದೇವಸ್ಥಾನವು ಸಾರ್ವಜನಿಕರ ಸ್ವತ್ತಾಗಿದ್ದು, ಯಾವುದೇ ವ್ಯಕ್ತಿ ಅಥವಾ ಕುಟುಂಬದ ಖಾಸಗಿ ಆಸ್ತಿಯಲ್ಲ. ಇಂತಹ ಧಾರ್ಮಿಕ ಸ್ಥಳಗಳಲ್ಲಿ ವ್ಯಕ್ತಿಗಳ ಭಾವಚಿತ್ರಗಳನ್ನು ದೇವರಿಗಿಂತ ಪ್ರಮುಖವಾಗಿ ಪ್ರದರ್ಶಿಸುವುದು ದೇವಸ್ಥಾನದ ಪಾವಿತ್ರ್ಯಕ್ಕೆ ಧಕ್ಕೆಯುಂಟು ಮಾಡುತ್ತದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸದರಿ ಘಟನೆಗೆ ಸಂಬಂಧಿಸಿದಂತೆ ದೇವಸ್ಥಾನ ಟ್ರಸ್ಟ್ ಕೂಡಲೇ ಸಾರ್ವಜನಿಕರ ಕ್ಷಮೆಯಾಚನೆ ಮಾಡಬೇಕು. ಜಿಲ್ಲಾಡಳಿತವು ಈ ವಿಷಯವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ದೇವಸ್ಥಾನದಲ್ಲಿ ನಡೆದಿರುವ ಎಲ್ಲಾ ಅಕ್ರಮಗಳ ಬಗ್ಗೆ ದಾಖಲೆ ಬಿಡುಗಡೆ ಮಾಡಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ನೀಟ್ ಪರೀಕ್ಷೆಯಲ್ಲಿ ದಾರ ತೆಗೆಸಿದ್ದಕ್ಕೆ ಆಕ್ಷೇಪ

ದಾವಣಗೆರೆ: ಜಿಲ್ಲಾ ಕೇಂದ್ರದಲ್ಲಿ ಭಾನುವಾರ ಒಟ್ಟು 13 ಕೇಂದ್ರಗಳಲ್ಲಿ ನೀಟ್ ಮರುಪರೀಕ್ಷೆ ನಡೆದಿದ್ದು, ಈ ವೇಳೆ ಪರೀಕ್ಷೆ ಬರೆಯಲು ಬಂದಿದ್ದ ಪರೀಕ್ಷಾರ್ಥಿಗಳು ಕೊರಳಲ್ಲಿ ಧರಿಸಿದ್ದ ಶಿವದಾರ, ರುದ್ರಾಕ್ಷಿ, ಚೌಕ(ಕರಡಿಗೆ), ಜನಿವಾರ, ಕೈಗಳಲ್ಲಿ ಕಟ್ಟಿಕೊಂಡಿದ್ದ ದೇವರ ದಾರ, ಸೊಂಟದಲ್ಲಿ ಧರಿಸಿದ್ದ ಉಡುದಾರವನ್ನೂ ತೆಗೆಸಿದ್ದು ತೀವ್ರ ಆಕ್ಷೇಪಕ್ಕೆ ಕಾರಣವಾಗಿದೆ. ನಗರದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಕೊರಳಲ್ಲಿದ್ದ ದಾರಗಳನ್ನು ತೆಗೆಸಲಾಯಿತು. ಪ್ರವೇಶ ದ್ವಾರದಲ್ಲಿದ್ದ ಸಿಬ್ಬಂದಿಯೇ ಕೊರಳಲ್ಲಿ, ಕೈಯಲ್ಲಿ ಧರಿಸಿದ್ದ ದಾರಗಳನ್ನು, ಶಿವದಾರ, ಚೌಕ, ರುದ್ರಾಕ್ಷಿ, ಜನಿವಾರ ತೆಗೆಯುವಂತೆ ಸೂಚನೆ ನೀಡಿದ್ದರಿಂದ ಒಲ್ಲದ ಮನಸ್ಸಿನಿಂದಲೇ ಪರೀಕ್ಷಾರ್ಥಿಗಳು ಅವುಗಳನ್ನು ತೆಗೆಯುತ್ತಿದ್ದುದು ಕಂಡುಬಂದಿತು. ಕೊರಳಲ್ಲಿದ್ದ ಎಲ್ಲಾ ದಾರಗಳನ್ನೂ ತೆಗೆಸಿದ ನಂತರವೇ ಪರೀಕ್ಷಾ ಕೇಂದ್ರದೊಳಗೆ ಪ್ರವೇಶ ನೀಡಲಾಯಿತು. ಮೆಟಲ್ ಡಿಟೆಕ್ಟರ್ ನಿಂದ ವಿದ್ಯಾರ್ಥಿಗಳನ್ನು ತಪಾಸಣೆ ಮಾಡಿ, ಒಳಗೆ ಬಿಡಲಾಯಿತು. ಜನಿವಾರ, ರುದ್ರಾಕ್ಷಿ, ಶಿವದಾರ, ಚೌಕದ ಜೊತೆಗೆ ಉಡುದಾರವನ್ನೂ ಬಿಡದೆ ತೆಗೆಸಿದ್ದಕ್ಕೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ. ಮಧ್ಯಾಹ್ನ 1.30ರವರೆಗೆ ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗಿತ್ತು. ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15ರವರೆಗೆ ನೀಟ್ ಪರೀಕ್ಷೆ ವ್ಯವಸ್ಥಿತವಾಗಿ ನಡೆದಿದ್ದು, ಯಾವುದೇ ಕೇಂದ್ರದಲ್ಲೂ ಅಹಿತಕರ ಘಟನೆ ವರದಿಯಾಗಿಲ್ಲ.

ಇಂದು ಬೃಹತ್ ಪ್ರತಿಭಟನೆ

ದಾವಣಗೆರೆ: ಗ್ರಾಹಕರು ಮತ್ತು ರೈತರ ಹಿತಾಸಕ್ತಿಗೆ ಧಕ್ಕೆ ತರುತ್ತಿರುವ ವಿದ್ಯುತ್ ಕಂಪನಿಗಳ ಖಾಸಗೀಕರಣ ನೀತಿ ವಿರೋಧಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದಿಂದ ಜೂನ್ 22ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ.



ದಾವಣಗೆರೆ ನಗರದ ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಪಿಜಿ ಸೆಂಟರ್, ಅಶ್ವಿನಿ ಮೆಡಿಕಲ್ ಮತ್ತು ಐಬಿಟಿ ಅಕಾಡೆಮಿ ವತಿಯಿಂದ ಭಾನುವಾರ ಯೋಗ ದಿನ ಆಚರಿಸಲಾಯಿತು. ಶಾಸಕ ಸಮರ್ಥ ಶಾಮನೂರು, ಸಂಸ್ಥೆಯ ಅಧ್ಯಕ್ಷ ಡಾ.ಮೃತ್ಯುಂಜಯ ಎಸ್. ಹಿರೇಮಠ, ಎಂ.ಬಸವರಾಜ್, ಎಸ್.ಎಂ.ಭೋಜರಾಜ್ ಇದ್ದರು.



ಹರಿಹರದ ರಾಘವೇಂದ್ರ ಸ್ವಾಮಿ ಮಠ ಹಿಂಬಾಗ ನದಿ ತೀರದ ತುಂಗಭದ್ರಾ ಆರತಿ ಕಾರಿಡಾರ್‌ನಲ್ಲಿ ಭಾನುವಾರ ತಾಲ್ಲೂಕು ಆಡಳಿತ, ಶಾಲಾ ಶಿಕ್ಷಣ ಇಲಾಖೆ, ನಗರಸಭೆ ವತಿಯಿಂದ ಆಯೋಜಿಸಿದ್ದ ಯೋಗ ದಿನಾಚರಣೆ ಪ್ರಯುಕ್ತ ಯೋಗ ಸಂಗಮ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಯೋಗ ಪ್ರದರ್ಶನ ಮಾಡಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಅಭಿಮತ

ಯೋಗದಿಂದ ಒತ್ತಡ ದೂರ

ದಾವಣಗೆರೆ: ಇಂದಿನ ಒತ್ತಡದ ಬದುಕಿನಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗವು ದಿವ್ಯೌಷಧ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅಭಿಪ್ರಾಯಪಟ್ಟರು.

ನಗರದ ಡಿಎಆರ್ ಪೊಲೀಸ್ ಕವಾಯತು ಮೈದಾನದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಗರಿಕರು ಯೋಗವನ್ನು ತಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಳ್ಳಬೇಕು ಎಂದರು.

ಆರೋಗ್ಯ ವ್ಯವಸ್ಥೆಗಾಗಿ ಯೋಗ ಎಂಬುದು ಈ ವರ್ಷದ ವಿಶ್ವ ಯೋಗ ದಿನಾಚರಣೆಯ ಘೋಷವಾಕ್ಯವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಗವನ್ನು ಪ್ರೋತ್ಸಾಹಿಸುತ್ತಿವೆ. ನಾಗರಿಕರು ಈ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಯೋಗ ದಿನಾಚರಣೆಯನ್ನು ಕೇವಲ ಒಂದು ದಿನಕ್ಕೆ ಸೀಮಿತಗೊಳಿಸಿ ಸಾಂಕೇತಿಕವಾಗಿ ಆಚರಿಸದೆ, ಪ್ರತಿಯೊಬ್ಬರೂ ತಮ್ಮ ಆರೋಗ್ಯವನ್ನು ಉತ್ತಮವಾಗಿ ಇಟ್ಟುಕೊಳ್ಳುವ ನಿಟ್ಟಿನಲ್ಲಿ ದಿನನಿತ್ಯ ಯೋಗಾಭ್ಯಾಸ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಪಿ ಡಾ.ಹೆಚ್.ಟಿ. ಶೇಖರ್, ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಗಿತ್ತೆ ಮಾಧವ ವಿಠ್ಠಲರಾವ್, ಉಪ ಕಾರ್ಯದರ್ಶಿ ಮಮತ ಹೊಸಗೌಡರ್, ಸಿಇಒ ಮಲ್ಲಾನಾಯಕ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಷಣ್ಮುಖಪ್ಪ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪರಮೇಶ್ವರ ಹೆಗಡೆ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಯೋಗೇಂದ್ರ ಕುಮಾರ್ ಇದ್ದರು.



ಯೋಗದಿಂದ ದೈಹಿಕ, ಮಾನಸಿಕ ಆರೋಗ್ಯ

ಜಗಳೂರು: ಯೋಗವನ್ನು ದಿನನಿತ್ಯ ಅಳವಡಿಸಿಕೊಳ್ಳುವುದರಿಂದ ದೇಹ ಮತ್ತು ಮನಸ್ಸಿನ ನಡುವೆ ಸಮತೋಲನವನ್ನು ಸಾಧಿಸಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯಕರ ಮತ್ತು ಶಾಂತಿಯುತ ಜೀವನವನ್ನು ನಡೆಸಲು ಸಹಕಾರಿಯಾಗುತ್ತದೆ ಎಂದು ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಹೇಳಿದರು.

ಪಟ್ಟಣದ ಬಯಲು ರಂಗಮಂದಿರದಲ್ಲಿ ಅಂತಾರಾಷ್ಟ್ರೀಯ ಯೋಗದಿನದ ಅಂಗವಾಗಿ ಭಾರತೀಯ ಜನತಾ ಪಾರ್ಟಿ ಜಗಳೂರು ಮಂಡಲ ವತಿಯಿಂದ ಹಮ್ಮಿಕೊಂಡಿದ್ದ ಯೋಗಾಭ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಯೋಗವು ಭಾರತದ ಪ್ರಾಚೀನ ಜ್ಞಾನ ಪರಂಪರೆಯ ಅಮೂಲ್ಯ ಕೊಡುಗೆಯಾಗಿದೆ ಅದರ ಅರ್ಥ ಸೇರುವುದು ಅಥವಾ ಒಂದಾಗುವುದು ಎಂದಾಗಿದೆ. ಯೋಗವು ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನವನ್ನು ಸಾಧಿಸಲು ಸಹಾಯ ಮಾಡುತ್ತದೆ ಎಂದರು. ದೈಹಿಕವಾಗಿ ಯೋಗವು



ದೇಹದ ಸ್ನಾಯುಗಳು ಮತ್ತು ಕೀಲುಗಳಿಗೆ ಶಕ್ತಿ ಮತ್ತು ನಮ್ಯತೆಯನ್ನು ನೀಡುತ್ತದೆ. ಬೆನ್ನು ನೋವು, ಕುತ್ತಿಗೆ ನೋವು ಹಾಗೂ ಸಂಧಿವಾತದಂತಹ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹಕಾರಿ. ಹಾಗೂ ರಕ್ತಸಂಚಾರವನ್ನು ಸುಧಾರಿಸುತ್ತದೆ.ಜೀರ್ಣಕ್ರಿಯೆಯನ್ನು ಉತ್ತಮಗೊಳಿಸುತ್ತದೆ.ದೇಹದ ತೂಕವನ್ನು ನಿಯಂತ್ರಿಸಲು ನೆರವಾಗುತ್ತದೆ ಹೃದಯದ ಆರೋಗ್ಯವನ್ನು ಕಾಪಾಡಲುಸಹಾಯಕವಾಗುತ್ತದೆ. ಮಾನಸಿಕ ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡಿ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿಯನ್ನು ನೀಡುತ್ತದೆ ಎಂದರು. ಬಿಜೆಪಿ ಮಂಡಲ ಅಧ್ಯಕ್ಷ ಎಸ್‌ಎಂ ಮರುಳಾರಾಧ್ಯ, ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರದ ವೈದ್ಯರಾದ ಡಾ.ಶ್ವೇತಾ ಬೆಳಗಲಿ ಮಾಜಿ ಪಟ್ಟಣ ಪಂಚಾಯತಿ ಅಧ್ಯಕ್ಷ ರೇವಣ್ಣ,ಬಿಜೆಪಿ ತಾಲ್ಲೂಕು ಘಟಕದ ಪದಾಧಿಕಾರಿಗಳಾದ ಲ್ಯಾಬ್ ಶಿವರಾಜ್, ಧರ್ಮನಾಯ್ಕ್, ಯೋಗಾನಂದ, ಕ್ಯಾಂಪ್ ರೇವಣ್ಣ ,ಎಸ್ ಪಿ ನಾಗರಾಜ್, ಜಯಶ್ರೀ, ನಂದಿನಿ, ಮತ್ತಿತರರು ಉಪಸ್ಥಿತರಿದ್ದರು

ಮಾಜಿ ಸಚಿವ ರೇಣುಕಾಚಾರ್ಯ ಅಭಿಮತ

ರೋಗಕ್ಕೆ ಯೋಗ ಮದ್ದು



ಹೊನ್ನಾಳಿ: ಸರ್ವರೋಗಕ್ಕೂ ಯೋಗ ಮದ್ದು, ಹಾಗಾಗಿ ಇಂದಿನ ಒತ್ತಡವನ್ನು ಕಡಿಮೆ ಮಾಡಿಕೊಳ್ಳಬೇಕಾದರೆ ಪ್ರತಿನಿತ್ಯ ಯೋಗ ಮಾಡಬೇಕು ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಹೊನ್ನಾಳಿ ಪಟ್ಟಣದ ಹಿರೇಕಲ್ಮಠದಲ್ಲಿ ಭಾನುವಾರ ಪತಂಜಲಿ ಯೋಗ ಸಮಿತಿ, ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವವಿದ್ಯಾಲಯ, ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ತಾಲೂಕು ಪತ್ರಕರ್ತರ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಯೋಗ ಭಾರತದ ಋಷಿಮುನಿಗಳಿಂದ ವರದಾನವಾಗಿ ಬಂದಿದ್ದು, ಇಂದು ಯೋಗ ವಿಶ್ವವ್ಯಾಪಿಯಾಗಿರುವುದು ಭಾರತೀಯರು ಹೆಮ್ಮೆಪಡುವ ವಿಚಾರವಾಗಿದೆ. ದಿನನಿತ್ಯದ ಜೀವನದಲ್ಲಿ ಯೋಗಾಭ್ಯಾಸ ಕೂಡ ಒಂದು ಬಹು ಮುಖ್ಯ ಕ್ರಿಯೆಯಾಗಿದ್ದು ಎಲ್ಲರೂ ಯೋಗವನ್ನು ಅಳವಡಿಸಿಕೊಂಡು ಉತ್ತಮ ಆರೋಗ್ಯ ಸಂರಕ್ಷಣೆ ಮಾಡಿಕೊಳ್ಳಬೇಕು ಎಂದು ಹೇಳಿದರು.


ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ಮಾತನಾಡಿ, ಯೋಗ ಭಾರತದ ಸಂಸ್ಕೃತಿಯ ಪ್ರತೀಕವಾಗಿದ್ದು, ದೇಶದ ಪ್ರಧಾನಿ ನರೇಂದ್ರ ಮೋದಿಯವರಿಂದಾಗಿ ವಿಶ್ವಮನ್ನಣೆಯನ್ನು ಗಳಿಸಿದ್ದು ಸುಮಾರು 177ಕ್ಕೂ ಹೆಚ್ಚಿನ ದೇಶಗಳಲ್ಲಿ ಯೋಗವನ್ನು ಕೋಟ್ಯಾಂತರ ಜನ ತಮ್ಮ ದಿನಚರಿಯನ್ನಾಗಿಸಿಕೊಂಡಿದ್ದಾರೆ ಎಂದರೆ ಆರೋಗ್ಯ ರಕ್ಷಣೆಯಲ್ಲಿ ಯೋಗದ ಮಹತ್ವ ತಿಳಿಯುತ್ತದೆ. ತಾನು ಕೂಡ ಒಬ್ಬ ಯೋಗದ ವಿದ್ಯಾರ್ಥಿಯಾಗಿದ್ದು, ನಿತ್ಯ ಯೋಗಾಭ್ಯಾಸ ಮಾಡಿಕೊಂಡು ಬರುತ್ತಿದ್ದೇನೆ ಎಂದು ಹೇಳಿದರು.

ಹಿರೇಕಲ್ಮಠ ಮಠದ ಆವರಣದಲ್ಲಿ ನೂರಾರು ಜನ ಯೋಗ ಪ್ರದರ್ಶನ ಮಾಡಿದರು. ಯೋಗ ಶಿಕ್ಷಕ ರುದ್ರೇಶ್, ಶ್ರೀಕಾಂತ ಕುಬೇರ್‌ಕರ್, ಜಗದೀಶ್ ಆಚಾರ್, ಸುರೇಶ್ ಕುಂಬಾರ, ಸುರೇಶ್ ಕುಂಬಾರ್, ಸುಜಾತ ಬೆನ್ನೂರುಮಠ್ ಅಂಬಿಕಾ ಪ್ರಕಾಶ್ ಹೆಬ್ಬಾರ್, ಶೀಲಾ, ರವಿಕುಮಾರ್, ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಮಲ್ಲೇಶ್, ಅರುಣ್‌ಕುಮಾರ್, ವೈದ್ಯ ಜಿತೇಂದ್ರ, ಎಂ.ವಾಸಪ್ಪ ಹಾಗೂ ಇತರರು ಇದ್ದರು.

ಉತ್ತಮ ಆರೋಗ್ಯಕ್ಕೆ ಯೋಗ ರಹದಾರಿ

ಹರಪನಹಳ್ಳಿ: ನಿತ್ಯ ನಿಯಮಿತವಾಗಿ ವ್ಯಾಯಾಮ, ಪ್ರಾಣಾಯಾಮ, ಯೋಗ ಹಾಗೂ ಧ್ಯಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಅನಾರೋಗ್ಯದಿಂದ ದೂರವಿದ್ದು ಆರೋಗ್ಯವಂತ ಜೀವನ ನಡೆಸಲು ಸಾಧ್ಯ ಎಂದು ಜೀವಬಲ ಟ್ರಸ್ಟ್ ಅಧ್ಯಕ್ಷ ಹೇಮಣ್ಣ ಮೋರಗೇರಿ ಹೇಳಿದರು.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯಲ್ಲಿ ಶನಿವಾರ ನಡೆದ 15ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ,ಯೋಗವನ್ನು ವಿಶ್ವದಾದ್ಯಂತ ಪರಿಚಯಿಸಿ ಪ್ರಚುರಪಡಿಸಿದ ಹೆಮ್ಮೆ ಭಾರತಕ್ಕೆ ಸಲ್ಲುತ್ತದೆ. ಇಂದು ಸುಮಾರು 190 ದೇಶಗಳಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಏಕಕಾಲದಲ್ಲಿ ಆಚರಿಸಲಾಗುತ್ತಿದೆ. ವ್ಯಾಯಾಮ, ಪ್ರಾಣಾಯಾಮ, ಯೋಗ ಹಾಗೂ ಧ್ಯಾನದ ಮಹತ್ವವನ್ನು ಕೇವಲ ಕೇಳುವುದರಿಂದ ಪ್ರಯೋಜನವಿಲ್ಲ, ಅವುಗಳನ್ನು ಪ್ರತಿನಿತ್ಯ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವುಗಳ ನೈಜ ಉಪಯೋಗವನ್ನು ಅನುಭವಿಸಲು ಸಾಧ್ಯ ಎಂದರು.



ಮುಖ್ಯ ಶಿಕ್ಷಕ ಅರ್ಜುನ್ ಪರಸಪ್ಪ ಮಾತನಾಡಿ, ಶಾಲೆಯಲ್ಲಿ ಪ್ರತಿನಿತ್ಯ ವಿದ್ಯಾರ್ಥಿಗಳಿಗೆ ವ್ಯಾಯಾಮವನ್ನು ಮಾಡಿಸಲಾಗುತ್ತಿದೆ. ಪ್ರಾಣಾಯಾಮವು ಉಸಿರಾಟವನ್ನು ನಿಯಂತ್ರಿಸಿ ಆರೋಗ್ಯವನ್ನು ವೃದ್ಧಿಸುತ್ತದೆ ಎಂದು ಹೇಳಿದರು.

ದೈಹಿಕ ಶಿಕ್ಷಕ ಸುರೇಶ, ಬಿ. ಸುದರ್ಶನ್, ಹೇಮಣ್ಣ ವಿದ್ಯಾರ್ಥಿಗಳಿಗೆ ಪ್ರಾಣಾಯಾಮ ಮತ್ತು ಯೋಗಾಭ್ಯಾಸವನ್ನು ಪ್ರಾತ್ಯಕ್ಷಿಕೆ ಮೂಲಕ ಹೇಳಿಕೊಟ್ಟರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಸಿ. ಗಂಗಾಧರ, ಮಹಾಲಿಂಗ ಗಾವಡೆ, ಎಂ. ರೇಣುಕಾ, ಗೀತಾಬಾಯಿ, ಆಶಾ, ಉಮಾದೇವಿ ಪಾಲ್ಗೊಂಡಿದ್ದರು.

ಜಗತ್ತಿಗೆ ಕೊಟ್ಟ ಅಪೂರ್ವ ಕೊಡುಗೆ ನಮ್ಮ ಯೋಗ

ಹರಿಹರ: ಯೋಗ ಈ ನೆಲದ ಆಸ್ತಿ, ಜಗತ್ತಿಗೆ ಈ ನೆಲವು ಕೊಟ್ಟ ಅಪೂರ್ವ ಕೊಡುಗೆ, ಇದು ಕೇವಲ ಕಸರತ್ತಲ್ಲ, ಪ್ರಕೃತಿಯೊಡನೆ ಸಮೀಕರಿಸಿಕೊಂಡು ನಮ್ಮನ್ನು ನಾವು ಕಂಡುಕೊಳ್ಳುವ ಪರಿಯಾಗಿದೆ ಎಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ನಗರದ ಶಿವಮೊಗ್ಗ ರಸ್ತೆಯಲ್ಲಿರುವ ಬಿಜೆಪಿ ಪಕ್ಷದ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ 12ನೇ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿನಿತ್ಯ ಒಂದು ಗಂಟೆ ಯೋಗ ಧ್ಯಾನ ಮತ್ತು ಪ್ರಾಣಾಯಾಮಗಳಿಗೆ ಮೀಸಲಿಟ್ಟಾಗ ದೇಹದ ಅಂಗಾಂಗ ಶಕ್ತಿಯುತವಾಗುವುದರ ಜೊತೆಗೆ ಮಾನಸಿಕ ಏಕಾಗ್ರತೆ ಸಾಧ್ಯವಾಗುತ್ತದೆ ನಾವು ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರೆಯುದಿದ್ದರೂ ನಮ್ಮ ಪ್ರಾಚೀನ ಪದ್ಧತಿಯಂತೆ ಜೀವನ ನಡೆಸುವುದು ಅವಶ್ಯಕವಾಗಿದೆ ಎಂದರು.

ಜಗತ್ತಿನ ಹಲವಾರು ದೇಶಗಳ ಕೋಟ್ಯಾಂತರ ಮಂದಿ ಯೋಗವನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ನಾವೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆರೋಗ್ಯವಂತರಾಗಿರೋಣ ಎಂದರು.

ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಎಸ್.ಎಂ.ವೀರೇಶ್ ಹನಗವಾಡಿ ಮಾತನಾಡಿ ಸ್ವಸ್ಥ ಮನಸ್ಸು ಹಾಗೂ ಸದೃಢ ದೇಹಕ್ಕಾಗಿ



ಯೋಗಾಭ್ಯಾಸ ಅನಿವಾರ್ಯವಾಗಿದೆ. ಇಂದಿನ ಕಲುಷಿತ ವಾತಾವರಣದಲ್ಲಿ ನಾವುಗಳು ಜೀವಿಸುತ್ತಿದ್ದು ಅನೇಕ ರೋಗಗಳಿಗೆ ತುತ್ತಾಗುತ್ತಿದ್ದೇವೆ. ಇದರಿಂದ ನಾವುಗಳು ದೂರವಿರಬೇಕೆಂದರೆ ಇರುವುದೊಂದೆ ಮಾರ್ಗ ಅದು ಯೋಗ ಎಂದರು ಹೇಳಿದರು.

ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಸದಸ್ಯ ಅಶ್ವಿನಿ ಕೃಷ್ಣ, ಬಿಜೆಪಿ ಪಕ್ಷದ ನಗರಾಧ್ಯಕ್ಷ ಅಜಿತ್ ಸಾವಂತ್, ಗ್ರಾಮಾಂತರ ಘಟಕದ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ, ಪ್ರಧಾನ ಕಾರ್ಯದರ್ಶಿಗಳಾದ ಮಂಜಾನಾಯ್ಕ, ತುಳಜಪ್ಪ ಭೂತೆ, ಸಂತೋಷ್‌ಗುಡಿಮನಿ, ರಾಜೇಶ್ ವರ್ಣೇಕರ್, ಹಳ್ಳದಕೇರಿ ಗಿರೀಶ್, ಪ್ರಶಾಂತ್, ಸಂತೋಷ್, ಸಾಕ್ಷಿ ಶಿಂದೆ, ಅದಿತ್ಯ ಮೆಹರ್ವಾಡೆ ಹಾಗೂ ಇತರರು ಇದ್ದರು.



ಬಸವಾಪಟ್ಟಣದ ಜನತಾ ಪ್ರೌಢಶಾಲೆಯಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಯೋಗ ಪಟು ಸರ್ಜೀಜಿ ರಾವ್ ಉದ್ಘಾಟಿಸಿದರು. ನಿವೃತ್ತ ಶಿಕ್ಷಕ ರಾಮನಾಥ, ರೇಣುಕಮ್ಮ, ಸೇವಾದಳದ ಮಂಜುನಾಥ, ತಿಮ್ಮಣ್ಣ ಸಂಗಮೇಶ್ ಇದ್ದರು.

ಸಂತೆಬೆನ್ನೂರು ಪುಷ್ಕರಣಿ ಆವರಣದಲ್ಲಿ ಯೋಗ

ಸಂತೆಬೆನ್ನೂರು: ವಿಶ್ವಕ್ಕೆ ಯೋಗವನ್ನು ತೋರಿಸಿಕೊಟ್ಟ ಕೀರ್ತಿ ಪ್ರಧಾನಿ ಮೋದಿ ಅವರಿಗೆ ಸಲ್ಲುತ್ತದೆ. ಯೋಗದಲ್ಲಿ 12 ಆಸನಗಳಿವೆ. ಇವುಗಳು ನಮ್ಮಗೆ ಮನಸ್ಸು ಮತ್ತುಆರೋಗ್ಯವನ್ನು ಶುದ್ಧವಾಗಿ ಇಡುವಂತೆ ಮಾಡುತ್ತವೆ ಎಂದು ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಸದಾಶಿವಪ್ಪ ಹೇಳಿದರು.

ಸಂತೆಬೆನ್ನೂರಿನ ಐತಿಹಾಸಿಕ ಪುಷ್ಕರಣಿ ಆವರಣದಲ್ಲಿ ಭಾನುವಾರ ಕೆಪಿಎಸ್ ಶಾಲೆ, ಶ್ರೀರಂಗನಾಥ ಪತಂಜಲಿ, ಭಾರತ್ ಸ್ವಾಭಿಮಾನ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ 12ನೇ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿದಿನ ಯೋಗವನ್ನು ಮಾಡುವುದರಿಂದ ನಮ್ಮದೇಹ ಮತ್ತು ಮನಸ್ಸು ಆರೋಗ್ಯವಾಗಿ ಇರುತ್ತದೆ. ದೇಹ, ಮನಸ್ಸು ಮತ್ತು ಆತ್ಮವನ್ನು ಸಮತೋಲನದಲ್ಲಿಡುವ ಯೋಗವನ್ನು ನಾವೆಲ್ಲರೂ ಅಭ್ಯಾಸ ಮಾಡಬೇಕಿದೆ ಎಂದರು.



ಸಂಸ್ಕೃತಿ ಉಳಿಯಬೇಕಾದರೆ ನಮ್ಮ ಪರಂಪರೆ, ನಮ್ಮ ನಂಬಿಕೆಗಳು ಉಳಿಯಬೇಕು. ಕಾರ್ಯಕ್ರಮದಲ್ಲಿ ಪತಂಜಲಿ ಯೋಗಪಟು ರಂಗನಾಥ್, ದೈಹಿಕ ಶಿಕ್ಷಕಿ ಉಸ್ಮಾ ನವಾಜ್, ಅಂಜಲಿದೇವಿ, ತುಕರಾಮ್, ಮುಖ್ಯಶಿಕ್ಷಕ ಹೆಚ್.ಎಸ್.ರವಿ, ಪಾಪಯ್ಯ, ಶಾ.ನಿ.ನೌಕರರ ಸಂಘದ ಅಧ್ಯಕ್ಷ ಜಿ.ಉಜ್ಜನಪ್ಪ, ಹನುಮಂತರಾಯಪ್ಪ, ಕಿರಣ್‌ಕುಮಾರ್, ಎಂ.ಬಿ.ನಾಗರಾಜ್, ದ್ಯಾಮೇಶ್, ಮಲ್ಲೇಶ್, ವೀರಭದ್ರಪ್ಪ ಇದ್ದರು.

ಜೆಎಂ ವಿವಿ ಆವರಣದಲ್ಲಿ ಯೋಗ ದಿನ | ಮಾಜಿ ಕೇಂದ್ರ ಸಚಿವ ಸಿದ್ದೇಶ್ವರ ಸಂತಸ

ಇಡೀ ವಿಶ್ವವೇ ಇಂದು ಯೋಗದ ಕಡೆ ಮುಖ ಮಾಡಿದೆ

ದಾವಣಗೆರೆ: ನಗರದ ಜಿ.ಎಂ ವಿಶ್ವವಿದ್ಯಾಲಯ ಆವರಣದಲ್ಲಿ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು.

ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ.ಸಿದ್ದೇಶ್ವರ ವಿದ್ಯಾರ್ಥಿಗಳೊಂದಿಗೆ ಸೇರಿ ತಾವೂ ಯೋಗಾಭ್ಯಾಸ ಮಾಡಿದರು.

ಇದೇ ವೇಳೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ ಮುತುವರ್ಜಿಯಿಂದಾಗಿ ಇಂದು ಇಡೀ ವಿಶ್ವವೇ ಯೋಗದ ಕಡೆಗೆ ಮುಖ ಮಾಡಿದೆ. ಹೀಗಾಗಿ ಜಗತ್ತಿನಲ್ಲಿ ಮನುಷ್ಯನ ಸರಾಸರಿ ಜೀವಿತಾವಧಿ ಹೆಚ್ಚಾಗುತ್ತಿದೆ. ಆದರೆ ಕೇವಲ ಹೆಚ್ಚು ವರ್ಷ ಬದುಕುವುದು ಮುಖ್ಯವಲ್ಲ, ಬದುಕಿರುವಷ್ಟು ದಿನ ಆರೋಗ್ಯವಾಗಿ ಚಟುವಟಿಕೆಯಿಂದ ಯಾರಿಗೂ ಹೊರೆಯಾಗದ ರೀತಿಯಲ್ಲಿ ಬದುಕುವುದು ಮುಖ್ಯ. ಯೋಗ ಮಾಡುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ, ರೋಗನಿರೋಧಕ ಶಕ್ತಿ ವೃದ್ಧಿಯಾಗುತ್ತದೆ. ಹಣ್ಣು ಬಿಡುವ ಆರೋಗ್ಯ ವಿಮೆಯ ರೀತಿಯಲ್ಲಿ ಹೆಚ್ಚಿನಲ್ಲದೇ ಮಧುಮೇಹ,



ರಕ್ತದೊತ್ತಡದಂತಹ ದೀರ್ಘಕಾಲಿಕ ಖಾಯಿಲೆಗಳನ್ನು ನಿಯಂತ್ರಣದಲ್ಲಿಡುತ್ತದೆ ಎಂದರು.

ಪ್ರಧಾನಿಯವರ ನಿರಂತರ ಕೆಲಸ ಹಾಗೂ 75ಕ್ಕೂ ಹೆಚ್ಚು ವಯಸ್ಸಿನಲ್ಲೂ ಇರುವ ಅವರ ಅದ್ಭುತ ಕಾರ್ಯಕ್ಷಮತೆಗೆ ನಿತ್ಯ ಯೋಗಾಭ್ಯಾಸವೇ ಕಾರಣ. ವೃದ್ಧಾಪ್ಯದಲ್ಲಿ ಆರೋಗ್ಯಕ್ಕಾಗಿ ಯೋಗ ಎಂಬ ಈ ವರ್ಷದ ಥೀಮ್ ನಂತೆ ಮನೆಯಲ್ಲಿರುವ ನಮ್ಮ ತಂದೆ-ತಾಯಿ, ಅಜ್ಜ-ಅಜ್ಜಿ ಹಾಗೂ ಸಮಾಜಕ್ಕೆ ಯೋಗದ ಮಹತ್ವ ತಿಳಿಸುವುದು ಮತ್ತು ಅವರಿಂದ ಸರಳ ಆಸನಗಳನ್ನು ಮಾಡಿಸುವುದು ನಮ್ಮ ಕರ್ತವ್ಯವಾಗಿದೆ. ಯೋಗವನ್ನು ವರ್ಷದ 365 ದಿನಗಳೂ ನಮ್ಮ ಜೀವನದ ಭಾಗವಾಗಿಸಿಕೊಳ್ಳೋಣ ಎಂದರು.

ತಪೋವನದ ಡಾ.ಸುಚೇತ್ ಕುಲಕರ್ಣಿ, ನಂದಿನಿ ಮಾರ್ಗದರ್ಶನದಲ್ಲಿ ಯೋಗಾಭ್ಯಾಸ ಮಾಡಲಾಯಿತು. ಈ ಸಂದರ್ಭದಲ್ಲಿ ಜಿ.ಎಂ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಸ್.ಆರ್.ಶಂಕಪಾಲ್, ಕುಲಸಚಿವ ಡಾ.ಬಿ.ಎಸ್. ಸುನಿಲ್ ಕುಮಾರ್, ಸೌಂದರ್ಯ ದೀಪಕ್, ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಗಿರೀಶ್ ಬೋಳಕಟ್ಟಿ, ಜಿ.ಎಂ. ಹಾಲಮ್ಮ ಪಿಯು ಕಾಲೇಜಿನ ಪ್ರಾಚಾರ್ಯ ಡಾ.ಹೆಚ್.ಎಸ್.ಓಂಕಾರಪ್ಪ, ಡಾ.ಡಿ.ರವಿನಾಥ್, ಡಾ.ಶ್ವೇತಾ ಮರಿಗೌಡರ್ ಸೇರಿದಂತೆ ಡೀನ್ ಗಳು, ನಿರ್ದೇಶಕರು, ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಕಾರ್ಯಕ್ರಮದಲ್ಲಿ ಹಾಜರಿದ್ದರು.


ಪಾಂಡೋಮಟ್ಟಿಯಲ್ಲಿ ಶರಣ ಅಂಬಿಗರ ಚೌಡಯ್ಯ ಸ್ಮರಣೋತ್ಸವ

ನೇರ, ನಿಷ್ಠುರ ನುಡಿಗೆ ಹೆಸರಾಗಿದ್ದ ಚೌಡಯ್ಯ

ಚನ್ನಗಿರಿ: ಎದುರಿಗೆ ಹೊಗಳಿಕೆ, ಮರೆಯಲ್ಲಿ ತೆಗಳಿಕೆ ಇಂದಿನ ಜನರಾತ್ಮ ಆದರೆ 12ನೇ ಶತಮಾನದ ಶಿವಶರಣರ ಕಾಲದಲ್ಲಿ ನಿಷ್ಠುರವಾಗಿ, ನೇರವಾಗಿ ನುಡಿದು, ಸರ್ವಕಾಲಿಕ ಸತ್ಯವನ್ನು ಸಾರಿದ ಶರಣರಲ್ಲಿ ಶಿವಶರಣ ಅಂಬಿಗರ ಚೌಡಯ್ಯ ಮೊದಲಿಗರಾಗಿದ್ದಾರೆ ಎಂದು ಪಾಂಡೋಮಟ್ಟಿ ವಿರಕ್ತ ಮಠದ ಶ್ರೀ ಡಾ.ಗುರುಬಸವ ಸ್ವಾಮೀಜಿ ಹೇಳಿದರು.

ಚನ್ನಗಿರಿ ತಾಲೂಕಿನ ಪಾಂಡೋಮಟ್ಟಿ ವಿರಕ್ತ ಮಠದಲ್ಲಿ ಶನಿವಾರ ಏರ್ಪಡಿಸಿದ್ದ ಶರಣ ಅಂಬಿಗರ ಚೌಡಯ್ಯ ಸ್ಮರಣೋತ್ಸವ ಹಾಗೂ 884ನೇ ಮಾಸಿಕ ಶಿವಾನುಭವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಅಂಬಿಗರ ಚೌಡಯ್ಯ ಬೇಡವಾದ ಮಾತುಗಳಿಗೆ ಕಠಿಣವಾಗಿ ಹಾಕಿದರೆ ಜ್ಯೋತಿರ್ಲಿಂಗ ವಾಗುತ್ತದೆ. ತಾಯಿಯ



ಋಣ, ವಾತ್ಸಲ್ಯ, ಮಮತೆ, ಪ್ರೀತಿ ಹಾಗೂ ಕಾಳಜಿ ದುಡ್ಡುಕೊಟ್ಟರೆ ಸಿಗುವುದಿಲ್ಲ. ಶರಣರು ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಹಾಗೂ ಭೃತ್ಯಾಚಾರಗಳನ್ನು ಅಳವಡಿಸಿಕೊಂಡು ಸಮಾಜದ ಸಾರವನ್ನು ಸಾರಲು ಸರ್ವಕಾಲಕ್ಕೂ ಶಾಶ್ವತವಾದ ಸತ್ಯವನ್ನು ವಚನದಲ್ಲಿ ಸಾರಿದರು. ದೇವರು ನಿರಾಕಾರನಾಗಿದ್ದಾನೆ, ವರ್ಣವಿಲ್ಲದ, ರೂಪವಿಲ್ಲದದೇವರನ್ನು ವಿಶ್ವಕ್ಕೆ ಶಿವಲಿಂಗದ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಶಾಸಕ ಸಮರ್ಥ ಶಾಮನೂರು ಮಾತನಾಡಿ ಕಾಯಕವೇ ಕೈಲಾಸ ಎಂಬ ತತ್ವವನ್ನು ನಮ್ಮೆಲ್ಲ ಮೊದಲು ಹೇಳಿಕೊಟ್ಟರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಜೀವನರೂಪಿಸಿಕೊಳ್ಳುವ ಶಕ್ತಿ ಇದೆ. ಅವರಿಗೆ ಸಾಮಾಜಿಕ ನ್ಯಾಯ ದೊರಕಿಸುವ ಜವಾಬ್ದಾರಿ ಜನಪ್ರತಿನಿಧಿಗಳದ್ದಾಗಿದೆ. ಗುರುಪರಂಪರೆ ನಮ್ಮನ್ನು ತಿದ್ದಿತಿಡಿ ಶಕ್ತಿ ಮತ್ತು ಚೈತನ್ಯ ತುಂಬುವ ದೇವರಾಗಿದ್ದಾರೆ ಎಂದರು.

ಎಸ್.ಪಿ.ನಾಗರಾಜ ಗೌಡ, ಕಿರಣ್ ಜಾಕೋಟೆ, ಸೋರೆಕಾಯಿಯ ಬಸವರಾಜಯ್ಯ, ಟಿ.ಎಸ್.ಪ್ರಶಾಂತ್, ಸಿದ್ದನಮಠ ಎಸ್.ಆರ್.ಕುಮಾರಪ್ಪ, ಮುಟಾಳ್ ಲಲಿತಮ್ಮ, ಬೆಂಕಿಕೆರೆಎಸ್. ಚಂದ್ರಶೇಖರ್, ಹೋಚಿನಹಳ್ಳಿ ಜಯಮ್ಮ, ಅತ್ತಿಮೊಗ್ಗೆ ಚಂದ್ರಶೇಖರ್, ಎಂ.ಯು.ಚನ್ನಬಸಪ್ಪ, ಧನಂಜಯ್, ಎಂ.ಬಿ.ನಾಗರಾಜ್ ಕಾಕನೂರು, ಟಿ.ವಿ.ಚಂದ್ರಪ್ಪ, ಶಿವಮೂರ್ತಿ ತರರು ಕಾರ್ಯಕ್ರಮದಲ್ಲಿ ಇದ್ದರು.

ಸಂಪಾದಕೀಯ

ಪ್ರಜೆಗಳ ಧ್ವನಿಗೆ ವೇದಿಕೆ

ರಾಜ್ಯದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಅವುಗಳಿಗೆ ತ್ವರಿತ ಪರಿಹಾರ ಒದಗಿಸುವ ಉದ್ದೇಶದಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ 'ಪ್ರಜಾಸೇವೆ' ಎಂಬ ಹೊಸ ಇಲಾಖೆಯನ್ನು ಸ್ಥಾಪಿಸಲು ಮುಂದಾಗಿರುವುದು ಗಮನಾರ್ಹ ಬೆಳವಣಿಗೆ. ಸರ್ಕಾರ ಮತ್ತು ಜನರ ನಡುವಿನ ಅಂತರವನ್ನು ಕಡಿಮೆ ಮಾಡುವ ಪ್ರಯತ್ನವಾಗಿ ಈ ನಿರ್ಧಾರವನ್ನು ನೋಡಬಹುದು. ಜನಸಾಮಾನ್ಯರು ತಮ್ಮ ಸಮಸ್ಯೆಗಳನ್ನು ಎಲ್ಲಿ, ಯಾರ ಮುಂದೆ ಮಂಡಿಸಬೇಕು ಎಂಬ ಗೊಂದಲವನ್ನು ನಿವಾರಿಸುವ ನಿಟ್ಟಿನಲ್ಲಿ ಈ ಇಲಾಖೆ ಮಹತ್ವದ ಪಾತ್ರ ವಹಿಸುವ ನಿರೀಕ್ಷೆಯಿದೆ.

ಸಾಮಾನ್ಯವಾಗಿ ಜನರು ಸರ್ಕಾರಿ ಕಚೇರಿಗಳ ಬಾಗಿಲು ತಟ್ಟಿದಾಗ, ಅವರ ಅರ್ಜಿಗಳು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಾವಣೆಯಾಗುತ್ತಲೇ ಇರುತ್ತವೆ. ಸಮಸ್ಯೆಗಳ ಪರಿಹಾರಕ್ಕೆ ತಿಂಗಳುಗಳು, ಕೆಲವೊಮ್ಮೆ ವರ್ಷಗಳೂ ಬೇಕಾಗುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಕುಂದುಕೊರತೆಗಳ ನಿರ್ವಹಣೆಗೆ ಕೇಂದ್ರೀಕೃತ ವ್ಯವಸ್ಥೆ ರೂಪಿಸುವ ಸರ್ಕಾರದ ನಿರ್ಧಾರ ಸ್ವಾಗತಾರ್ಹವಾಗಿದೆ. ಸಚಿವ ಸಂಪುಟದಿಂದ ಅನುಮೋದನೆ ಪಡೆದಿರುವ 'ಪ್ರಜಾಸೇವೆ' ಇಲಾಖೆ ನಾಗರಿಕರ ಅಹವಾಲುಗಳನ್ನು ದಾಖಲಿಸುವುದಕ್ಕೆ ಅಲ್ಲ, ಅವುಗಳ ಪರಿಹಾರ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನೂ ವಹಿಸಿಕೊಳ್ಳಲಿದೆ ಎಂಬುದು ವಿಶೇಷ.

ಈ ಇಲಾಖೆಗೆ ಒಬ್ಬರು ಸಚಿವರು ಹಾಗೂ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸುವ ಯೋಜನೆ ಸರ್ಕಾರದ ಗಂಭೀರತೆಯನ್ನು ತೋರಿಸುತ್ತದೆ. ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಚಿವರು ಮತ್ತು ಸ್ಥಳೀಯ ಶಾಸಕರು ವಾರಕ್ಕೊಮ್ಮೆ ಸಭೆ ನಡೆಸಿ, ಜನರ ಅಹವಾಲುಗಳನ್ನು ಆಲಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ. ಜನರು ರಾಜಧಾನಿಗೆ ಬರುವ ಅಗತ್ಯವಿಲ್ಲದೆ ತಮ್ಮ ಕ್ಷೇತ್ರದಲ್ಲೇ ಸಮಸ್ಯೆಗಳನ್ನು ಮಂಡಿಸಲು ಅವಕಾಶ ಸಿಗುವುದು ಈ ಯೋಜನೆಯ ಪ್ರಮುಖ ಅಂಶವಾಗಿದೆ. ಆದರೆ, ಯಾವುದೇ ಹೊಸ ವ್ಯವಸ್ಥೆಯ ಯಶಸ್ಸು ಅದರ ಘೋಷಣೆಯಲ್ಲಿ ಅಲ್ಲ, ಅನುಷ್ಠಾನದಲ್ಲಿ ಅಡಗಿದೆ. 'ಪ್ರಜಾಸೇವೆ' ಇಲಾಖೆ ಮತ್ತೊಂದು ಆಡಳಿತಾತ್ಮಕ ಹಂತವಾಗಿ ಪರಿಗಣಿಸದೆ, ನಿಜವಾಗಿಯೂ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವೇದಿಕೆಯಾಗಬೇಕಿದೆ. ಸಾರ್ವಜನಿಕರು ಸಲ್ಲಿಸುವ ಅರ್ಜಿಗಳಿಗೆ ನಿಗದಿತ ಅವಧಿಯಲ್ಲಿ ಸ್ಪಂದನೆ ನೀಡುವುದು, ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ಮತ್ತು ಪರಿಹಾರದ ಪ್ರಗತಿಯನ್ನು ಪಾರದರ್ಶಕವಾಗಿ ತಿಳಿಸುವುದು ಅತ್ಯಗತ್ಯ. ಇಲ್ಲವಾದರೆ ಜನರ ನಿರೀಕ್ಷೆಗಳು ಹುಸಿಯಾಗುವ ಸಾಧ್ಯತೆಯೂ ಇದೆ.

ಇತ್ತೀಚಿನ ದಿನಗಳಲ್ಲಿ ವಿವಿಧ ಬೇಡಿಕೆಗಳಿಗಾಗಿ ಪ್ರತಿಭಟನೆಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನ ಸೆಳೆದಿದೆ. ಪ್ರತಿಭಟನೆಗಳ ಹಿಂದಿರುವ ಅಸಮಾಧಾನವನ್ನು ಅರಿತು, ಸಮಸ್ಯೆಗಳಿಗೆ ಮುಂಚಿತವಾಗಿ ಸ್ಪಂದಿಸುವ ವ್ಯವಸ್ಥೆಯನ್ನು ರೂಪಿಸುವುದು ಉತ್ತಮ ಆಡಳಿತದ ಲಕ್ಷಣವಾಗಿದೆ. ಈ ದೃಷ್ಟಿಯಿಂದ 'ಪ್ರಜಾಸೇವೆ' ಇಲಾಖೆಯ ಪರಿಕಲ್ಪನೆ ಮಹತ್ವ ಪಡೆದುಕೊಳ್ಳುತ್ತದೆ.

ಒಟ್ಟಾರೆ, 'ಪ್ರಜಾಸೇವೆ' ಇಲಾಖೆ ಜನರ ಸಮಸ್ಯೆಗಳನ್ನು ನೇರವಾಗಿ ಸರ್ಕಾರದ ಗಮನಕ್ಕೆ ತಂದು, ಪರಿಹಾರದ ಪ್ರಕ್ರಿಯೆಯನ್ನು ವೇಗಗೊಳಿಸುವ ಸಾಮರ್ಥ್ಯ ಹೊಂದಿದೆ. ರಾಜಕೀಯ ಘೋಷಣೆಯಾಗಿ ಉಳಿಯದೆ, ಜನಸೇವೆಯ ಪರಿಣಾಮಕಾರಿ ಸಾಧನವಾಗಿ ರೂಪುಗೊಂಡರೆ, ಇದು ಕರ್ನಾಟಕದ ಆಡಳಿತ ವ್ಯವಸ್ಥೆಯಲ್ಲಿ ಜನಸ್ಪಂದನಕ್ಕೆ ಹೊಸ ಮಾನದಂಡವನ್ನು ಸ್ಥಾಪಿಸಬಹುದು.

'ಬಾಲ್ಕನೀಕರಣ'ದ ಅಪಾಯಗಳು

ಭಾರತವನ್ನು ದುರ್ಬಲಗೊಳಿಸಲು ಕಟಿಬದ್ಧರಾಗಿರುವವರು ವಿದೇಶಿ ಶಕ್ತಿಗಳೊಡನೆ ಕೈಜೋಡಿಸಿ, ದೇಶವನ್ನು ಬಾಲ್ಕನೀಕರಣಗೊಳಿಸುವ ಪಿತೂರಿ ಮಾಡುತ್ತಿದ್ದಾರೆ.

▸ ಗುರುಪ್ರಸಾದ ಭಟ್ ಉಡುಪಿ

ಆಂತರಿಕ ಬಿರುಕುಗಳನ್ನು ಸೃಷ್ಟಿಸಿ, ತನ್ಮೂಲಕ ಸದೃಢ ರಾಷ್ಟ್ರಗಳನ್ನು ಹೇಗೆ ವಿಭಜಿಸಬಹುದು ಎಂದು ಲೆಕ್ಕಾಚಾರ ಮಾಡಿ, ಅದಕ್ಕೆ ಬೇಕಾಗುವ ಸೈದ್ಧಾಂತಿಕ ಮತ್ತು ಧನ ಸಮರ್ಥನೆ ನೀಡಿ ಅವುಗಳನ್ನು ಕೆಡವುವರ ಹಿಂದೆ ಅದೆಷ್ಟೋ ಅಗೋಚರ ಅಂತಾರಾಷ್ಟ್ರೀಯ ಶಕ್ತಿಗಳ ಹುನ್ನಾರವಿದೆ.

ವಿಶ್ವದ ಇತಿಹಾಸವನ್ನು ಗಮನಿಸಿದರೆ, ರಾಷ್ಟ್ರಗಳು ಯಾವಾಗಲೂ ವಿದೇಶಿ ಆಕ್ರಮಣಗಳಿಂದಮಾತ್ರ ವಿಭಜನೆಯಾಗುವುದಿಲ್ಲಎಂಬುದು ಸ್ಪಷ್ಟವಾಗುತ್ತದೆ. ಅನೇಕ ಬಾರಿ ಒಂದು ದೇಶವನ್ನು ದುರ್ಬಲಗೊಳಿಸುವ ಅತ್ಯಂತ ಪರಿಣಾಮಕಾರಿವಿಧಾನವೆಂದರೆ ಅದರೊಳಗೇ ಇರುವ ಬಿರುಕುಗಳನ್ನು ಬಳಸಿಕೊಳ್ಳುವುದು. ಭಾಷೆ, ಜನಾಂಗ, ಧರ್ಮ, ಮತ, ಪ್ರದೇಶ, ಬುಡಕಟ್ಟು, ವರ್ಗ ಅಥವಾ ಸೈದ್ಧಾಂತಿಕ ಭಿನ್ನತೆಗಳು ಕ್ರಮೇಣ ಒಂದು ಸದೃಢ ರಾಷ್ಟ್ರವನ್ನು ಸಣ್ಣ-ಸಣ್ಣ ರಾಜಕೀಯಘಟಕಗಳಾಗಿ ಒಡೆಯುವ ಆಧಾರಗಳಾಗುತ್ತವೆ. ಈ ಪ್ರಕ್ರಿಯೆಯನ್ನೇ ಬಾಲ್ಕನೀಕರಣ (Balkanization) ಎಂದು ಕರೆಯಲಾಗುತ್ತದೆ.

ಈ ಪದವು ಆಗ್ನೇಯ ಯುರೋಪಿನ 'ಬಾಲ್ಕನ್' ಪ್ರದೇಶದಿಂದ ಬಂದಿದೆ. 19ನೇ ಮತ್ತು 20ನೇ ಶತಮಾನಗಳಲ್ಲಿ ಅಲ್ಲಿನ ಪ್ರಬಲ ರಾಜಕೀಯ ಸಾಮ್ರಾಜ್ಯಗಳು ಮತ್ತು ಒಕ್ಕೂಟಗಳು ಅನೇಕ ಸಣ್ಣಸಣ್ಣ ರಾಷ್ಟ್ರಗಳಾಗಿ ವಿಭಜನೆಯಾದವು. ಇಂದು ಈ ಪದವನ್ನು ವಿಶಾಲ ಅರ್ಥದಲ್ಲಿ ಬಳಸಲಾಗುತ್ತಿದ್ದು, ಒಂದು ದೇಶವು ಅನೇಕ ಸಣ್ಣ, ಪರಸ್ಪರ ಸ್ಪರ್ಧಾತ್ಮಕ ಅಥವಾ ದುರ್ಬಲ ಘಟಕಗಳಾಗಿ ಒಡೆಯುವ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಯಾವುದೇ ಒಂದು ರಾಷ್ಟ್ರವನ್ನು ವಿಭಜನೆ ಮಾಡುವ ಮೊದಲು ಅಲ್ಲಿನ ಜನತೆಯ ಮನಸ್ಸಿನಲ್ಲಿ ವಿಭಜನೆಯನ್ನು ಬಿತ್ತಲಾಗುತ್ತದೆ, ಒಂದಾಗಿ ಬಾಳುವ ಸಮಾಜವನ್ನು ಜಾತಿ, ಧರ್ಮ-ಮತ, ಭಾಷೆ, ಬಲ್ಲಿದ-ಬಡವ ಇತ್ಯಾದಿ ಕಾರಣಗಳನ್ನೊಡ್ಡಿ ಒಡೆಯಲಾಗುತ್ತದೆ. ಸಮಾಜದ ಒಂದು ನಿರ್ದಿಷ್ಟ ಗುಂಪಿನಲ್ಲಿ 'ನಮ್ಮನ್ನು ಬಲಿಪಶು ಮಾಡಲಾಗಿದೆ' (Victimisation ಅಥವಾ ಶೋಷಣೆಗೆ ಒಳಪಡಿಸಲಾಗಿದೆ) ಎಂಬ ಕಹಿ ಭಾವನೆಯನ್ನು ಹುಟ್ಟುಹಾಕುವುದು, ಅವರನ್ನು ಸಮಾಜದ ಇತರರಿಂದ ಬೇರ್ಪಡಿಸುವ, ಮತ್ತು ಆ ಮೂಲಕ ರಾಜಕೀಯ ಲಾಭಕ್ಕಾಗಿ ಆ ಭಿನ್ನತೆಯನ್ನು ಬಳಸಿಕೊಳ್ಳುವ ಪ್ರಕ್ರಿಯೆ ವಿಭಜನೆಯ ಮೊದಲ ಹೆಜ್ಜೆಯಾಗಿದೆ.

ಜಿನ್ನಾ ನಾವು ಮುಸ್ಲಿಮರು, ನಮಗೆ ಹಿಂದೂಗಳ ಜೊತೆಗೆ ಇರಲು ಸಾಧ್ಯವಿಲ್ಲ ನಮಗೆ ಪ್ರತ್ಯೇಕ ದೇಶ ಬೇಕು ಎಂದು ಪಟ್ಟು ಹಿಡಿದು, 1926 ರಲ್ಲಿ ಮುಸ್ಲಿಂ ಲೀಗ್ ಬಿತ್ತಿದ್ದ ವಿಷಬೀಜ 1947ರ ಹೊತ್ತಿಗೆ ಹೆಮ್ಮರವಾಗಿ, ಕೊನೆಗೆ ಭಾರತ ಇಬ್ಭಾಗವಾಯಿತು. ಈ ವಿಭಜನೆ ಮಾಡುವ ಪ್ರಕ್ರಿಯೆ 1947 ಕ್ಕೇ ಕೊನೆಯಾಗಲಿಲ್ಲ, ಸ್ವಾತಂತ್ರ್ಯ ಲಭಿಸಿ 78 ವರ್ಷಗಳು ಕಳೆದರೂ ದೇಶದ ಒಳ-ಹೊರಗಿನ ಶತ್ರುಗಳು ದೇಶವನ್ನು ದುರ್ಬಲಗೊಳಿಸಲು, ಅರಾಜಕತೆ ಸೃಷ್ಟಿಸಲು ಇಂತಹ 'ಬಾಲ್ಕನೀಕರಣ' ಸೂಜಿಬಗಳನ್ನು ನಿರಂತರವಾಗಿ ಹುಟ್ಟುಹಾಕುತ್ತಲೇ ಇರುತ್ತಾರೆ.

ವಿಶ್ವಾದ್ಯಂತ ಇಂತಹ ಕೆಲವೊಂದು ಬಾಲ್ಕನೀಕರಣಗಳು ನಡೆದವು. ಉದಾಹರಣೆಗೆ ಪೂರ್ವ ಯುರೋಪ್ಯ ಭಾಗದಲ್ಲಿದ್ದ ಯುಗೋಸ್ಲಾವಿಯ ಮತ್ತು ಜೆಕೊಸ್ಲೊವಾಕಿಯಾ ದೇಶಗಳು. ಇವುಗಳು ಅದೆಷ್ಟು ಬಾರಿ ತುಂಡರಿಸಲ್ಪಟ್ಟಿದೆ ಎಂದರೆ, ಅದರ ಮೂಲ ಸ್ವರೂಪವೇ ಊಹಿಸಿಕೊಳ್ಳಲಾಗದಷ್ಟು ಬದಲಾಗಿದೆ. ಒಂದಾಗಿ ಬಲಿಷ್ಠವಾಗಿದ್ದ ದೇಶ, ಬಾಲ್ಕನೀಕರಣಕ್ಕೊಳಪಟ್ಟು ಪರಸ್ಪರ ಕಚ್ಚಾಡಿಕೊಂಡು, ಈಗ ಪರಾವಲಂಬಿಗಳಾಗಿವೆ.

ಬಾಲ್ಕನೀಕರಣ ಹೇಗೆ ನಡೆಯುತ್ತದೆ?

ಒಂದು ದೇಶವು ಒಂದೇ ದಿನದಲ್ಲಿ ವಿಭಜನೆಯಾಗುವುದಿಲ್ಲ. ಈ ಪ್ರಕ್ರಿಯೆ ಸಾಮಾನ್ಯವಾಗಿ ಹಲವು ಹಂತಗಳಲ್ಲಿ ನಡೆಯುತ್ತದೆ. ಮೊದಲಿಗೆ, ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ, ಭಾಷಿಕ, ಧಾರ್ಮಿಕ ಅಥವಾ ಜನಾಂಗೀಯ ಭಿನ್ನತೆಗಳನ್ನು ಹೆಚ್ಚಾಗಿ ಪ್ರಚೋದಿಸಲಾಗುತ್ತದೆ. ದೀರ್ಘಕಾಲ ಒಟ್ಟಾಗಿ ಬದುಕಿದ್ದ ಜನರು ತಮ್ಮನ್ನು ಮೊದಲು ರಾಷ್ಟ್ರದ ಪ್ರಜೆಗಳೆಂದು ಅಲ್ಲ, ಬದಲಾಗಿ ತಮ್ಮ ಸಣ್ಣ ಗುಂಪಿನ ಸದಸ್ಯರೆಂದು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ. ಉದಾಹರಣೆಗೆ: ಅಹಿಂದ, ಬ್ರಾಹ್ಮಣ, ದ್ರಾವಿಡ-ಆರ್ಯ, ಅಲ್ಪ-ಸಂಖ್ಯಾತರು, ಮೂಲನಿವಾಸಿಗಳು, ಭಾಷಾಂಧತೆ, ಇತ್ಯಾದಿ. ಒಂದು ಬಣಕ್ಕೆ ಶಸ್ತ್ರಾಸ್ತ್ರ ನೀಡಿ ಇನ್ನೊಂದು ಬಣದ ವಿರುದ್ಧ ಹಿಂಸಾಚಾರಕ್ಕೆ ಇಂಬು ನೀಡಲಾಗುತ್ತದೆ. ಅವರು ಪ್ರತಿಕ್ರಿಯಿಸಿದಾಗ, ಗಲಭೆ ಉಲ್ಬಣಗೊಳ್ಳುತ್ತದೆ. ಆ ಬೆಂಕಿಯಲ್ಲಿ ಅಂತರಿಕ ಶತ್ರುಗಳು ಮೈ ಕಾಯಿಸಿಕೊಳ್ಳುವುದಲ್ಲದೆ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಜನಸಾಮಾನ್ಯರ ಜೀವನ ಅಸ್ತವ್ಯಸ್ತವಾಗಿ, ಸಮಾಜ ಅಲ್ಲೋಲಕಲ್ಲೋಲವಾಗುತ್ತದೆ.

ಎರಡನೆಯದಾಗಿ, ಐತಿಹಾಸಿಕ ಅನ್ಯಾಯಗಳು, ಅಸಮಾಧಾನಗಳು ಮತ್ತು ಪ್ರಾದೇಶಿಕ ಭಾವನೆಗಳನ್ನು ಆಧರಿಸಿದ ರಾಜಕೀಯ ಚಳುವಳಿಗಳು ಉದಯಿಸುತ್ತವೆ. ಇವು ಸ್ವಾಯತ್ತತೆ, ವಿಶೇಷ ಹಕ್ಕುಗಳು, ಪ್ರತ್ಯೇಕ ಆಡಳಿತ ಅಥವಾ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಗಳನ್ನು ಮುಂದಿಡುತ್ತವೆ.

ಮೂರನೆಯದಾಗಿ, ರಾಷ್ಟ್ರೀಯ ಸಂಸ್ಥೆಗಳ ಮೇಲಿನ ನಂಬಿಕೆ ಕುಗ್ಗುವಂತೆ ಜನರ 'ಬ್ರೇನ್‌ವಾಷಿಂಗ್' ಮಾಡುವುದು. ಜನರು ರಾಷ್ಟ್ರದ ನಾಯಕರಿಗಿಂತ ತಮ್ಮ ಸ್ಥಳೀಯ, ಭಾಷೀಯ, ವರ್ಗೀಯ, ಮತೀಯ, ಪ್ರಾದೇಶಿಕ, ಧಾರ್ಮಿಕ, ಅಥವಾ ಜನಾಂಗೀಯ ನಾಯಕರೊಂದಿಗೆ ಹೆಚ್ಚು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ. ಮತಭೇದದಿಂದ ಪ್ರಾರಂಭಗೊಳ್ಳುವ ಈ ಪ್ರಕ್ರಿಯೆ ಮನಭೇದಕ್ಕೆ ತಿರುಗಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ: ವಿಫಲಗೊಂಡ ವೋಟ್-ಚೋರಿ ಆಪಾದನೆ, ಸಾಂವಿಧಾನಿಕ ಕೇಂದ್ರೀಯ ಸ್ವಾಯತ್ತ ಸಂಸ್ಥೆಗಳ ಮೇಲೆ ಆರೋಪ, ಕಲ್ಪಿತ ಕತೆಗಳ ಸೃಷ್ಟಿ ಮತ್ತು ಸುಳ್ಳನ್ನೇ ನಿಜವೆಂದು ತಿಳಿಸುವ ವ್ಯಾಪಾರೀ-ಮಾಧ್ಯಮಗಳ ಮೂಲಕ ಮಾಡುವ ವ್ಯಾಪಕ ಪ್ರಚಾರ.

ಕೊನೆಯ ಹಂತದಲ್ಲಿ ರಾಜಕೀಯ ವಿಭಜನೆ ಸಂಭವಿಸುತ್ತದೆ. ಇದು ಕೆಲವೊಮ್ಮೆ ಮಾತುಕತೆ ಮತ್ತು ಒಪ್ಪಂದಗಳ ಮೂಲಕ ಶಾಂತಿಯುತವಾಗಿ ನಡೆಯಬಹುದು; ಮತ್ತೆ ಕೆಲವೊಮ್ಮೆ ಹಿಂಸಾಚಾರ, ಗಲಭೆಗಳು ಅಥವಾ ಅಂತರಿಕ ಯುದ್ಧದ ಸ್ವರೂಪವನ್ನು ಪಡೆಯಬಹುದು.

ಯುಗೋಸ್ಲಾವಿಯಾದ ಉದಾಹರಣೆ

ಆಧುನಿಕ ಯುಗದಲ್ಲಿ ಬಾಲ್ಕನೀಕರಣದ ಅತ್ಯಂತ ಸ್ಪಷ್ಟ ಉದಾಹರಣೆ ಯುಗೋಸ್ಲಾವಿಯಾ ರಾಷ್ಟ್ರ. ದ್ವಿತೀಯ ಮಹಾಯುದ್ಧದ ನಂತರ ಯುಗೋಸ್ಲಾವಿಯಾ ಹಲವು ಗಣರಾಜ್ಯಗಳು ಮತ್ತು ವೈವಿಧ್ಯಮಯ ಸಮಾಜ ಮತ್ತು ಜನಾಂಗಗಳನ್ನು ಒಳಗೊಂಡ ಒಂದು ಒಕ್ಕೂಟ ರಾಷ್ಟ್ರವಾಗಿತ್ತು. ಹೊರಗೆ ಅದು ಏಕೀಕೃತ ದೇಶದಂತೆ ಕಂಡರೂ, ಅದರೊಳಗೆ ಜನಾಂಗೀಯ, ಧಾರ್ಮಿಕ ಮತ್ತು ಐತಿಹಾಸಿಕ ಭಿನ್ನತೆಗಳು ಜೀವಂತವಾಗಿಯೇ ಇದ್ದವು. ಅವೆಲ್ಲವನ್ನು ಒಂದು ಸೂತ್ರದಲ್ಲಿ ಕಟ್ಟುವ ವ್ಯವಸ್ಥೆ - ''ನಾವೆಲ್ಲ ಒಂದು'' ಎನ್ನುವ ಅಚಲ ದೇಶಪ್ರೇಮ - ಅಲ್ಲಿ ಪ್ರಾಯಶಃ ಉತ್ಕಟವಾಗಿರಲಿಲ್ಲ, ಅದೇ ಅದರ ಪ್ರಮುಖ ದೌರ್ಬಲ್ಯವೆಂದು ಸಾಬೀತಾಯಿತು.

20ನೇ ಶತಮಾನದ ಕೊನೆಯ ಭಾಗದಲ್ಲಿ ಕೇಂದ್ರೀಯ ಸರ್ಕಾರದ ಪ್ರಭಾವ ಮತ್ತು ಹಿಡಿತ ದುರ್ಬಲವಾಗುತ್ತಿದ್ದಂತೆ, ಅನೇಕ ಪ್ರಾದೇಶಿಕ ರಾಷ್ಟ್ರೀಯತೆಯ ಚಳುವಳಿಗಳು ಬಲಗೊಂಡವು. 1990ರ ದಶಕದಿಂದ ಆರಂಭವಾಗಿ ಯುಗೋಸ್ಲಾವಿಯಾ ಕ್ರಮೇಣ ಅನೇಕ ರಾಷ್ಟ್ರಗಳಾಗಿ ವಿಭಜನೆಯಾಯಿತು. ಯುದ್ಧ, ರಕ್ತಪಾತ, ವೈಮನಸ್ಯಗಳ ನಡುವೆ ಒಂದೇ ರಾಷ್ಟ್ರವಾಗಿದ್ದ ಯುಗೋಸ್ಲಾವಿಯಾ ಈಗ ಹರಿದು ಹಂಚಿ ಅನೇಕ ಸ್ವತಂತ್ರ ದೇಶಗಳಾಗಿವೆ. ಸ್ಲೋವೇನಿಯಾ, ಕ್ರೊಯೇಷಿಯಾ, ಬೋಸ್ನಿಯಾ-ಹರ್ಜೆಗೋವಿನಾ, ಉತ್ತರ ಮ್ಯಾಸಿಡೋನಿಯಾ, ಸರ್ಬಿಯಾ, ಮಾಂಟೆನೆಗ್ರೊ ಹಾಗೂ ಕೊಸೊವೊ ಎಂಬ ಏಳು ಪ್ರತ್ಯೇಕ ಘಟಕಗಳಾಗಿ ಮಾರ್ಪಟ್ಟಿತು! ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ನಖಶಿಖಾಂತ ಅಲರ್ಜಿ.

ಪರಿಣಾಮ

ಈ ಬಾಲ್ಕನೀಕರಣ ಪ್ರಕ್ರಿಯೆಯಲ್ಲಿ ಅಸಂಖ್ಯ ಅಂತರಿಕ ಯುದ್ಧಗಳು, ಜನಾಂಗೀಯ ಘರ್ಷಣೆಗಳು, ಆರ್ಥಿಕ ಕುಸಿತ ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ ಅಸಂಖ್ಯ ಅಮಾಯಕ ಪ್ರಜೆಗಳ ಮಾರಣಹೋಮ ಜರುಗಿತು. ಶತಮಾನಗಳಿಂದ ನೆಲೆಸಿದ್ದ ಜನರು ಭಾಷೆ, ಜನಾಂಗ, ಮತಗಳ ಆಧಾರದ ಮೇಲೆ ಗುಳೆ ಎದ್ದು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು. ಸುಮಾರು 150,000 ಜನರು ಸಾವಿಗೀಡಾದರು. ಪುರುಷರು ಯುದ್ಧ ಘರ್ಷಣೆಯಲ್ಲಿ ಮಡಿದರೆ, ಸ್ತ್ರೀಯರು ಮತ್ತು ಮಕ್ಕಳು ಅನಾಥರಾದರು. ರೋಗರುಜಿನಗಳು ಉಲ್ಬಣಗೊಂಡವು. ಒಮ್ಮೆ ಪ್ರಭಾವಶಾಲಿಯಾಗಿದ್ದ ಯುಗೋಸ್ಲಾವಿಯಾದ ಭೌಗೋಳಿಕ ಮತ್ತು ರಾಜಕೀಯ ಶಕ್ತಿ ಸಂಪೂರ್ಣವಾಗಿ ನಾಶವಾಯಿತು. ಇಂದು ಬಲಹೀನ ತುಂಡು ರಾಷ್ಟ್ರಗಳಾಗಿ, ಇತರ ಹಿರಿಯಣ್ಣರ ಮರ್ಜಿಯಂತೆ ನಡೆಯಬೇಕಾದ ದುಸ್ಥಿತಿ ಬಂದೊದಗಿದೆ.

ಅಂತೆಯೇ, ಜೆಕೊಸ್ಲೊವಾಕಿಯಾದ ಕಥೆಕೂಡ. ಯುಗೋಸ್ಲಾವಿಯಾದಂತೆ ಹಿಂಸಾಚಾರದ ಮೂಲಕ ಅಲ್ಲ, ಶಾಂತಿಯುತ ಮಾತುಕತೆಗಳ ಮೂಲಕ ಈ ದೇಶ ವಿಭಜನೆಯಾಯಿತು. ಸೋವಿಯತ್ ಕಮ್ಯುನಿಸ್ಟ್ ಆಡಳಿತದ ಪತನದ ನಂತರ ಜೆಕ್ ಮತ್ತು ಸ್ಲೋವಾಕ್ ಜನಾಂಗದ ನಾಯಕರು ಪ್ರತ್ಯೇಕ ರಾಷ್ಟ್ರಗಳಾಗಿರುವುದೇ ತಮ್ಮ ಜನರ ಹಿತಕ್ಕೆ ಅನುಕೂಲಕರ ಎಂದು ನಿರ್ಧರಿಸಿದರು. 1993 ರಲ್ಲಿ ಜೆಕೊಸ್ಲೊವಾಕಿಯಾ ಶಾಂತಿಯುತವಾಗಿ ಎರಡು ರಾಷ್ಟ್ರಗಳಾಗಿ ವಿಭಜನೆಯಾಯಿತು- ಜೆಕ್ ಗಣರಾಜ್ಯ ಮತ್ತು ಸ್ಲೋವಾಕಿಯಾ. ಈ ಘಟನೆಯನ್ನು 'ಮಖಮಲ್ಲು ವಿಚ್ಛೇದನ' (Velvet Divorce) ಎಂದು ಹೆಸರಿಸಿ, ಬಾಲ್ಕನೀಕರಣವನ್ನು ಪ್ರಚೋದಿಸಿ ಸಮರ್ಥಿಸುವ ವಿಶ್ವನಾಯಕರು ಚಪ್ಪಾಳೆ ತಟ್ಟಿದರು.

ವಿಭಜನೆಗೆ ಸಾಮಾನ್ಯವಾಗಿ ಬಳಸಲಾಗುವ 6 ಪ್ರಮುಖ ಬಿರುಕುಗಳು

ಜನಾಂಗೀಯ ಭಿನ್ನತೆ, ಧಾರ್ಮಿಕ ಭಿನ್ನತೆ, ಭಾಷಾಧಾರಿತ ಅಸ್ಮಿತೆ, ಪ್ರಾದೇಶಿಕ ಆರ್ಥಿಕ ಅಸಮಾನತೆ, ಐತಿಹಾಸಿಕ ಅಸಮಾಧಾನಗಳು, ಬುಡಕಟ್ಟು ಅಥವಾ ಸಮುದಾಯ ಗುರುತು ಮತ್ತು ಸೈದ್ಧಾಂತಿಕ ಧ್ರುವೀಕರಣ.

ಇವುಗಳಲ್ಲಿ, ಯಾವುದಾದರೂ ಮೂರ್ನಾಲ್ಕು ಬಿರುಕುಗಳು ರಾಷ್ಟ್ರೀಯ ಗುರುತಿಗಿಂತ ಪ್ರಬಲವಾಗಲು ಆರಂಭಿಸಿದಾಗ, ರಾಷ್ಟ್ರದ ಏಕತೆಗೆ ದುಷ್ಪರಿಣಾಮ ಬೀರುತ್ತದೆ. ಅದರ ಆರ್ಥಿಕ ಸಂಪನ್ಮೂಲಗಳು, ವಿಶಾಲ ಮಾರುಕಟ್ಟೆ, ಬಲಿಷ್ಠ ಸೇನೆ ಮತ್ತು ಹೆಚ್ಚಿನ ರಾಜತಾಂತ್ರಿಕ ಪ್ರಭಾವಗಳು ಕ್ರಮೇಣ ದುರ್ಬಲವಾಗುತ್ತವೆ. ಒಂದು ಬಲಿಷ್ಠ ರಾಷ್ಟ್ರ ಅನೇಕ ಸಣ್ಣ ಘಟಕಗಳಾಗಿ ವಿಭಜನೆಯಾದರೆ, ಅದರ ಒಟ್ಟಾರೆ ಶಕ್ತಿ ಕುಗ್ಗುತ್ತದೆ. ತುಂಡರಿಸಲ್ಪಟ್ಟ ಸಣ್ಣ ಸಣ್ಣ ರಾಷ್ಟ್ರಗಳು ಸೇನಾ ಸುರಕ್ಷತೆ, ಅಂತರಿಕ ಭದ್ರತೆ, ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹೂಡಿಕೆಗಳಿಗಾಗಿ ಹೊರಗಿನ ಶಕ್ತಿಗಳ ಪರಾವಲಂಬಿತವಾಗುವ ಸಾಧ್ಯತೆ ಹೆಚ್ಚುತ್ತದೆ. ಈ ಕಾರಣದಿಂದಲೇ ರಾಷ್ಟ್ರೀಯ ಏಕತೆ ಮತ್ತು ಸಾಮೂಹಿಕ ಗುರುತನ್ನು ಅನೇಕ ರಾಜಕೀಯ ಚಿಂತಕರು ರಾಷ್ಟ್ರದ ದೀರ್ಘಕಾಲೀನ ಶಕ್ತಿಯ ಮೂಲವೆಂದು ಪರಿಗಣಿಸುತ್ತಾರೆ.

ಬಾಲ್ಕನೀಕರಣಗೊಂಡ ಈ ಎರಡೂ ಯುರೋಪ್ಯ ರಾಷ್ಟ್ರಗಳು ಭಾರತಕ್ಕೆ ಒಂದು ಪ್ರಮುಖ ಪಾಠವನ್ನು ಕಲಿಸುತ್ತವೆ. ದೇಶವನ್ನು ಆಳುವ ಪಕ್ಷವನ್ನು ವಿರೋಧಿಸುತ್ತಲೇ, ಅದರ ನಾಯಕ ಹಾಗೂ ಪ್ರಧಾನಮಂತ್ರಿಯನ್ನು ದ್ವೇಷಿಸುತ್ತಲೇ, ಬಹುತೇಕ ಎಲ್ಲ ರಾಜಕೀಯ ವಿರೋಧ ಪಕ್ಷಗಳು ಇಂದು ಹಿಂದೂ ವಿರೋಧಿ ಹಾಗೂ ದೇಶ ವಿರೋಧಿ ಕಾರ್ಯವನ್ನೆಸಗಲು ಹಿಂಜರಿಯುತ್ತಿಲ್ಲ.

ಭಾರತವನ್ನು ದುರ್ಬಲಗೊಳಿಸಲು ಕಂಕಣಬದ್ಧರಾಗಿರುವವರು ವಿದೇಶಿ ಶಕ್ತಿಗಳೊಡನೆ ಪುಲ್ಲಂಖುಲ್ಲಾ ಕೈಜೋಡಿಸಿ, ದೇಶವನ್ನು ಬಾಲ್ಕನೀಕರಣದತ್ತ ಸಾಗಿಸಬೇಕೆನ್ನುವ ಪಿತೂರಿ ನಿರಂತರವಾಗಿ ಮಾಡುತ್ತಿದ್ದಾರೆ. ಇದು ದೇಶದ ಮೇಲೆ ದುಷ್ಪರಿಣಾಮ ಬೀರದಂತೆ ತಡೆಯಲು ಪ್ರತಿಯೊಬ್ಬ ದೇಶಭಕ್ತನೂ ಎಚ್ಚರಿಕೆಯಿಂದಿರಬೇಕು.

ಅಂತರಿಕ ಸಾಮರಸ್ಯವೇ ರಾಷ್ಟ್ರದ ಬಲ. ಕೇವಲ ಗಡಿಗಳಲ್ಲಿ ಮಾತ್ರ ಇರುವುದಿಲ್ಲ; ಅದರ ಜನರನ್ನು ಒಗ್ಗೂಡಿಸುವ ಸಾಮೂಹಿಕ ಚೇತನ ಮತ್ತು ಏಕತೆಯಲ್ಲಿಯೂ ಅಡಗಿದೆ. ಇಂದು ಭಾರತದಲ್ಲಿ ಯಾವುದಾದರೂ ಒಂದು ಸಂಸ್ಥೆ ''ನಾವೆಲ್ಲ ಒಂದು'' - ಎಂಬ ಕಾರ್ಯವನ್ನು ನಿಸ್ವಾರ್ಥತೆಯಿಂದ ನಿರ್ವಹಿಸುತ್ತಿದೆಂದರೆ, ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾತ್ರ.


ಹರೆಯದವರು ಮತ್ತು ಲೈಂಗಿಕ ವಿಜ್ಞಾನ -2

ನಮ್ಮ ಸಮಾಜದಲ್ಲಿ ಲೈಂಗಿಕತೆಯ ಅರಿವು ಮೂಡಿಸುವ ಪದ್ಧತಿ ಮೂರನೇ ಶತಮಾನದಲ್ಲೇ ರೂಢಿಯಲ್ಲಿತ್ತು. ಇದಕ್ಕೆ ಉದಾಹರಣೆ ವಾತ್ಸ್ಯಾಯನ ಅವರ ಕಾಮಸೂತ್ರ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಹಿಂದಿನ ಲೇಖನದಲ್ಲಿ ಹರೆಯದವರಿಗೆ ಲೈಂಗಿಕ ವಿಜ್ಞಾನ ಅವಶ್ಯವೇ ಎಂಬ ಚರ್ಚೆಗಳು ನಡೆದ ಕುರಿತು ವಿವರಿಸಿದೆ. ಪ್ರಸ್ತುತ ಹರೆಯದವರಿಗೆ ಲೈಂಗಿಕ ವಿಜ್ಞಾನ ಅಗತ್ಯ ಎಂಬುದನ್ನು ಮನಗಂಡ ತಜ್ಞರು ಲೈಂಗಿಕ ವಿಜ್ಞಾನದ ವಿಷಯವನ್ನು ಪಠ್ಯಪುಸ್ತಕದಲ್ಲಿ ಸೇರಿಸಿ ಅದಕ್ಕೆ 'ಲೈಂಗಿಕ ಶಿಕ್ಷಣ' ಎಂದು ಕರೆಯಲಾಯಿತು. ಲೈಂಗಿಕ ಶಿಕ್ಷಣಕ್ಕೆ 'ಆರೋಗ್ಯ ಲೈಂಗಿಕ ಶಿಕ್ಷಣ', 'ಲೈಂಗಿಕತೆ ಮತ್ತು ಸಂಬಂಧಗಳು' ಅಥವಾ 'ಲೈಂಗಿಕತೆ ಮತ್ತು ಸಂತಾನೋತ್ಪತ್ತಿ ವ್ಯವಸ್ಥೆ' ಎಂದೂ ಕರೆಯುತ್ತಾರೆ. ಓದುಗರಿಗೆ ಇಷ್ಟವಾಗುತ್ತದೆಂದು 'ಆರೋಗ್ಯ ಲೈಂಗಿಕ ಶಿಕ್ಷಣ' ಎಂದು ಬರೆಯುತ್ತಿದ್ದೇನೆ. ಲೈಂಗಿಕ ಶಿಕ್ಷಣದ ಪರಿಕಲ್ಪನೆಯು ಲೈಂಗಿಕತೆಯ ಹಲವು ಆಯಾಮಗಳನ್ನು ಹೊಂದಿರುತ್ತದೆ. ಆರೋಗ್ಯ ಲೈಂಗಿಕತೆ ಕುರಿತು ಸರಿಯಾದ ಜ್ಞಾನ ಗಳಿಸುವುದು, ಸಕಾರಾತ್ಮಕ ಮನಸ್ಥಿತಿಯನ್ನು ಬೆಳೆಸಿಕೊಳ್ಳುವುದು ಮತ್ತು ಹರೆಯದವರಿಗೆ ಸ್ಪಷ್ಟಪಡಿಸುವುದು ಅಗತ್ಯ. ಲಿಂಗಭೇದವನ್ನು ಅರಿತುಕೊಂಡು ಮಾನವೀಯ ಸಂಬಂಧದ ಕುರಿತು ಮಾಹಿತಿ ನೀಡಬೇಕು. ನಿಕಟ ಪುರುಷ ಸ್ತ್ರೀ ಲಿಂಗದ ಸಂಬಂಧಗಳು ಮತ್ತು ಪಾತ್ರಗಳನ್ನು ಕುರಿತು, ಗರ್ಭನಿರೋಧಕ ವಿಧಗಳ ಕುರಿತಾದ ಅರಿವು, ಹೆಚ್.ಐ.ವಿ. ಮತ್ತು ಲೈಂಗಿಕ ಸೋಂಕು ರೋಗಗಳ ತಡೆಗಟ್ಟುವಿಕೆ ಕುರಿತಾದ ಅಂಶಗಳೇ ಆರೋಗ್ಯ ಲೈಂಗಿಕ ಶಿಕ್ಷಣದ ಪರಿಕಲ್ಪನೆ. ಈ ಅಂಶಗಳ ಅರಿವನ್ನು ಮೂಡಿಸಿದಾಗ ಹರೆಯದವರು ಆರೋಗ್ಯಕರ ಲೈಂಗಿಕ ಜ್ಞಾನಗಳಿಸಿ ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಶಕ್ತರಾಗುತ್ತಾರೆ. ಭವಿಷ್ಯದಲ್ಲಿ ಆತ್ಮವಿಶ್ವಾಸದಿಂದ ಸಾಧನೆಗೈಯಲು ಮತ್ತು ಮಾನವೀಯ ಸಂಬಂಧಗಳನ್ನು ರೂಢಿಸಿಕೊಂಡು ಆತ್ಮೀಯ ದಾಂಪತ್ಯ ಜೀವನ ಸಾಧಿಸುವುದರಲ್ಲಿ ಯಶಸ್ವಿಯಾಗಬೇಕೆಂಬುದೇ ಲೈಂಗಿಕ ಆರೋಗ್ಯ ಶಿಕ್ಷಣ.



ವಾತ್ಸ್ಯಾಯನ

ಇನ್ನೊಂದು ಅಂಶವನ್ನು ಓದುಗರು ಗಮನಿಸಬೇಕು. 'ಆರೋಗ್ಯ ಲೈಂಗಿಕ ಶಿಕ್ಷಣ'ವನ್ನು ಈಗ 'ಕುಟುಂಬ ಜೀವನ ಶಿಕ್ಷಣ'(Family life education) ಎಂದೂ ಕರೆಯುತ್ತಾರೆ. ಕುಟುಂಬ ಮತ್ತು ಸಮಾಜದ ಕುರಿತು, ಮೌಲ್ಯಗಳು, ಧೋರಣೆಗಳು ಮತ್ತು ಆರೋಗ್ಯಕರ ನಡವಳಿಕೆಗಳ ಕುರಿತಾದ ವ್ಯಕ್ತಿತ್ವವನ್ನು ರೂಪಿಸುವುದು ಲೈಂಗಿಕ ಶಿಕ್ಷಣದ ಮತ್ತೊಂದು ಉದ್ದೇಶ. ಲೈಂಗಿಕ ಶಿಕ್ಷಣವು ಹರೆಯದವರಿಗೆ, ಗಂಡು ಮತ್ತು ಹೆಣ್ಣುಮಕ್ಕಳಿಗೆ ಅವರ ಜವಾಬ್ದಾರಿಗಳು, ಸಾಮಾಜಿಕ ಧೋರಣೆಗಳು, ಕುಟುಂಬ ಮತ್ತು ಸಮಾಜದ ನಂಟು, ಗಂಡು ಹೆಣ್ಣಿನ ಪರಸ್ಪರ ಸಂಬಂಧಗಳು ಹೀಗೆ ಹಲವಾರು ಅಂಶಗಳನ್ನು 'ಕುಟುಂಬ ಜೀವನ ಶಿಕ್ಷಣ'ವು ತಿಳಿಸುತ್ತದೆ.

ಆರೋಗ್ಯ ಲೈಂಗಿಕ ಶಿಕ್ಷಣದ ಅರಿವನ್ನು ಹರೆಯದವರಲ್ಲಿ ಮೂಡಿಸುವುದರಿಂದ, ಲೈಂಗಿಕ ಸಂಬಂಧಗಳು, ಲೈಂಗಿಕತೆಗೆ ಅವಶ್ಯವಿರುವ ಕೌಶಲಗಳು, ಭವಿಷ್ಯದ ಲೈಂಗಿಕ ಜೀವನದ ಕುರಿತು ತೆಗೆದುಕೊಳ್ಳಬೇಕಾದ ತೀರ್ಮಾನಗಳು, ಭವಿಷ್ಯದಲ್ಲಿ ಸುಖೀ ದಾಂಪತ್ಯ, ಸಂತಾನೋತ್ಪತ್ತಿ ವ್ಯವಸ್ಥೆ, ಮತ್ತು ಸಾಮಾಜಿಕ ಬದ್ಧತೆ ಇತ್ಯಾದಿಗಳ ಅರಿವು ಉಂಟಾಗುತ್ತದೆ. ಲೈಂಗಿಕತೆ ಕುರಿತಾದ ಭಾವನೆಗಳ ಹಿಡಿತ ಸಾಧಿಸಲು, ಹೆಣ್ಣು ಮಕ್ಕಳು ಹರೆಯದಲ್ಲಿ ಗರ್ಭಧರಿಸುವಿಕೆ, ಅದರಿಂದ ಆಗುವ ದುಷ್ಪರಿಣಾಮಗಳು, ದಾಂಪತ್ಯದಲ್ಲಿ ಅವಶ್ಯವಾದ ಪರಸ್ಪರ ಲೈಂಗಿಕ ಸಂಬಂಧ ಇವುಗಳನ್ನರಿಯುವುದು ಲೈಂಗಿಕ ಶಿಕ್ಷಣದ ಉದ್ದೇಶ.

ಲೈಂಗಿಕ ಶಿಕ್ಷಣದಿಂದ ಆಗುವ ಉಪಯೋಗಗಳು ವ್ಯಾಪಕವಾಗಿವೆ. ಲೈಂಗಿಕ ಶಿಕ್ಷಣದಿಂದ ಹರೆಯದವರಲ್ಲಿ ತಮ್ಮ ಕುರಿತು ದೈಹಿಕ ಚಿತ್ರಣವು (Body image) ಉಂಟಾಗುತ್ತದೆ. ತಮ್ಮ ಬಗ್ಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಪರಿಣಾಮಕಾರಿ ಸಂವಹನ ಸಾಮರ್ಥ್ಯಗಳನ್ನು ಗಳಿಸಲು ಲೈಂಗಿಕ ಶಿಕ್ಷಣವು ಪೂರಕ. ಲೈಂಗಿಕ ಶಿಕ್ಷಣವು ಅನುಭೂತಿಯ ಗುಣವನ್ನು ರೂಢಿಸಿಕೊಳ್ಳಲು, ಹರೆಯದವರು ತಮ್ಮ ನಡವಳಿಕೆಯನ್ನು ಕುರಿತು ನೈತಿಕವಾಗಿ ಹಿಡಿತ ಸಾಧಿಸಬಹುದು. ಹರೆಯದ ಅವಧಿಯಲ್ಲಿ ಲಿಂಗಗುರುತಿಸಿ ತಪ್ಪುಗ್ರಹಿಕೆಯಾಗುವ ಸಂದೇಹಗಳನ್ನು ದೂರಮಾಡಿಕೊಳ್ಳಲು ಅವಶ್ಯವಿರುವುದು ಲೈಂಗಿಕ ಶಿಕ್ಷಣ. ಹಿಂಸಾತ್ಮಕ ನಡವಳಿಕೆಗಳನ್ನು ದೂರವಿಟ್ಟು, ಮಾನಸಿಕ ನೆಮ್ಮದಿ ಸಾಧಿಸಲು ಲೈಂಗಿಕ ಶಿಕ್ಷಣವು ಅವಶ್ಯ. ಲೈಂಗಿಕ ಶಿಕ್ಷಣದಿಂದ ಸೋಂಕು ರೋಗಗಳು ಮತ್ತು ಎಚ್.ಐ.ವಿ. ಅಂತಹ ಅತಿ ಅಪಾಯದ ಕಾಯಿಲೆಗಳಿಂದ ದೂರವಿರಬಹುದು. ಅನೈತಿಕ ಲೈಂಗಿಕತೆ, ಸಲಿಂಗ ಕಾಮ ಮತ್ತು ಲೈಂಗಿಕ ಹಿಂಸಾಚಾರಗಳನ್ನು ತಡೆಗಟ್ಟಬಹುದು. ಹರೆಯದ ಹೆಣ್ಣು ಮಕ್ಕಳ ಭವಿಷ್ಯದಲ್ಲಿ ದೋಷಾರೋಪಣೆ ಉಂಟು ಮಾಡುವ ಹರೆಯದವರ ಗರ್ಭಧಾರಣೆ, ಅದರಿಂದ ಗರ್ಭಪಾತವಾಗುವುದನ್ನು ತಡೆಗಟ್ಟಬಹುದು. ಲೈಂಗಿಕತೆಯ ಕುರಿತು ಹರೆಯದವರನ್ನು ತಪ್ಪು ಕಲ್ಪನೆಗಳು ಮತ್ತು ಅದರಿಂದ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು. ಜೀವನ ಕೌಶಲಗಳಾದ ಸಮಸ್ಯೆಗಳ ಪರಿಹಾರ, ಸಮಗ್ರವಾಗಿ ಆಲೋಚಿಸುವುದು, ಸೃಜನಶೀಲತೆ, ಅನುಭೂತಿ, ಮಾನವೀಯ ಸಂಬಂಧಗಳು, ಒತ್ತಡ ನಿವಾರಣೆ ಇವು ಲೈಂಗಿಕ ಶಿಕ್ಷಣದಿಂದ ವೃದ್ಧಿಗೊಳ್ಳುತ್ತವೆ ಎಂಬುದು ಅಧ್ಯಯನಗಳ ಅಂಬೋಣ. ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಂಡು ಸಮಾಜದಲ್ಲಿ ಒಳ್ಳೆಯ ಸಂಸ್ಕಾರದಿಂದ ಕೂಡಿದ ಪ್ರಜ್ಞಾವಂತ ಪ್ರಜೆಯಾಗಿ ಆರೋಗ್ಯಕರ ಸಮಾಜವನ್ನು ಕಟ್ಟುವಲ್ಲಿ ಲೈಂಗಿಕ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ.

ನಮ್ಮ ಸಮಾಜದಲ್ಲಿ ಲೈಂಗಿಕತೆಯ ಅರಿವು ಮೂಡಿಸುವ ಪದ್ಧತಿ ಮೂರನೇ ಶತಮಾನದಲ್ಲೇ ರೂಢಿಯಲ್ಲಿತ್ತು. ಇದಕ್ಕೆ ಉದಾಹರಣೆ ವಾತ್ಸ್ಯಾಯನ ಅವರ ಕಾಮಸೂತ್ರ. ತತ್ವಜ್ಞಾನಿಯಾಗಿದ್ದ ವಾತ್ಸ್ಯಾಯನ ಆ ಕಾಲದಲ್ಲೇ 'ಕಾಮಸೂತ್ರ'ವೆಂಬ ಗ್ರಂಥವನ್ನು ಬರೆದು ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಅವರು ಆರೋಗ್ಯ ಲೈಂಗಿಕ ಶಿಕ್ಷಣದಿಂದ ಆಗುವ ಉಪಯೋಗಗಳ ಕುರಿತು ಆಳವಾದ ಚಿಂತನೆ ನಡೆಸಿದ್ದರು ಎನ್ನುವುದು ಹೆಮ್ಮೆಯ ಸಂಗತಿ. ಆದರೆ ವರ್ಷಗಳು ಕಳೆದಂತೆ ಲೈಂಗಿಕತೆ ಕುರಿತು ಮಡಿವಂತಿಕೆ ಮತ್ತು ನಕಾರಾತ್ಮಕ ಧೋರಣೆಗಳನ್ನು ತಳೆಯಲಾಯಿತು. ಇದಕ್ಕೆ ಉದಾಹರಣೆಯಾಗಿ, ಹೆಸರಾಂತ ವೈದ್ಯ ಸಾಹಿತಿ ದಿ. ಡಾ. ವೆಂಕಟರಾವ್ ದೊಡ್ಡೇರಿಯವರು ಕಳೆದ ಶತಮಾನದ ಆರವತ್ತನೇ ದಶಕದಲ್ಲಿ ಬರೆದ 'ದಾಂಪತ್ಯ ದೀಪಿಕಾ' ಎಂಬ ಕೃತಿಯನ್ನು ಸಾರ್ವಜನಿಕರು ವಿರೋಧಿಸಿದರು. ಅದಕ್ಕೆ ಬೆಂಬಲವಾಗಿ ಸರ್ಕಾರವು ಅದನ್ನು ಮುಟ್ಟುಗೋಲು ಹಾಕಿಕೊಂಡಿತು ಎನ್ನುವುದು ವಿಷಾದಕರ.

ಕಳೆದ ಶತಮಾನದ ಎಂಭತ್ತನೇ ದಶಕದಲ್ಲಿ ಅಮೆರಿಕದ ಲೈಂಗಿಕ ತಜ್ಞರಾದ ಮಾಸ್ಟರ್ಸ್ ಮತ್ತು ಜಾನ್‌ಸನ್ (Masters and Johnson) ಎಂಬುವರು ಲೈಂಗಿಕತೆ ಕುರಿತು ಕೃತಿ ರಚಿಸಿದಾಗ ನಮ್ಮವರೂ ಸೇರಿದಂತೆ ವಿಶ್ವದ ಅನೇಕ ಮನಃಶಾಸ್ತ್ರಜ್ಞರು, ಮನೋವೈದ್ಯರು ಅವರನ್ನು ಹಾಡಿ ಹೊಗಳಿದರು. ಆದರೆ ಎರಡನೇ ಶತಮಾನದಲ್ಲಿ ಕಾಮಸೂತ್ರ ಬರೆದ ನಮ್ಮ ದೇಶದ ತತ್ವಜ್ಞಾನಿಯಾದ ವಾತ್ಸ್ಯಾಯನರ ಕುರಿತು ಯಾರೂ ಹೆಚ್ಚಿನ ಗಮನಹರಿಸಲಿಲ್ಲ ಎಂಬುದು ವಿಪರ್ಯಾಸ. ಇನ್ನೊಂದು ಹೆಮ್ಮೆಯ ಸಂಗತಿಯನ್ನು ಓದುಗರೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಡಾ. ಟಿ.ಎಸ್. ಸತ್ಯನಾರಾಯಣ್ ರಾವ್‌ರವರು ಹೆಸರಾಂತ ಮನೋವೈದ್ಯರು. ಪ್ರಸ್ತುತ ಡಾ.ಟಿ.ಎಸ್.ಎಸ್.ರಾವ್‌ರವರು ಮೈಸೂರಿನ ಜೆ.ಎಸ್.ಎಸ್.ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ 'ಪ್ರೊಫೆಸರ್ ಎಮಿರಿಟಸ್' ಆಗಿ ಕರ್ತವ್ಯ ನಿರತರಾಗಿದ್ದಾರೆ. ಡಾ॥ ರಾವ್‌ರವರು ಭಾರತೀಯ ಮನೋವೈದ್ಯಕೀಯ ಸಂಘ (IPS)ದ ಗೌರವಾಧ್ಯಕ್ಷರೂ ಆಗಿದ್ದಾರೆ. ಇವರು ಲೈಂಗಿಕ ವಿಜ್ಞಾನ ಕುರಿತು ಆಳವಾದ ಸಂಶೋಧನೆ ಕೈಗೊಂಡು ಸಮಗ್ರ ಆರೋಗ್ಯವನ್ನು ಕಾಪಾಡಿಕೊಳ್ಳಲು ಲೈಂಗಿಕ ಜ್ಞಾನವು ಎಷ್ಟು ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ಎಳೆ ಎಳೆಯಾಗಿ ವಿವರಿಸಿದ್ದಾರೆ. 'ದಾಂಪತ್ಯ ವೈದ್ಯಶಾಸ್ತ್ರ' ಎಂಬ ಕೃತಿಯು ಸೇರಿದಂತೆ ಆರೆಂಟು ಕೃತಿಗಳನ್ನು ರಚಿಸಿದ್ದಾರೆ ಎಂಬುದು ಹೆಮ್ಮೆಯ ವಿಷಯ.

(ಮುಂದುವರೆಯುವುದು....)

ಅಲಾರಾಂ ನಾಮ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಸುಮ್ಮನೆ ಹೀಗೊಮ್ಮೆ ಊಹಿಸಿಕೊಳ್ಳಿ. ಬೆಳ್ಳಂಬೆಳಗ್ಗೆ ಯಾರಾದರೂ ನಿಮ್ಮ ತಲೆಗೊಮ್ಮೆ ಮೊಟಕಿದರೆ ನಿಮ್ಮ ಪ್ರತಿಕ್ರಿಯೆ ಹೇಗಿರಬಹುದು? ಅದರಲ್ಲೂ ನೀವು ಯಾರಿಗೋಸ್ಕರ ಕೆಲಸ ಮಾಡಿದಿರೋ ಅವರೇ ಮೊಟಕಿದರೆ, ಅಷ್ಟೇ ಏಕೆ, ಹೀಗೆ ಹೀಗೆ ಮಾಡು ಎಂದು ಕೆಲಸ ಹಚ್ಚಿ, ಕೊನೆಗೆ ಆ ಕೆಲಸವನ್ನು ಅಂತೆಯೇ ಬದ್ಧತೆಯಿಂದ ಮಾಡಿ ಮುಗಿಸಿದ ನಂತರವೂ, ಕೆಲಸ ಹಚ್ಚಿದವರೇ ತಲೆಗೆ ಮೊಟಕಿದರೆ...? ಯಾರದ್ದೇ ಆದರೂ ಪಿತ್ತ ನೆತ್ತಿಗೇರದೇ ಇರದಲ್ಲವೇ? ಎಷ್ಟೇ ತಾಳ್ಮೆ, ಸಂಯಮ, ಸಮಾಧಾನ ಎಂದೆಲ್ಲ ಹೇಳಿದರೂ ಇದನ್ನು ಸಹಿಸಿಕೊಂಡು, ಏನೂ ಪ್ರತಿಕ್ರಿಯೆ ನೀಡದೇ, ಮೌನವಾಗಿರುವುದು ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ಆದರೆ ನೂರಾರು ವರ್ಷಗಳ ಕಾಲ ಹೀಗೊಂದು ದೌರ್ಜನ್ಯವನ್ನು, ಅನ್ಯಾಯವನ್ನು ನುಂಗಿಕೊಂಡು, ತನ್ನ ಕೆಲಸವನ್ನು ತಾನು ಪರಮ ನಿಯತ್ತಿನಿಂದ, ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುವುದಕ್ಕೆ ಉದಾಹರಣೆ ಅಂತ ಇದ್ದರೆ ಅದು ಅಲಾರಾಂಕ್ಲಾಕ್. ತಲೆಯ ಈ ಭಾಗಕ್ಕೆ ಮೊಟಕಿದರೆ, ಇನ್ನೊಂದು ದಿವಸ ತಲೆಯ ಆ ಭಾಗಕ್ಕೆ ಮೊಟಕಲು ಅವಕಾಶ ಕೊಡುವಷ್ಟು ಅದರದ್ದು ಸಾಧು ಸ್ವಭಾವವೇ ಸರಿ. ಅದೂ ಕೂಡಾ 'ಒಂದು ಕೆನ್ನೆಗೆ ಬಾರಿಸಿದರೆ, ಇನ್ನೊಂದನ್ನು ತೋರಿಸು' ನೀತಿಯನ್ನು ಅನುಸರಿಸುತ್ತಿದೆಯೋ ಎಂಬ ಅನುಮಾನ ಮೂಡುತ್ತದೆ.

ಮನುಷ್ಯರು ಶತ ಶತಮಾನಗಳಿಂದಲೂ ಬೆಳಗ್ಗೆ ಒಂದು ನಿಗದಿತ ಅಥವಾ ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ನಿದ್ರೆಯಿಂದ ಎದ್ದೇಳಲು ಕೋಳಿಯ ಕೂಗು, ದೇವಸ್ಥಾನದ ಗಂಟೆ, ಚರ್ಚ್‌ನ ಬೆಲ್, ಸೂರ್ಯೋದಯ ಇತ್ಯಾದಿಗಳನ್ನು ಅವಲಂಬಿಸುತ್ತಲೇ ಬಂದಿದ್ದಾರೆ. ಈಗಿನ ಈ ಎಲ್ಲಾ ಆಧುನಿಕ ಅಲಾರಾಂ ಸಾಧನಗಳ ಪರಿಕಲ್ಪನೆ ಇನ್ನೂ ಹರಳುಗಟ್ಟುವ ಮೊದಲು, ಬೆಳಗ್ಗೆ ಬೇಗ ಎಬ್ಬಿಸಲೆಂದೇ ಸಹಾಯಕರಂತೆ ಕೆಲವರು ಇರುತ್ತಿದ್ದರು. ಅವರದು ಬಡಿದು-ಎಬ್ಬಿಸುವ ಕೆಲಸ. ಆ ಕಾಯಕವನ್ನು ನಿಭಾಯಿಸುವ ವ್ಯಕ್ತಿಗಳು ಬೀದಿಯಲ್ಲಿ ತಿರುಗಾಡುತ್ತಾ, ಯಾರನ್ನೆಲ್ಲಾ ಎಬ್ಬಿಸಬೇಕೋ ಅಂತಹ ವ್ಯಕ್ತಿಗಳ ಮನೆಯ ಹತ್ತಿರಕ್ಕೆ ಹೋಗಿ, ಅವರು ಮಲಗಿರುವ ಕೋಣೆಯ ಕಿಟಕಿ ಬಾಗಿಲುಗಳನ್ನು ಬಡಿಯುವ ಮೂಲಕ ಎಬ್ಬಿಸಬೇಕಾಗಿತ್ತು. ಕಿಟಕಿಯನ್ನು ಬಡಿಯಲು, ಉದ್ದನೆಯ ಕೋಲು, ನಳಿಕೆ ಇತ್ಯಾದಿ ಬಳಸಲಾಗುತ್ತಿತ್ತು. ಕೊಂಚ ದೂರದಿಂದ ಆ ನಳಿಕೆಯ ಮೂಲಕ ಒಣ ಬಟಾಣಿ ಕಾಳನ್ನು ತೂರಿಸಿ ಜೋರಾಗಿ ಊದಿ, ಅದು ನೇರ ಕಿಟಕಿಯ ಬಾಗಿಲ ಮೇಲೆ ಹೋಗಿ ಬಿದ್ದು ಸದ್ದು ಬರುವಂತೆ ಮಾಡುವ ಮೂಲಕವೂ ಬಡಿದು-ಎಬ್ಬಿಸುವ ಕೆಲಸ ನಡೆಯುತ್ತಿತ್ತು. ಆ ಕಿಟಕಿ ಮೇಲೆ ಬಿದ್ದ ಕಾಳಿನ ಸದ್ದಿಗೇ ಅವರು ಎಚ್ಚರಾಗುತ್ತಿದ್ದರು ಎಂದರೆ ಬಹುಶಃ ಅಂದಿನ ವ್ಯಕ್ತಿಗಳು ಸಣ್ಣ ಸದ್ದಿಗೂ ಎದ್ದು ಕೂರುವವರಾಗಿದ್ದರು ಎಂದೆನಿಸುತ್ತದೆ. ಆದ್ದರಿಂದ ಆ ಅಲಾರಾಂ ಮ್ಯಾನ್‌ಗಳ ಕೆಲಸ ಕೊಂಚ ಸುಲಭವೇ ಆಗಿತ್ತು ಎಂದೆನ್ನಬಹುದು. ಈಗ ಅದೇ ಕೆಲಸವನ್ನು ಮಾಡಲು ಮನುಷ್ಯರನ್ನು ನಿಯೋಜಿಸಿದ್ದರೆ ಅವರು ಆ ನಳಿಕೆಯ ಮೂಲಕ ಇನ್ನು ಅದೇನೇನನ್ನು ತೂರಬೇಕಿತ್ತೋ ಕಾಣೆ! ಈ ಅಕ್ಷರಶಃ ಬಡಿದು - ಎಬ್ಬಿಸುವವರು (ಹ್ಞಾಂ, ಮಲಗಿದವರನ್ನಲ್ಲ, ಅವರ ಕೋಣೆಯ ಕಿಟಕಿ ಬಾಗಿಲನ್ನು ನೆನಪಿರಲಿ) ಒಂದು ರೀತಿಯಲ್ಲಿ 'ನಡೆದಾಡುವ ಅಲಾರಾಂ' ಎಂಬ ಬಿರುದಿಗೆ ಭಾಜನರಾಗಲು ಅರ್ಹರೇ ಸರಿ.

ನಾವು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಈಗಿನ ಅಲಾರಾಂಗಳು ಒಂದೇ ಸಮನೆ ಕೂಗುವ ಮೂಲಕ, ಮಲಗಿದವರನ್ನು ಎಬ್ಬಿಸುವ ಪ್ರಯತ್ನ ಮಾಡುತ್ತವೆ. ಅದನ್ನು ಪ್ರಯತ್ನ ಅನ್ನುವುದಕ್ಕಿಂತಲೂ ಎಷ್ಟೋ ಸಲ ವಿಫಲ ಪ್ರಯತ್ನ ಅನ್ನುವುದೇ ಸೂಕ್ತವೇನೋ ಎಂದೆನಿಸುತ್ತದೆ. ಏಕೆಂದರೆ ಆ ಮಟ್ಟಿಗೆ ಜನ ಅಲಾರಾಂನ ಕೂಗನ್ನು ತಾತ್ಸಾರ ಭಾವದಿಂದ ಕಾಣುವುದು, ಅಲ್ಲಲ್ಲ, ಕೇಳುವುದಿದೆ. ಆದರೆ ತುಂಬಾ ಹಿಂದೆ ಜನರಿಗೆ ಅಲಾರಾಂನ ವಿಷಯದಲ್ಲಿ ಹೀಗೊಂದು ಅಭಿಪ್ರಾಯ ಇರಲಿಲ್ಲವಂತೆ. ಆರಂಭದಲ್ಲಿ ಅಂದರೆ ಇಂಥದ್ದೊಂದು ಸಾಧನವನ್ನು ಕಂಡುಹಿಡಿದ ಹೊಸ ಮೊದಲ ದಿನಗಳಲ್ಲಿ, ಅಲಾರಾಂನ್ನು ಸಿದ್ಧಪಡಿಸುವಾಗ ಯಾವ ಸಮಯವನ್ನು ನಿಗದಿಪಡಿಸಲಾಗಿತ್ತೋ ಆ ಸಮಯಕ್ಕೆ ಸರಿಯಾಗಿ ಅದು ಹೊಡೆದುಕೊಳ್ಳುತ್ತಿತ್ತು. ಜನರು ಅದನ್ನು ಕೇಳಿ ಎದ್ದೇಳಬೇಕಾಗಿತ್ತೇ ಹೊರತು ಅವರಿಗೆ ತಮ್ಮಿಷ್ಟದಂತೆ, ಬೇಕಾದ ಸಮಯಕ್ಕೆ ಅಲಾರಾಂನ್ನು ಸೆಟ್ ಮಾಡುವ ಅವಕಾಶವೇ ಇರಲಿಲ್ಲವಂತೆ. ಅಂದರೆ ಆ ಕಾಲದಲ್ಲಿ ಅಲಾರಾಂ ಹೇಳಿದಂತೆ ಜನರು ಕೇಳಬೇಕಾಗಿತ್ತು. ಆದರೆ ಈಗ ಜನರು ಹೇಳಿದಂತೆ, ಅವರ ನಿಶ್ಚಯಕ್ಕೆ ತಕ್ಕಂತೆ, ಅವರ ಮನಸ್ಸಿಗೆ ತೋಚಿದ ಸಮಯದ ಪರಿಧಿಗೆ ಅನುಗುಣವಾಗಿ ಅಲಾರಾಂಗಳು ವರ್ತಿಸಬೇಕಾದ ಅನಿವಾರ್ಯತೆ ಅವುಗಳದ್ದು. ಆಗ ''ನೋಡಿ ನಾನು ಹೇಗೆ ಇವರನ್ನೆಲ್ಲಾ ಆಡಿಸುತ್ತೇನೆ'' ಎಂದು ಬೀಗುತ್ತಿದ್ದ ಅದೇ ಅಲಾರಾಂಗಳು ಈಗ, ''ಅಯ್ಯೋ! ಇವರ ತಾಳಕ್ಕೆ ತಕ್ಕಂತೆ ಕುಣಿದು ನನಗಂತೂ ಸಾಕು ಸಾಕಾಗಿ ಹೋಗಿದೆಯಪ್ಪ'' ಎಂದು ಅದೆಷ್ಟು ರೋಸಿ ಹೋಗಿವೆಯೋ?

ಈಗಿನ ಅಲಾರಾಂಗಳಿಗೆ ಹಿಂದಿನ ಕಾಲದಲ್ಲಿ ಇದ್ದಂತೆ ಒಂದು ಸ್ವತಂತ್ರ ಅಸ್ತಿತ್ವ ಇರುವುದು ಬಹಳ ಕಡಿಮೆ. ಅವುಗಳು ತಮ್ಮ ಭೌತಿಕ ರೂಪವನ್ನು ಕಳೆದುಕೊಂಡು, ಸ್ಮಾರ್ಟ್ ರೂಪಕ್ಕೆ ತಿರುಗಿ, 'ಆ್ಯಪ್'ನ ಮಾರುವೇಷದಲ್ಲಿ ಮೊಬೈಲ್‌ನಲ್ಲಿ ಆಶ್ರಯ ಪಡೆದು ಕುಳಿತಿವೆ. ಹಾಗೆ ನೋಡಿದರೆ ಈ ಬದಲಾವಣೆಯಿಂದ ಅವುಗಳಿಗೂ ಕೆಲವೊಂದಷ್ಟು ಪ್ರಯೋಜನಗಳಿವೆ. ಈಗ ಅವು ಬೆಳ್ಳಂಬೆಳಗ್ಗೆ ದನಿ ಹೊರಡಿಸಿದ್ದಕ್ಕೆ ಪ್ರತಿಯಾಗಿ ಮೊದಲಿನಂತೆ ಪದೆ ಪದೆ ತಲೆಗೆ ಮೊಟಕಿಸಿಕೊಳ್ಳಬೇಕಿಲ್ಲ, ಇಡೀ ಮೊಬೈಲ್‌ನ ಮೇಲೆಯೇ ಆ ಏಟಿನ ಬಿರುಸು ಬೀಳುವ ಸಂಭವವೇ ಹೆಚ್ಚಾದರೂ, ಈಗ ಅದು ಒಂದು ನಯವಾದ ಟಚ್, ಕ್ಲಿಕ್‌ನಿಂದಲೂ ಸಾಧ್ಯವಾಗುವುದರಿಂದ ಮೊಟಕಿಸಿಕೊಳ್ಳಬೇಕಾದ ಅನಿವಾರ್ಯತೆ ಏನಿಲ್ಲ, ಪ್ರತ್ಯೇಕವಾಗಿ ಬ್ಯಾಟರಿ, ಕೀ ತಿರುಪಿಸಿಕೊಳ್ಳಬೇಕಾದ ಅಗತ್ಯವೂ ಈಗಿಲ್ಲ, ಕೊಂಚ ಪರಾವಲಂಬಿ ಅನಿಸಿಕೊಳ್ಳುವುದು ಹೌದಾದರೂ ಮೊಬೈಲ್‌ನ ಚಾರ್ಜ್‌ನ್ನೇ ಇದೂ ತಿಂದುಂಡು ಸುಖವಾಗಿ ಇರುವುದು ಸಾಧ್ಯವಾಗುತ್ತಿದೆ. ಅದಕ್ಕೆ ಪೂರಕವೆಂಬಂತೆ ಈಗಿನ ಅದರ ಕೆಲಸ ಕೇವಲ ಎಬ್ಬಿಸುವುದಕ್ಕಷ್ಟೇ ಸೀಮಿತವಾಗಿರದೇ ಸಮಯ ನಿಗದಿಪಡಿಸುವುದು, ಟಿಕ್ ಟಿಕ್ ಸ್ಟಾಪ್ ವಾಚ್ ಆಗಿ ಕರ್ತವ್ಯ ನಿರ್ವಹಿಸುವುದು, ಸರದಿಯಂತೆ ಐದು-ಹತ್ತು ನಿಮಿಷ ಬಿಟ್ಟು ಎಬ್ಬಿಸುವುದು (ಸ್ನೂಝ್), ನಿಗದಿಯಾದ ಶೆಡ್ಯೂಲ್‌ಗಳ ಸೂಚನೆಗೆ ಅನುಗುಣವಾಗಿ ಬಳಕೆದಾರರನ್ನು ಎಚ್ಚರಿಸುವ ಕೆಲಸ, ಬೇರೆ ಬೇರೆ ಸ್ವರದಲ್ಲಿ ಸುಶ್ರಾವ್ಯವಾಗಿ ರಿಂಗಣ ಮೂಡಿಸುವ ಕಲೆ - ಇವೆಲ್ಲವನ್ನೂ ಕರಗತ ಮಾಡಿಕೊಳ್ಳಬೇಕಾಗಿದೆ.

ಹೊತ್ತು ಗೊತ್ತಿನ ಪರಿವೆಯೇ ಇಲ್ಲದೆ ತಡ ರಾತ್ರಿಯವರೆಗೂ ಹಾಗೂ ಬೆಳಗ್ಗಿನ ಸೂರ್ಯ ಇನ್ನೂ ಕಣ್ಣು ಬಿಡಲೇ ಬಹಳ ಹೊತ್ತು ಬಾಕಿ ಇರುವಾಗಲೇ ಕೆಲವರು ಮೊಬೈಲ್ ಪರದೆಯ ತೆರೆ ಮರೆಯಲ್ಲಿ ಜಾರಿ ಹೋಗಿರುತ್ತಾರೆ ಎಂದರೆ ಅದಕ್ಕೆ ಈ ಅಲಾರಾಂ ಕೂಡಾ ಕಾರಣವಾಗಿರುತ್ತದೆ. ರಾತ್ರಿ ಮಲಗುವ ಮುನ್ನ ಅಲಾರಾಂ ಸೆಟ್ ಮಾಡಲೆಂದು, ಬೆಳಗ್ಗೆ ಒಂದೇ ಸಮನೆ ಬಡಿದುಕೊಳ್ಳುವ ಅಲಾರಾಂನ ಬಾಯಿ ಮುಚ್ಚಿಸಲೆಂದು ಕೈಗೆತ್ತಿಕೊಳ್ಳುವ ಮೊಬೈಲ್ ಎಂದಿಗೂ ಅದಕ್ಕಷ್ಟೇ ಸೀಮಿತವಾಗಿರುವುದಿಲ್ಲ, ಅಲಾರಾಂನಿಂದ ವಾಟ್ಸಾಪ್‌ಗೆ ಜಿಗಿದು, ಅಲ್ಲಿಂದ ಮೇಲ್ ಬಾಕ್ಸ್ ಮೇಲೆ ಕಣ್ಣಾಡಿಸಿ, ಫೇಸ್‌ಬುಕ್‌ನಲ್ಲಿ ಮುಖ ತೂರಿಸಿ, ಅಲ್ಲಿಂದ ಇನ್ಸ್ಟಾಗ್ರಾಮ್(ಮು)ದಲ್ಲಿ ಸುತ್ತಾಡಿ, ರೀಲ್ಸ್-ವೀಡಿಯೋ-ಪೋಸ್ಟ್‌ಗಳ ನಡುವೆ ಜೀಕುತ್ತಾ ಸಾಕಷ್ಟು ಕಾಲ ಅದರಲ್ಲೇ ವ್ಯರ್ಥ ಕಳೆದು, ಇನ್ನು ಸಾಕು ಎಂದು ಮೊಬೈಲ್‌ನ್ನು ಬದಿಗಿಡುವ ಹೊತ್ತಿಗೆ 'ಅಲಾರಾಂ'ನ ಕಾರಣಕ್ಕೆ ಮೊಬೈಲ್‌ನ್ನು ಕೈಗೆತ್ತಿಕೊಂಡ ವಿಷಯ ನೆನಪಾಗಿ ಅದು ಅಕ್ಷರಶಃ ಅಣಕಿಸುತ್ತಿರುತ್ತದೆ.

ಈಗಿನ ಆಧುನಿಕ ಮೊಬೈಲ್‌ಗಳಲ್ಲಿ ಇರಿಸಿರುವ 'snooze' ಆಯ್ಕೆ ಇದೆಯಲ್ಲ, ಅದು ಮನುಷ್ಯ ದಿನದಿನವೂ ಅನುಭವಿಸುವ, ಮನಸ್ಸಿಗೆ ಪರಮ ನೆಮ್ಮದಿಯನ್ನು ಉಂಟು ಮಾಡುವ ಮಹತ್ವದ 'ಶಾಂತಿ ಒಪ್ಪಂದ'ವೇ ಸರಿ. ಅದೊಂದು ಇಲ್ಲದೇ ಹೋಗಿದ್ದರೆ ಈ ಮನುಷ್ಯ ಮಾತ್ರರು ಈ ಅಲಾರಾಂಗಳನ್ನು ಇನ್ನು ಅದೆಷ್ಟು ದೂಷಿಸುತ್ತಿದ್ದರೋ, ದ್ವೇಷಿಸುತ್ತಿದ್ದರೋ ಹೇಳಲಸಾಧ್ಯ. ತನ್ನ ಯಾವುದೇ ಕೆಲಸವನ್ನು ಸಾಧ್ಯವಾದಷ್ಟು ಮುಂದೂಡುವುದೇ ಮನುಷ್ಯ ಸಹಜ ಎಂಬ ಮಾತಿಗೆ ಬಲವಾದ ಸಾಕ್ಷ್ಯವೆಂಬಂತೆ ಅಲಾರಾಂನ ಈ 'snooze' ಆಯ್ಕೆಯನ್ನು ನೋಡಬಹುದು. ಹಾಗೆಯೇ ಅದು ದಿನ ದಿನವೂ ಪಾಲನೆಯಾಗುತ್ತದೆ ಎನ್ನುವುದಕ್ಕೆ ಅಲಾರಾಂಗಳ ಅಂತರ್ಯದಲ್ಲಿ ಬೇಕಾದಷ್ಟು ಪುರಾವೆಗಳಿವೆ. ಬಹಳ ಆಧುನಿಕವೆನಿಸುವ ಅದೆಷ್ಟೋ ಅಲಾರಾಂಗಳು ಬಂದರೂ, ''ಹೇಯ್ ಎದ್ದೇಳೋ'' ಎಂದು ಕಿರುಚುವುದು, ಬೆಡ್‌ಶೀಟ್‌ನ್ನು ಎಳೆದು ಬದಿಗೆ ಹಾಕುವುದು, ಫ್ಯಾನ್ ಆರಿಸುವುದು, ಲೈಟ್ ಆನ್ ಮಾಡುವುದು, ಬೆಳ್ಳಂಬೆಳಗ್ಗೆ ಜೋರಾಗಿ ಹಾಡು ಹಾಕುವುದು, ಪಾತ್ರೆ ಪಗಡೆಗಳಿಂದ ಭಾರೀ ಸದ್ದುಂಟು ಮಾಡುವುದು ಇತ್ಯಾದಿ ಮನೆ ಮನೆಯ ಪರ್ಯಾಯ ಅಲಾರಾಂಗಳವರೆಯಲ್ಲ, ಅವುಗಳನ್ನು ಮೀರಿಸಲು ಎಂದಿಗೂ ಸಾಧ್ಯವಿಲ್ಲ!

ಓವರ್‌ಡೋಸ್: ಬೆಳ್ಳಂಬೆಳಗ್ಗೆ ಅಲಾರಾಂ ಹೊಡೆದಾಗ 'ಒಂದೈದು ನಿಮಿಷ' ಬಿಟ್ಟು ಎದ್ದೇಳ್ತೀನಿ ಅಂತಾರಲ್ಲ, ಅದನ್ನು ಮನುಷ್ಯ ರಚಿಸಿದ ಅತ್ಯಂತ ಸುದೀರ್ಘವಾದ 'ಕಿರು ಅವಧಿ' ಎಂದು ಪರಿಗಣಿಸಬಹುದು!

26 ಕೋಟಿ ಮಂದಿಯಿಂದ ಯೋಗಾಭ್ಯಾಸ

ದೇಶವ್ಯಾಪಿ ನಡೆದ ಯೋಗ ಪ್ರದರ್ಶನ



ವಯಸ್ಸಿಗೂ ಬಲ ಮನಸ್ಸಿಗೂ ಛಲ

ವಿಶಾಖಪಟ್ಟಣಂನಲ್ಲಿ ಐಎನ್‌ಎಸ್ ಸಾತವಾಹನ ಯುದ್ಧನೌಕೆಯಲ್ಲಿ ಯೋಗಾಭ್ಯಾಸ ನಡೆಸಿದ ಪೂರ್ವ ನೌಕಾಸೇನಾ ವಿಭಾಗದ ಸಿಬ್ಬಂದಿ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗಾ ಯೋಗ


• **ಹೊಸದಿಲ್ಲಿ:** ದೇಶದೆಲ್ಲೆಡೆ ಭಾರೀ ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ಸೇರಿದ 26 ಕೋಟಿ ಯೋಗಾಸಕ್ತ ಸಾಮಾನ್ಯ ಜನರು 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಬೃಹತ್ ಯಶಸ್ಸುಗೊಳಿಸಿದರು. ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಎಂಬ ಧ್ಯೇಯದೊಂದಿಗೆ ಭಾನುವಾರ ವಿಶ್ವದೆಲ್ಲೆಡೆ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ದೇಶ ವಿದೇಶದಲ್ಲಿ ಬೃಹತ್ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಯೋಗಾಭ್ಯಾಸ ನಡೆಸಲಾಯಿತು. ಕೋಲ್ಕತ್ತಾದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ 35,000 ಜನರು ಪಾಲ್ಗೊಂಡರು. ಜಬಲ್‌ಪುರದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಾಣಾಯಾಮ, ಆಸನಗಳನ್ನು ಪ್ರದರ್ಶಿಸಿದರು. ಇದೇ ರೀತಿ ದೇಶಾದ್ಯಂತ ಹಲವು ಯೋಗ ಸಂಗಮಗಳು ನಡೆದಿವೆ. ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರು ಪಾಲ್ಗೊಂಡು ಯೋಗಾಭ್ಯಾಸ ನಡೆಸಿದರು.

ಜಗತ್ತಿಗೆ ಭಾರತದ ಅಮೂಲ್ಯ ಕೊಡುಗೆ: ಮಧ್ಯಪ್ರದೇಶದ ಜಬಲ್‌ಪುರ ಗ್ಯಾರಿಸನ್ ಮೈದಾನದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಭಾಗವಹಿಸಿದ್ದರು. ಶ್ವೇತ ವರ್ಣದ ಸಲ್ವಾರ್ ಮತ್ತು ಕುರ್ತಾ ಧರಿಸಿದ್ದ ರಾಷ್ಟ್ರಪತಿ ಮುರ್ಮು ನೀಲಿ ಬಣ್ಣದ ಯೋಗ ಮ್ಯಾಟ್‌ನಲ್ಲಿ ತಮ್ಮ ಯೋಗ ಕೌಶಲವನ್ನು ತೋರಿಸಿದರು.

ಯೋಗವೆಂಬುದು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆ ಜಾಗತಿಕ ಸಮುದಾಯಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆ. ಇದು ಸಾವಿರಾರು ವರ್ಷಗಳಿಂದ ನಮ್ಮ ಋಷಿಗಳು ಮತ್ತು ಯೋಗಿಗಳು ನಡೆಸಿದ ತಪಸ್ಸಿನ ಫಲ. ಹಲವು ಜಾಗತಿಕ ಸವಾಲುಗಳ ಮಧ್ಯೆ ಮಾನವ ಜನಾಂಗಕ್ಕೆ ಶಾಂತಿ ಮತ್ತು ಸಾಮರಸ್ಯದ ಮಾರ್ಗವನ್ನು ತೋರಿಸುವಲ್ಲಿ ಯೋಗ ಪ್ರಮುಖ ಪಾತ್ರ ವಹಿಸಿದೆ. ಆರೋಗ್ಯ, ಸಮತೋಲನ ಮತ್ತು ಅರ್ಥಪೂರ್ಣ ಜೀವನ ನಡೆಸುವುದನ್ನು ಯೋಗ ಹೇಳಿಕೊಟ್ಟಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಲಡಾಖ್‌ನಲ್ಲಿ ಉಪರಾಷ್ಟ್ರಪತಿ ಯೋಗ: ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಲಡಾಖ್‌ನಲ್ಲಿ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ನೂರಾರು ಜನರೊಂದಿಗೆ ಯೋಗಾಭ್ಯಾಸ ನಡೆಸಿದರು. ಹಿಮಾಲಯದ ಪರ್ವತ ತಪ್ಪಲಿನ ಮುಂಭಾಗ ಆಸ್ಟ್ರೋ ಟರ್ಫ್ ಕ್ರೀಡಾಂಗಣದಲ್ಲಿ ಉಪರಾಷ್ಟ್ರಪತಿ ರಾಧಾಕೃಷ್ಣನ್ ವಿವಿಧ ಆಸನಗಳನ್ನು ಪ್ರದರ್ಶಿಸಿದರು.

ಶಿಲ್ಲಾಂಗ್‌ನಲ್ಲಿ ರಾಜನಾಥ್ ಯೋಗಾಭ್ಯಾಸ: ಮೇಘಾಲಯದ ಶಿಲ್ಲಾಂಗ್‌ನಲ್ಲಿರುವ ಭಾರತೀಯ ವಾಯುಪಡೆ(ಐಎಎಫ್) ಮೈದಾನದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜನರಿಗೆ ಯೋಗ ದಿನದ ಶುಭಾಶಯಗಳನ್ನು ತಿಳಿಸಿದರು. ಪ್ರಾಣಾಯಾಮ, ಆಸನಗಳನ್ನು ಮಾಡಿದ ರಾಜನಾಥ್ ಮಾತನಾಡಿ, ಆರೋಗ್ಯಕರ ದೇಹಕ್ಕಾಗಿ ಅಷ್ಟೇ ಅಲ್ಲದೆ ಯೋಗವು ಸಮತೋಲನ ಮತ್ತು ಶಿಸ್ತಿನ ಜೀವನದ ದಾರಿದೀಪವಾಗುತ್ತದೆ ಎಂದು ಹೇಳಿದ್ದಾರೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ನಾಯಕತ್ವ ಮತ್ತು ನಿರಂತರ ಪ್ರಯತ್ನಗಳಿಂದಾಗಿ ಭಾರತದ ಸಾಂಸ್ಕೃತಿಕ ಪರಂಪರೆಯಾದ ಯೋಗವು ಜಾಗತಿಕ ಮಟ್ಟದಲ್ಲಿ ಚಳವಳಿಯಾಗಿ ಬದಲಾಗಿದೆ ಎಂದು ರಾಜನಾಥ್ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.



ವಿಶ್ವವಿಖ್ಯಾತ ಪ್ಯಾರಿಸ್‌ನ ಐಫೆಲ್ ಟವರ್ ಮುಂಭಾಗದಲ್ಲಿ ಯೋಗಾಭ್ಯಾಸ.


ಮದರಸಾದಲ್ಲೂ ಯೋಗ!

ಉತ್ತರಪ್ರದೇಶದ ಲಖಿಮ್‌ಪುರ್ ಖೇರಿ ಮತ್ತು ಈಟಾ ಜಿಲ್ಲೆಗಳ ಮದರಸಾಗಳಲ್ಲಿ ನೂರಾರು ಮುಸ್ಲಿಮ್ ವಿದ್ಯಾರ್ಥಿಗಳು ಭಾನುವಾರ ಯೋಗಾಸನಗಳನ್ನು ಮಾಡಿ ಸಾಮರ್ಥ್ಯ ತೋರಿದರು. ಯೋಗ ಅಧ್ಯಾಪಕ ಕುಲದೀಪ್ ವರ್ಮಾ ಮದರಸಾ ವಿದ್ಯಾರ್ಥಿಗಳಿಗೆ ಯೋಗ ಹೇಳಿಕೊಟ್ಟರು.

ಗಣ್ಯರಿಂದ ವಿವಿಧೆಡೆ ಯೋಗ: ಅಸ್ಸಾಂನ ಗುವಾಹಟಿಯ ಬ್ರಹ್ಮಪುತ್ರಾ ನದಿ ದಡದಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮುಖ್ಯ ಅತಿಥಿಯಾಗಿದ್ದರು. ಝಾನ್ಸಿ ಕೋಟೆಯ ಬಳಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಸನಗಳನ್ನು ಮಾಡಿ ಧ್ಯಾನಸ್ಥರಾಗಿ ಗಮನಸೆಳೆದರು. ದೇಶದೆಲ್ಲೆಡೆ ಮುಖ್ಯಮಂತ್ರಿಗಳು, ರಾಜ್ಯಪಾಲರು ಮತ್ತು ಸಚಿವರು ಸಾರ್ವಜನಿಕ ಯೋಗಾಭ್ಯಾಸ ನಡೆಸಿದರು.

ಪಡೆಸ್ವಪಡೆ, ಸೈನಿಕರಿಂದ ಯೋಗ: ಸೇನಾಪಡೆ, ವಾಯುಪಡೆ ಮತ್ತು ನೌಕಾಪಡೆಯ ವಿವಿಧ ವಿಭಾಗಗಳ ಯೋಧರು ಯೋಗಾಭ್ಯಾಸವನ್ನು ನಡೆಸಿದರು. ಹಿಮಾಲಯದ ತಪ್ಪಲಿನಲ್ಲಾಗಲಿ, ಅಂಡಮಾನ್ ನಿಕೋಬಾರ್ ದ್ವೀಪದಲ್ಲಾಗಲಿ ಅಥವಾ ಐಎನ್‌ಎಸ್ ಯುದ್ಧನೌಕೆಗಳಲ್ಲಾಗಲಿ ಯೋಧರು ಯೋಗ ಅಭ್ಯಾಸವನ್ನು ನಡೆಸಿದರು.

ಯೋಗದಿಂದ ಮಾನಸಿಕ ದೃಢತೆ: ದ್ವಿವೇದಿ: ಅಸ್ಸಾಂನ ತೇಜ್‌ಪುರ ಮಿಲಿಟರಿ ಸ್ಟೇಷನ್‌ನಲ್ಲಿ ಯೋಗಾಭ್ಯಾಸದಲ್ಲಿ ಪಾಲ್ಗೊಂಡ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ಯೋಗ ಕೇವಲವೊಂದು ದೈಹಿಕ ಅಭ್ಯಾಸವಲ್ಲ, ಯೋಗದಿಂದ ಮಾನಸಿಕ ಮತ್ತು ಭಾವನಾತ್ಮಕ ದೃಢತೆಯನ್ನು ವಿಸ್ತರಿಸಲು ಸಾಧ್ಯ ಎಂದು ಹೇಳಿದ್ದಾರೆ.



ಝಾನ್ಸಿಯಲ್ಲಿ ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಯೋಗ.




ಸಿಯಾಚಿನ್ ಗ್ಲೇಸಿಯರ್‌ನಲ್ಲಿ ಸೈನಿಕರೊಂದಿಗೆ ಯೋಗಪ್ರದರ್ಶನ ನೀಡಿದ ಸೇನೆಯ ಸ್ನಿಫರ್ ಶ್ವಾನ.



ಗುರುಗ್ರಾಮದ ಯೋಗ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಧ್ಯೇಯದೊಂದಿಗೆ ಭಾನುವಾರ ಒಟ್ಟು 193 ರಾಷ್ಟ್ರಗಳಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಈ ಧ್ಯೇಯವು ಎಲ್ಲಾ ವಯೋಮಾನದ ಜನರ, ವಿಶೇಷವಾಗಿ ಹಿರಿಯ ನಾಗರಿಕರ ದೈಹಿಕ ಕ್ಷಮತೆ, ಮಾನಸಿಕ ಆರೋಗ್ಯ, ಚಲನಶೀಲತೆ, ದೇಹದ ಸಮತೋಲನ ಹಾಗೂ ಜೀವನಮಟ್ಟ ಸುಧಾರಿಸುವ ಯೋಗದ ಮಹತ್ವವನ್ನು ಹೇಳುತ್ತದೆ. ದೇಶದೆಲ್ಲೆಡೆ 6 ಲಕ್ಷಕ್ಕೂ ಅಧಿಕ ಯೋಗ ಸಂಗಮ ಕಾರ್ಯಕ್ರಮಗಳು ಯಶಸ್ವಿಯಾದವು. ವಿವಿಧ ರಾಷ್ಟ್ರಗಳ ಸರ್ಕಾರಗಳು, ರಾಯಭಾರ ಕಚೇರಿಗಳು, ಯೋಗ ಸಂಸ್ಥೆಗಳು, ಶಾಲಾ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಸೇವಾ ಸಂಸ್ಥೆಗಳು, ವಿವಿಧ ಸಮುದಾಯದ ಸಂಘಟನೆಗಳು ಹಾಗೂ ಸಂಘ ಸಂಸ್ಥೆಗಳು ಯೋಗ ದಿನ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಈ ಕಾರ್ಯಕ್ರಮಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಯೋಗಾಸಕ್ತರು ಭಾಗವಹಿಸಿದರು. ಯೋಗವನ್ನು ಆರೋಗ್ಯ ಮತ್ತು ಜೀವನಶೈಲಿಯ ಪ್ರಮುಖ ಸಾಧನವನ್ನಾಗಿ ಅಳವಡಿಸಿಕೊಳ್ಳುವ ಸಂದೇಶ ನೀಡಿದರು.



ಅಂಡಮಾನ್ ನಿಕೋಬಾರ್ ದ್ವೀಪದಲ್ಲಿ ಯೋಗನಿರತ ಕರಾವಳಿ ಪಡೆ ಸಿಬ್ಬಂದಿ.

193 ರಾಷ್ಟ್ರಗಳಲ್ಲಿ ಯೋಗಾಭ್ಯಾಸ!

ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈ ಪೊಲೀಸ್ ಆಫೀಸರ್ಸ್ ಕ್ಲಬ್‌ನಲ್ಲಿ ಭಾನುವಾರ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 1,600ಕ್ಕೂ ಹೆಚ್ಚು ಯೋಗಾಸಕ್ತರು ಪಾಲ್ಗೊಂಡರು. ದುಬೈ ನಿವಾಸಿಗಳು ಬೆಳಗ್ಗೆ 3.30ರ ವೇಳೆಗೆ ಎದ್ದು ಯೋಗ ದಿನ ಆಚರಿಸಿದ್ದಾರೆಂದು ಖಲೀಜ್ ಟೈಮ್ಸ್ ವರದಿ ಮಾಡಿದೆ. ಸೌದಿ ಅರೇಬಿಯಾ, ನೇಪಾಳ, ಪಾಕಿಸ್ತಾನ, ಚೀನಾ, ರಷ್ಯಾ, ಅಮೆರಿಕ, ಕೆನಡಾ, ಜಪಾನ್, ಮ್ಯಾನ್ಮಾರ್ ಸೇರಿದಂತೆ 193 ರಾಷ್ಟ್ರಗಳಲ್ಲಿ ನೂರಾರು ಸಂಖ್ಯೆಯಲ್ಲಿ ಜನರು ಯೋಗಾಭ್ಯಾಸ ನಡೆಸಿದರು.



ಕೋಲ್ಕತಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಜತೆ ಯೋಗನಿರತ ಜನರು.



ಲಡಾಖ್‌ನಲ್ಲಿ ಭಾರತೀಯ ಯೋಧರಿಂದ ಯೋಗಾಭ್ಯಾಸ.



ಯೋಗ ದಿನದಂದು ದಿಲ್ಲಿಯ ಸಂಸತ್ ಭವನ ಕಂಡಿದ್ದು ಹೀಗೆ.

ಪಾರಂಪರಿಕ ಸ್ಥಳಗಳಲ್ಲಿ ಯೋಗ

ಆಗ್ರಾದ ತಾಜ್ ಮಹಲ್‌ನಿಂದ ತೆಲಂಗಾಣದ ವಾರಂಗಲ್ ಕೋಟೆಯವರೆಗೆ ಎಲ್ಲಾ ಭಾರತೀಯ ಪುರಾತತ್ವ ಇಲಾಖೆ(ಎಎಸ್‌ಐ) ಸ್ಥಳಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು. ಉತ್ತರಪ್ರದೇಶದ ತಾಜ್ ಮಹಲ್ ಮತ್ತು ಫತೇಪುರ್ ಸಿಕ್ರಿ, ರಾಜಸ್ಥಾನದ ದೀಗ್ ಅರಮನೆ, ತೆಲಂಗಾಣದ ವಾರಂಗಲ್ ಕೋಟೆ, ಕರ್ನಾಟಕದ ಬೀದರ್ ಕೋಟೆ, ಕೇರಳದ ಬೇಕಲ ಕೋಟೆ ಸೇರಿ ದೇಶದೆಲ್ಲೆಡೆ ಒಟ್ಟು 3,686 ಪಾರಂಪರಿಕ ಸ್ಥಳಗಳಲ್ಲಿ ಯೋಗ ದಿನ ಆಯೋಜಿಸಲಾಯಿತು.

ಕಿರುಸುದ್ದಿ

ಆನೆಗಳೊಂದಿಗೆ ಅರಣ್ಯ ಸಿಬ್ಬಂದಿ ಯೋಗಾಭ್ಯಾಸ



• **ಕೋಲ್ಕತಾ:** ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಪಶ್ಚಿಮ ಬಂಗಾಳದ ಜಲ್ದಾಪುರ ನ್ಯಾಷನಲ್ ಪಾರ್ಕ್‌ನಲ್ಲಿ ಅರಣ್ಯ ಸಿಬ್ಬಂದಿ ನದಿ ತೀರದಲ್ಲಿ ಆನೆಗಳ ಜತೆ ಯೋಗಾಭ್ಯಾಸ ನಡೆಸುವ ಮೂಲಕ ದೇಶದ ಗಮನಸೆಳೆದಿದ್ದಾರೆ. ದಟ್ಟ ಅರಣ್ಯ ಪ್ರದೇಶದಲ್ಲಿ ಆನೆಗಳೊಂದಿಗೆ ಯೋಗಾಸನ ಮಾಡಿ ಅರಣ್ಯ ಸಿಬ್ಬಂದಿ, ಮಾನವ ಮತ್ತು ಪ್ರಕೃತಿಯ ನಡುವಿನ ಬಾಂಧವ್ಯದ ಸಂದೇಶ ನೀಡಿದರು.

ಬ್ರಿಟನ್ ಪ್ರಧಾನಿ ಸ್ಟಾರ್ಮರ್ ರಾಜೀನಾಮೆ ಸಾಧ್ಯತೆ: ಟ್ರಂಪ್

• **ವಾಷಿಂಗ್ಟನ್:** ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರು ವಲಸೆ ಹಾಗೂ ಇಂಧನ ನೀತಿಗಳಲ್ಲಿ ವಿಫಲರಾಗಿರುವ ಕಾರಣ ಶೀಘ್ರದಲ್ಲೇ ರಾಜೀನಾಮೆ ನೀಡಲಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ತಮ್ಮ ಸಾಮಾಜಿಕ ಜಾಲತಾಣದಲ್ಲಿ ಟ್ರಂಪ್, ಸ್ಟಾರ್ಮರ್ ವಲಸೆ ಮತ್ತು ಇಂಧನ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಉತ್ತರ ಸಮುದ್ರದ ತೈಲ ಉತ್ಪಾದನೆಗೆ ಅವಕಾಶ ನೀಡಬೇಕಿತ್ತು ಎಂದು ಟೀಕಿಸಿದ್ದಾರೆ. ಬ್ರಿಟಿಷ್ ಮಾಧ್ಯಮ ವರದಿಗಳ ಪ್ರಕಾರ, ಸ್ಟಾರ್ಮರ್ ಸೋಮವಾರವೇ ರಾಜೀನಾಮೆ ಕುರಿತು ಘೋಷಣೆ ಮಾಡುವ ಸಾಧ್ಯತೆ ಇದೆ. ಆದರೆ, ಸರ್ಕಾರದ ಮೂಲಗಳು ಈ ವರದಿಗಳನ್ನು ತಳ್ಳಿಹಾಕಿದ್ದು, ಸ್ಟಾರ್ಮರ್ ಆಡಳಿತದ ಕೆಲಸಗಳ ಮೇಲೆಯೇ ಗಮನಹರಿಸುತ್ತಿದ್ದಾರೆ ಎಂದು ತಿಳಿಸಿವೆ. ಇತ್ತೀಚೆಗೆ ಲೇಬರ್ ಪಕ್ಷದೊಳಗಿನ ಅಸಮಾಧಾನ ಹೆಚ್ಚಾಗಿದ್ದು, 100ಕ್ಕೂ ಹೆಚ್ಚು ಸಂಸದರು ನಾಯಕತ್ವ ಬದಲಾವಣೆಗೆ ಒತ್ತಾಯಿಸುತ್ತಿದ್ದಾರೆ ಎನ್ನಲಾಗಿದೆ.

ವನ್ಯಜೀವಿ ಕಳ್ಳಸಾಗಣೆ ಪತ್ತೆ: ಬಾಂಗ್ಲಾ ಪ್ರಜೆ ಸೇರಿ 9 ಸೆರೆ

• **ಗುವಾಹಟಿ:** ಅಸ್ಸಾಂನಲ್ಲಿ ವನ್ಯಜೀವಿಗಳ ಕಳ್ಳಸಾಗಣೆಯ ಅಂತಾರಾಷ್ಟ್ರೀಯ ಜಾಲವೊಂದನ್ನು ಭೇದಿಸಿದ ಭದ್ರತಾ ಸಿಬ್ಬಂದಿ, ಒಬ್ಬ ಬಾಂಗ್ಲಾದೇಶಿ ಪ್ರಜೆ ಸಹಿತ 9 ಮಂದಿಯನ್ನು ಸೆರೆಹಿಡಿದಿದ್ದಾರೆ. ಗೋಲ್ಡನ್ ಲಂಗೂರ್ ಮಂಗಗಳನ್ನು ಸೆರೆಹಿಡಿದು ಕಳ್ಳಸಾಗಣೆ ಮಾಡುತ್ತಿದ್ದ 9 ಮಂದಿಯ ತಂಡವೊಂದನ್ನು ಪೊಲೀಸ್ ಮತ್ತು ಅರಣ್ಯ ಸಿಬ್ಬಂದಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಸಾಕ್ಷಿಸಮೇತ ಸಿಕ್ಕಿಬಿದ್ದಿದ್ದಾರೆ. ಇವರ ಬಳಿಯಿದ್ದ 8 ಗೋಲ್ಡನ್ ಲಂಗೂರ್‌ಗಳನ್ನು ವಶಪಡಿಸಿದ್ದು, ಒಂದು ಮೃತಪಟ್ಟಿತ್ತು.

ಯುಎಇ, ರಷ್ಯಾದಿಂದ ತೈಲ ಆಮದು ಹೆಚ್ಚಳ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿ ಮತ್ತು ಗಲ್ಫ್ ರಾಷ್ಟ್ರಗಳ ಪೂರೈಕೆ ಸಂಪೂರ್ಣ ಸಹಜ ಸ್ಥಿತಿಗೆ ಬರುವ ಮುನ್ನವೇ ಭಾರತದ ತೈಲ ಶುದ್ಧೀಕರಣ ಸಂಸ್ಥೆಗಳು, ರಷ್ಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ(ಯುಎಇ) ಕಚ್ಚಾ ತೈಲ ಆಮದನ್ನು ಹೆಚ್ಚಿಸಿಕೊಂಡಿವೆ. ಭಾರತ ಜೂ.19ರವರೆಗೆ ರಷ್ಯಾದಿಂದ ದಿನಂಪ್ರತಿ ಸರಾಸರಿ 2.66 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದ್ದು, ಮೇ ತಿಂಗಳ 1.91 ಮಿಲಿಯನ್ ಬ್ಯಾರೆಲ್‌ಗೆ ಹೋಲಿಸಿದರೆ ಇದು ಗಣನೀಯ ಹೆಚ್ಚಳವಾಗಿದೆ. ಈ ಮೂಲಕ ಮಾಸ್ಕೋ ಭಾರತದ ಅತಿ ದೊಡ್ಡ ತೈಲ ಪೂರೈಕೆದಾರ ರಾಷ್ಟ್ರವಾಗಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದೆ. ಇನ್ನು ಯುಎಇನಿಂದ ಆಮದು ಪ್ರಮಾಣ ದಿನಕ್ಕೆ 6,36,000 ಬ್ಯಾರೆಲ್‌ಗಳಷ್ಟಿದ್ದು, ಇದು ಮೇ ತಿಂಗಳ ದಾಖಲೆಯ 6,44,000 ಬ್ಯಾರೆಲ್‌ಗಿಂತ ಸ್ವಲ್ಪ ಕಡಿಮೆಯಾಗಿದೆ. ವೆನೆಜುವೆಲಾ ದಿನಕ್ಕೆ 2,09,000 ಬ್ಯಾರೆಲ್ ಪೂರೈಕೆಯೊಂದಿಗೆ ಭಾರತದ ನಾಲ್ಕನೇ ದೊಡ್ಡ ಕಚ್ಚಾ ತೈಲ ಪೂರೈಕೆದಾರ ರಾಷ್ಟ್ರವಾಗಿ ಹೊರಹೊಮ್ಮಿದ್ದು, ಸೌದಿ ಅರೇಬಿಯಾ(384,000 ಬ್ಯಾರೆಲ್) ಮೂರನೇ ಸ್ಥಾನದಲ್ಲಿದೆ. ಇದೇ ವೇಳೆ, ಅಮೆರಿಕದಿಂದ ಆಮದಾಗುತ್ತಿದ್ದ ತೈಲ ಪ್ರಮಾಣ ಮೇ ತಿಂಗಳ 2,52,000 ಬ್ಯಾರೆಲ್‌ನಿಂದ ಜೂನ್‌ನಲ್ಲಿ 91,000 ಬ್ಯಾರೆಲ್‌ಗೆ ತೀವ್ರವಾಗಿ ಕುಸಿದಿದೆ.

ಅಮೆರಿಕ ಮತ್ತು ಇರಾನ್ ನಡುವೆ ಕದನ ವಿರಾಮ ಒಪ್ಪಂದದ ಬಳಿಕ, ತೈಲ ಹೊತ್ತ ಭಾರತದ 3 ಟ್ಯಾಂಕರ್‌ಗಳು ಮತ್ತು ಎಲ್‌ಎನ್‌ಜಿ ನೌಕೆ ಸಂಚಾರ ಪುನಾರಂಭಿಸಿದೆ.

ಅನಿಲ ಸೋರಿಕೆ: 7 ಬಲಿ, 67 ಜನರ ಸ್ಥಿತಿ ಗಂಭೀರ

• **ತಿರುವಳ್ಳೂರು:** ತಮಿಳುನಾಡಿನ ತಿರುವಳ್ಳೂರಿನ ಸೀಫುಡ್ ರಫ್ತು ಕಾರ್ಖಾನೆಯಲ್ಲಿ ಸಂಭವಿಸಿದ ಅಮೋನಿಯಾ ಅನಿಲ ಸೋರಿಕೆಯಿಂದಾಗಿ 7 ಮಂದಿ ಸಾವನ್ನಪ್ಪಿದ್ದು, 67ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರವಾಗಿದೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಈ ದುರಂತ, ಸೇಂಟ್ ಪೀಟರ್ ಅಂಡ್ ಪಾಲ್ ಸೀಫುಡ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಂಭವಿಸಿದೆ. ಕಣ್ಣಿಗೈಪೇರ್ ಗ್ರಾಮದಲ್ಲಿರುವ ಈ ಖಾಸಗಿ ಸಂಸ್ಕರಣಾ ಮತ್ತು ರಫ್ತು ಕಂಪನಿಯಲ್ಲಿ ಅನಿಲ ಸೋರಿಕೆಯಾಗಿದ್ದು, ಸಿಬ್ಬಂದಿ ಕೆಲವೇ ನಿಮಿಷಗಳಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಕುಸಿದು ಬಿದ್ದಿದ್ದಾರೆ. ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ತನಿಖೆಗೆ ಆದೇಶಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆ: ಅರಕ್ಕೋಣಂನಲ್ಲಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ(ಎನ್‌ಡಿಆರ್‌ಎಫ್) 4ನೇ ಬೆಟಾಲಿಯನ್, ರಾಸಾಯನಿಕ, ಜೈವಿಕ, ವಿಕಿರಣ ಮತ್ತು ಪರಮಾಣು(ಸಿಬಿಆರ್‌ಎನ್) ತುರ್ತು ಸ್ಪಂದನಾ ತಂಡವನ್ನು ನಿಯೋಜಿಸಿದೆ. ಚೆನ್ನೈನಿಂದ ಬಂದ 30 ಎನ್‌ಡಿಆರ್‌ಎಫ್ ಸಿಬ್ಬಂದಿಯನ್ನೊಳಗೊಂಡ ತಂಡ ಸ್ಥಳಕ್ಕೆ ಧಾವಿಸಿದೆ. ಸೀನಿಯರ್ ಕಮಾಂಡೆಂಟ್ ಅಖಿಲೇಶ್ ಕುಮಾರ್ ನಿರ್ದೇಶನದ ಮೇರೆಗೆ ತಂಡ ಅಪಾಯಕಾರಿ ವಲಯವನ್ನು ಪ್ರತ್ಯೇಕಿಸಿ, ಬಾಧಿತ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ. ರಕ್ಷಣಾ ಸಿಬ್ಬಂದಿ ಅನಿಲ ಸೋರಿಕೆಯ ತೀವ್ರತೆಯನ್ನು ಪರಿಶೀಲಿಸುತ್ತಿದ್ದು, ಹೆಚ್ಚಿನ ಅಪಾಯ ತಡೆಯಲು ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸಿದ್ದಾರೆ. ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಆರ್ಲೇಕರ್ ತೀವ್ರ ಆತಂಕ ವ್ಯಕ್ತಪಡಿಸಿದ್ದು, ಗಂಭೀರ ಸ್ಥಿತಿಯಲ್ಲಿರುವವರು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸಿದ್ದಾರೆ.

ಇರಾನ್-ಅಮೆರಿಕ ಶಾಂತಿ ಮಾತುಕತೆ ಸ್ವಿಸ್‌ನಲ್ಲಿ ಶುರು

• **ಜ್ಯೂರಿಚ್:** ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ನಿಟ್ಟಿನಲ್ಲಿ, ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಭಾನುವಾರ ಸ್ವಿಟ್ಜರ್ಲೆಂಡ್‌ನ ಬರ್ಗೆನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶಾಂತಿ ಮಾತುಕತೆ ಆರಂಭಿಸಿದ್ದಾರೆ. ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಪಾಕಿಸ್ತಾನದ ಹಿರಿಯ ನಾಯಕರು ಮಧ್ಯವರ್ತಿಗಳಾಗಿ ಪಾಲ್ಗೊಂಡಿದ್ದಾರೆ.

ಕಳೆದ ವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಸಹಿ ಹಾಕಿರುವ, ಮಧ್ಯಂತರ ಶಾಂತಿ ಒಪ್ಪಂದದಲ್ಲಿರುವ ಪ್ರಮುಖ ನಿಯಮಾವಳಿಗಳ ಜಾರಿಯನ್ನು ಕೇಂದ್ರೀಕರಿಸಿ ಮಾತುಕತೆ ನಡೆಯಲಿದೆ. ಒಪ್ಪಂದಕ್ಕೆ ಶರೀಫ್ ಸಾಕ್ಷಿದಾರರಾಗಿ ಸಹಿ ಹಾಕಿದ್ದರು. ಪ.ಏಷ್ಯಾದಲ್ಲಿ ಶಾಂತಿ ಮರುಸ್ಥಾಪನೆ ನಿಟ್ಟಿನಲ್ಲಿ ನಡೆಯಬೇಕಿರುವ ಮಾತುಕತೆಯ ಆರಂಭಕ್ಕೆ ಶಾಂತಿ ಒಪ್ಪಂದ ಹಾದಿ ತೆರೆದಿದೆ. ಮುಖ್ಯವಾಗಿ ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮ, ಇರಾನ್ ಮೇಲೆ ವಿಧಿಸಿರುವ ನಿರ್ಬಂಧಗಳು ಮತ್ತು ಲೆಬನಾನ್ ಮೇಲೆ ಇಸ್ರೇಲ್ ದಾಳಿ ಇತ್ಯಾದಿ ವಿಚಾರಗಳು ಮಾತುಕತೆಯಲ್ಲಿ ಪ್ರಧಾನವಾಗಿ ಪ್ರಸ್ತಾಪವಾಗಲಿವೆ.

ಕಳೆದ ಹತ್ತು ವಾರಗಳಲ್ಲಿ ಮೊದಲ ಬಾರಿ ಅಮೆರಿಕ ಮತ್ತು ಇರಾನ್‌ನ ಹಿರಿಯ ಅಧಿಕಾರಿಗಳು ಭಾನುವಾರ ಒಂದೇ ಕೊಠಡಿಯಲ್ಲಿ ನೇರ ಮಾತುಕತೆಗಳಿಗೆ ಮುಂದಾಗಿದ್ದಾರೆ. ಏಪ್ರಿಲ್‌ನಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆ ಮುಂದುವರಿದಿತ್ತು. ಮಾತುಕತೆಗೆ ಸಂಬಂಧಿತ ತಾಂತ್ರಿಕ ವಿಚಾರಗಳ ಕುರಿತು ಶುಕ್ರವಾರ ಮಾತುಕತೆ ನಡೆಯಬೇಕಿತ್ತು. ಆದರೆ ಇರಾನ್ ಬೆಂಬಲಿತ ಹಿಜ್ಬುಲ್ಲಾ ಹಾಗೂ ಇಸ್ರೇಲ್ ಮಧ್ಯೆ ಮತ್ತೆ ಗುಂಡಿನ ದಾಳಿ ಶುರುವಾದ್ದರಿಂದ ಮಾತುಕತೆ ವಿಳಂಬವಾಗಿದೆ.

ಉದ್ಧವ್ ಬಣದ 6 ಸಂಸದರು ಶಿಂಧೆ ಬಣಕ್ಕೆ ಸೇರ್ಪಡೆ?

ಪುಣೆ: ಉದ್ಧವ್ ಠಾಕ್ರೆ ನೇತೃತ್ವದ ಶಿವ ಸೇನೆ(ಯುಬಿಟಿ)ಯ ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಹಾಗೂ ನಾಗೇಶ್ ಪಾಟೀಲ್ ಅಷ್ಟಿಕರ್ ಸೇರಿ 6 ಸಂಸದರು ಏಕನಾಥ್ ಶಿಂಧೆ ನೇತೃತ್ವದ ಬಣ ಸೇರುವುದನ್ನು ದೃಢೀಕರಿಸಿದ್ದಾರೆ. ಭಾನುವಾರ ತಮ್ಮ ಬೆಂಬಲಿಗರೊಂದಿಗೆ ನಿಂಬಾಳ್ಕರ್ ಸಭೆ ಸೇರಿ ಚರ್ಚಿಸಿದ್ದಾರೆ. ಸಭೆಯಲ್ಲಿ ನಿಂಬಾಳ್ಕರ್ ತಮ್ಮ ಬೆಂಬಲಿಗರೊಂದಿಗೆ ಚರ್ಚೆ ನಡೆಸಿದ್ದು, ನಿಂಬಾಳ್ಕರ್ ಅವರು ಶಿಂಧೆ ಅವರೊಂದಿಗೆ ಕೈಜೋಡಿಸಬೇಕು ಎಂದು ನಿಂಬಾಳ್ಕರ್ ಬೆಂಬಲಿಗರೊಬ್ಬರು ಹೇಳಿದ್ದಾರೆ. ಪುಣೆಯ ಧಾರಾಶಿವ್‌ನಲ್ಲಿನ ತಮ್ಮ ನಿವಾಸಕ್ಕೆ ವೈ ಪ್ಲಸ್ ಭದ್ರತೆಯೊಂದಿಗೆ ಆಗಮಿಸಿದ ನಿಂಬಾಳ್ಕರ್, ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಬೆಂಬಲಿಗರನ್ನು ಭೇಟಿಯಾಗಲು, ನನ್ನ ಮನೆಯಲ್ಲೇ ಬೆಂಬಲಿಗರನ್ನು ಕರೆಸಿಕೊಳ್ಳುತ್ತೇನೆ. ದಣ ಮೋಡುವವರ ಬಳಿಯೂ ನನ್ನ ದೂರವಾಣಿ ಸಂಖ್ಯೆ ಇದೆಯೆಂದು ಹೇಳ ಬಯಸುವವರಿಗೂ ಬೆಂಬಲಿಗರಿದ್ದಾರೆ ಎಂಬ ಸಂದೇಶ ನೀಡಿದ್ದಾರೆ.

ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗು ಸೇರ್ಪಡೆಗೊಳಿಸಿದ ಮೋದಿ

ಕಾರ್ಯತಂತ್ರಕ್ಕೆ ಸಮುದ್ರ ಸಾಮರ್ಥ್ಯ ನಿರ್ಣಾಯಕ

• **ಕೋಲ್ಕತಾ:** ಬಲಿಷ್ಠ ಸಮುದ್ರ ಸಾಮರ್ಥ್ಯ, ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವನ್ನು ನಿರ್ಧರಿಸುವ ಪ್ರಮುಖ ಅಂಶ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ನೌಕಾಪಡೆಗೆ ಸ್ವದೇಶಿ ನಿರ್ಮಿತ ಮೂರು ಹಡಗುಗಳನ್ನು ಸೇರ್ಪಡೆಗೊಳಿಸಿದ ಬಳಿಕ ಮಾತನಾಡಿದ ಅವರು, ಭಾರತ ಈ ವಾಸ್ತವವನ್ನು ಅರಿತು ಅದಕ್ಕೆ ತಕ್ಕ ಸಿದ್ಧತೆ ನಡೆಸುತ್ತಿದೆ ಎಂದರು.

ಮೋದಿ ಸ್ವದೇಶಿ ನಿರ್ಮಿತ ಸ್ಟೆಲ್ತ್ ಫ್ರಿಗೇಟ್ ದುನಗಿರಿ, ಸರ್ವೆ ಹಡಗು ಸಂಶೋಧಕ್ ಹಾಗೂ ಜಲಾಂತರ್ಗಾಮಿ ವಿರೋಧಿ ಯುದ್ಧನೌಕೆ ಅಗ್ರಯ್ ಅನ್ನು ನೌಕಾಪಡೆಗೆ ಸೇರ್ಪಡೆಗೊಳಿಸಿದರು. ಈ ವೇದಿಕೆಗಳು ಸಮುದ್ರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೆ ಮತ್ತು ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಲ್ಲಿ ಪ್ರಮುಖ ಸಾಮರ್ಥ್ಯ ಹೊಂದಿವೆ ಎಂದು ಹೇಳಿದರು.

ಯಾವುದೇ ರಾಷ್ಟ್ರ ಸಮುದ್ರ ಸಾಮರ್ಥ್ಯವಿಲ್ಲದೆ ದೊಡ್ಡ ಶಕ್ತಿಯಾಗಲು ಸಾಧ್ಯವಿಲ್ಲ, ಅಭಿವೃದ್ಧಿ,



ಭದ್ರತೆ ಮತ್ತು ಸಮೃದ್ಧಿ ಸಮುದ್ರಗಳಿಗೆ ಸಂಬಂಧಿಸಿವೆ ಎಂದು ಮೋದಿ ಹೇಳಿದರು. ಭಾರತ ರಕ್ಷಣಾ ಕ್ಷೇತ್ರದಲ್ಲಿ ಕೇವಲ ಖರೀದಿದಾರ ರಾಷ್ಟ್ರವಾಗಿ ಉಳಿಯದೆ ನಿರ್ಮಾಣ ರಾಷ್ಟ್ರವಾಗುವತ್ತ ಸಾಗುತ್ತಿದೆ ಎಂದರು.

ಆತ್ಮನಿರ್ಭರತೆಗೆ ಒತ್ತು: 2022ರಲ್ಲಿ ಐಎನ್‌ಎಸ್ ವಿಕ್ರಾಂತ್ ಸೇರ್ಪಡೆಯನ್ನು ಉಲ್ಲೇಖಿಸಿದ ಮೋದಿ, ಐಎನ್‌ಎಸ್ ಅಗ್ರಯ್, ಐಎನ್‌ಎಸ್ ದುನಗಿರಿ ಮತ್ತು ಐಎನ್‌ಎಸ್ ಸಂಶೋಧಕ್ ಸೇರ್ಪಡೆ, ಆತ್ಮನಿರ್ಭರ ಭಾರತದ ಪಯಣಕ್ಕೆ ವೇಗ ನೀಡಿದೆ ಎಂದರು. ಕಳೆದ ಕೆಲವು ವರ್ಷಗಳಲ್ಲಿ 40ಕ್ಕೂ ಹೆಚ್ಚು ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಸೇರ್ಪಡೆಗೊಳಿಸಲಾಗಿದ್ದು, 45 ದೊಡ್ಡ ನೌಕಾ ವೇದಿಕೆಗಳ ನಿರ್ಮಾಣ ನಡೆಯುತ್ತಿದೆ ಎಂದು ಹೇಳಿದರು.

ಈ ಹಡಗುಗಳನ್ನು ಭಾರತೀಯ ನೌಕಾಪಡೆಯ ವಾರ್‌ಶಿಪ್ ಡಿಸೈನ್ ಬ್ಯೂರೋ ವಿನ್ಯಾಸಗೊಳಿಸಿದ್ದು, ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ ಲಿಮಿಟೆಡ್ ನಿರ್ಮಿಸಿದೆ. ಇವುಗಳಲ್ಲಿ ಶೇ.75ಕ್ಕಿಂತ ಹೆಚ್ಚು ಸ್ವದೇಶಿ ಅಂಶಗಳಿದ್ದು, 200ಕ್ಕೂ ಹೆಚ್ಚು ಎಂಎಸ್‌ಎಂಇ ಗಳು ಪಾಲ್ಗೊಂಡಿವೆ.

ಸಮುದ್ರ ವಲಯ ಲಕ್ಷಾಂತರ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದು ಮೋದಿ ಹೇಳಿದರು. ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲ ಆರ್.ಎನ್. ರವಿ, ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹಾಗೂ ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಉಪಸ್ಥಿತರಿದ್ದರು.

ಮೋದಿಗೆ ಶ್ಲಾಘನೆ: ಕೈ ಅಸಹನೆಗೆ ಶಶಿ ತರೂರ್ ಖಡಕ್ ತಿರುಗೇಟು

• **ಹೊಸದಿಲ್ಲಿ:** ಭಾರತೀಯರ ಜೀವದ ಬಗೆಗೆ ಇರುವ ಕಾಳಜಿ ನಮ್ಮನ್ನು ಒಗ್ಗೂಡಿಸಬೇಕೇ ವಿನಾ ವಿಭಜಿಸಬಾರದು ಎಂಬುದಾಗಿ ಹೇಳುವ ಮೂಲಕ ಕಾಂಗ್ರೆಸ್ ಮುಖಂಡ ಶಶಿ ತರೂರ್, ಪ್ರಧಾನಿ ನರೇಂದ್ರ ಮೋದಿಯವರನ್ನು ಟೀಕಿಸಿದ ಕಾಂಗ್ರೆಸ್ ನಾಯಕ ಪವನ್ ಖೇರಾಗೆ ಮಾರ್ಮಿಕವಾಗಿ ಬುದ್ಧಿ ಹೇಳಿದ್ದಾರೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತೀಯ ನಾವಿಕರ ರಕ್ಷಣೆಗೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿಯವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೆದುರೇ ಖಡಕ್ ನಿಲುವು ವ್ಯಕ್ತಪಡಿಸಿದ್ದನ್ನು ಶಶಿ ತರೂರ್ ಅವರು ಶ್ಲಾಘಿಸಿದ್ದರು. ಆದರೆ, ಮೋದಿ ವಿರುದ್ಧ ನಿರಂತರ ಟೀಕಿಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿಲುವಿಗೆ ವ್ಯತಿರಿಕ್ತ ನಿಲುವು ತಾಳಿದ ಶಶಿ ತರೂರ್ ವಿರುದ್ಧ ಕೆಂಡಕಾರಿದ್ದ ಕಾಂಗ್ರೆಸ್ ವಕ್ತಾರ ಪವನ್ ಖೇರಾ ಅವರು, 'ಪ್ರಧಾನಿ ಹೇಳದೇ ಇದ್ದ ಮಾತನ್ನೂ ಇವರು ಕೇಳಬಲ್ಲರು.' 'ಮಹಾಮಾನವರೊಂದಿಗೆ' ಭಕ್ತಿಗೆ ಅವರು ಎಷ್ಟು ಕಡಿಮೆ ಮಾತನಾಡುತ್ತಾರೋ, ಅಷ್ಟೇ ಹೆಚ್ಚು ಕೇಳಿಸುತ್ತದೆ ಎಂದು ವ್ಯಂಗ್ಯವಾಡಿ ಅಸಹನೆ ತೋರಿದ್ದರು.

ಆದರೆ, ಭಾರತೀಯ ನಾಗರಿಕ ನಾವಿಕರ ರಕ್ಷಣೆಗೆ ಸಂಬಂಧಿಸಿದ ಹೇಳಿಕೆಯನ್ನು ಪಕ್ಷಪಾತದ ರಾಜಕೀಯ ವಿವಾದವನ್ನಾಗಿ ಮಾಡಿರುವುದು ಆಶ್ಚರ್ಯಕರ ಎನ್ನುವ ಮೂಲಕ ರಾಷ್ಟ್ರೀಯ ಹಿತಾಸಕ್ತಿಯ ವಿಷಯದಲ್ಲಿ ರಾಜಕೀಯ ಮಾಡುವ ಕಾಂಗ್ರೆಸ್ ನಿಲುವಿಗೆ ಶಶಿ ತರೂರ್ ಮತ್ತೊಮ್ಮೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮೂವರು ಭಾರತೀಯರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ನನ್ನ ಹೇಳಿಕೆಗಳು ನಮ್ಮ ನಾಗರಿಕರ ಸುರಕ್ಷತೆ ಹಾಗೂ ನಾಗರಿಕ ನಾವಿಕರು ಎಂದಿಗೂ ಯುದ್ಧದ ಗುರಿಯಾಗಬಾರದು ಎಂಬ ತತ್ವಕ್ಕೆ ಸಂಬಂಧಿಸಿದ್ದಾಗಿತ್ತು ಎಂದು ಸರಣಿ ಪೋಸ್ಟ್‌ಗಳ ಮೂಲಕ ಸ್ಪಷ್ಟಪಡಿಸಿದರು.

ಕೆಲವರು ಈ ವಿಷಯವನ್ನು ಪರಿಹರಿಸುವ ಬದಲು ರಾಜಕೀಯ ಅಂಕ ಗಳಿಸಲು ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ, ಅದು ಅವರ ಬಗ್ಗೆ ಹೆಚ್ಚು ಹೇಳುತ್ತದೆ; ನನ್ನ ಬಗ್ಗೆ ಅಲ್ಲ ಎಂದು ಅವರು ಖೇರಾಗೆ ಕುಟುಕಿದ್ದಾರೆ.

ಧರ್ಮಸ್ಥಳ ಶ್ರೀಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷ ಸಭೆ

• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿನ ಅಡ್ಡ ಮತದಾನದ ಆರೋಪ ಕುರಿತಂತೆ ಅತಿ ಶೀಘ್ರದಲ್ಲೇ ಧರ್ಮಸ್ಥಳದ ಶ್ರೀಕ್ಷೇತ್ರದಲ್ಲಿ ನಮ್ಮ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರ್ಧರಿಸಿರುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.



ಭಾನುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ವಿಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಸಭೆ ಕರೆಯುವ ಸಂಬಂಧ ಮಾತನಾಡಿದ್ದೇನೆ. ನಾವೆಲ್ಲರೂ ದೇವರನ್ನು ನಂಬುವವರು. ಧರ್ಮಸ್ಥಳದಲ್ಲಿ ಸಭೆ ಕರೆದು ಪಕ್ಷಕ್ಕೆ ದ್ರೋಹ ಮಾಡಿದ ಶಾಸಕರ ಮತ್ತು ಸತ್ಯದ ಬಗ್ಗೆ ಗೊತ್ತಾಗಬೇಕಿದೆ. ಶ್ರೀ ಕ್ಷೇತ್ರದಲ್ಲಿ ತೀರ್ಮಾನ ಆಗಬೇಕೆಂದು ನಿರ್ಧಾರ ಮಾಡಿದ್ದೇನೆ ಎಂದು ವಿವರಿಸಿದರು. ಕಾರ್ಯಕರ್ತರಿಗೆ ನೋವಾಗುವುದು ಸಹಜ. ಅಡ್ಡ ಮತದಾನವನ್ನು ನನ್ನ ಮನಸಾಕ್ಷಿ ಒಪ್ಪುತ್ತಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವ ಟೀಕೆಗಳ ಬಗ್ಗೆ ನಾನು ಕೂಡ ಗಮನಿಸಿದ್ದೇನೆ. ಇದನ್ನೇ ನೆಪ ಮಾಡಿಕೊಂಡು ಪರೋಕ್ಷ ದಾಳಿ ಮಾಡುವ ಕೆಲಸ ಹಾಗೂ ಕುತಂತ್ರ ನಡೆಯುತ್ತಿದೆ ಎಂದು ಆಕ್ಷೇಪಿಸಿದರು. ಈ ಸಂಬಂಧ ಸತ್ಯಾಸತ್ಯತೆಯನ್ನು ನಾವು ಜನರ ಮುಂದೆ ಇಡಬೇಕಾಗಿದೆ. ಪಕ್ಷದ ಗೌರವ ಉಳಿಸಬೇಕಿದೆ. ಕಾರ್ಯಕರ್ತರಿಗೆ ನೆಮ್ಮದಿ ನೀಡಬೇಕಿದೆ ಎಂದು ಅವರು ನುಡಿದರು.

ಎಲ್ಲ ಶಾಸಕರ ಮೇಲೆ ಅನುಮಾನ ಮೂಡುತ್ತಿದೆ: ಮೊನ್ನೆ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯಿಂದಲೂ 4 ಅಡ್ಡ ಮತದಾನ ಆಗಿರುವ ಬಗ್ಗೆ ಚರ್ಚೆ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಪತ್ರಿಕೆಗಳಲ್ಲೂ ಬಂದಿದೆ. ಸಾಮಾಜಿಕ ಜಾಲತಾಣದಲ್ಲೂ ಅತಿ ಹೆಚ್ಚು ಚರ್ಚೆ ಆಗುತ್ತಿದೆ ಎಂದರು.

ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್

ಪುಟ ೧ ➡ ನನಗೆ 2020ರ ಮಾ.10 ರಂದು ಸೋನಿಯಾ ಗಾಂಧಿ ಪಕ್ಷದ ಅಧಿಕಾರ ನೀಡಿದ್ದರು. ಆಗ ಇಷ್ಟೊಂದು ದೊಡ್ಡದಾಗಿ ಕಾರ್ಯಕ್ರಮ ಮಾಡಲು ಆಗಿರಲಿಲ್ಲ. ಝೂಮ್ ಕರೆಯಲ್ಲಿಯೇ ನಾನು ಅಧಿಕಾರ ಸ್ವೀಕರಿಸಿದೆ. ನಿಮ್ಮ ವಿಶ್ವಾಸ, ಸಹಕಾರದಿಂದ ಸೇವೆ ಮಾಡಿದ್ದೇನೆ. ನಾನು ಮನುಷ್ಯ, ನನ್ನ ಕೈಯಲ್ಲಿ ಅನೇಕ ತಪ್ಪು ಆಗಿರಬಹುದು ಎಂದರು. ಪ್ರತಿ ಪಂಚಾಯತಿ, ಪ್ರತಿ ವಾರ್ಡ್‌ಗೆ ಹೆಚ್ಚುವರಿಯಾಗಿ 5 ಕಾರ್ಯಕರ್ತರನ್ನು ಗ್ಯಾರಂಟಿ ಸಮಿತಿಗೆ ನೇಮಕ ಮಾಡಲು ತೀರ್ಮಾನಿಸಿದ್ದೇವೆ. ಗ್ಯಾರಂಟಿ ಪಂಚ್ಛರಗಳಿಗೆ ಅವರನ್ನು ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಮಾಹಿತಿ ನೀಡಿದರು.

ಅಧಿಕಾರ ಸ್ವೀಕರಿಸಿ ಮಾತನಾಡಿದ ಹರಿಪ್ರಸಾದ್, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಂಕಲ್ಪ ಮಾಡಬೇಕು. ಎಲ್ಲಾ ಕೋಮುವಾದಿಗಳ ವಿರುದ್ಧದ ಹೋರಾಟಗಳಿಗೆ ಕೈಜೋಡಿಸಬೇಕು ಎಂದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಕಾಂಗ್ರೆಸ್ ಪಕ್ಷ ಶಿಸ್ತಿಗೆ ಹೆಸರಾಗಿದೆ. ಇಲ್ಲಿ ಯಾವುದೇ ಕಾರಣಕ್ಕೂ ವ್ಯಕ್ತಿ ಪೂಜೆಗೆ ಅವಕಾಶವಿಲ್ಲ. ಪಕ್ಷದ ಪೂಜೆಗೆ ಅವಕಾಶ. ಯಾರು ಎಷ್ಟೇ ದೊಡ್ಡವರಿದ್ದರೂ ಪಕ್ಷವೇ ದೊಡ್ಡದು. ನನ್ನ 58 ವರ್ಷಗಳ ರಾಜಕೀಯ ಜೀವನದಲ್ಲಿ ಎಲ್ಲವನ್ನೂ ನೋಡಿದ್ದೇನೆ.

ವ್ಯಕ್ತಿಗತವಾಗಿ ಕೂಗಿದರೆ ಶಿಸ್ತು ಕ್ರಮ: ಖರ್ಗೆ ಎಚ್ಚರಿಕೆ

ಡಿ.ಕೆ.ಶಿವಕುಮಾರ್ ಈ ಹಿಂದೆ ಆರೂವರೆ ವರ್ಷ ಪಕ್ಷದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದರು. ಈಗ ಮುಖ್ಯಮಂತ್ರಿಯಾದ ಮೇಲೆ ಎದ್ದುತ್ತಿದ್ದಂತೆ ಸಭಾಂಗಣದಲ್ಲಿ ಇದ್ದ ಕಾರ್ಯಕರ್ತರು, ಮುಖಂಡರ ಪೈಕಿ ಡಿಕೆ ಡಿಕೆ ಎಂದು ಘೋಷಣೆ ಕೂಗಿದರು. ಆಗ ಮುಖಂಗರಕ್ಕೊಳಗಾದ ಮಲ್ಲಿಕಾರ್ಜುನ ಖರ್ಗೆ ಅವರು ನಿಮ್ಮದೆಲ್ಲಾ ಮುಗಿಯಿತೇ? ಮುಂದೆ ಇರುವ ಒಂದು ಗುಂಪಿನಲ್ಲಿ ಮಾತ್ರ ಈ ರೀತಿ ಘೋಷಣೆ ಕೇಳಿಬರುತ್ತಿದೆ. ಇಲ್ಲಿ ನಿಂತು ಕೆಲವರು ಘೋಷಣೆ ಕೂಗಿದರೆ ದೇಶ ನಮ್ಮ ಕೈಗೆ ಬಂದಂತಾಗುತ್ತದೆಯೇ? ಯೂಸ್‌ಲೆಸ್ ಫೆಲೋಸ್ ಎಂದು ಖಾರವಾಗಿ ಹೇಳಿದರು. ಇದು ಒಬ್ಬ ವ್ಯಕ್ತಿಯ ಸಭೆಯಲ್ಲ, ಎಲ್ಲರೂ ಸೇರಿ ಪಕ್ಷ ಬಲಗೊಳಿಸಬೇಕು. ಒಬ್ಬರ ಹೆಸರನ್ನು ಮಾತ್ರ ಕೂಗಿದರೆ ಉಳಿದವರು ಕಸ ಗುಡಿಸಲು ಬಂದಿದ್ದಾರೆಯೇ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ರೀತಿಯ ಘೋಷಣೆ ಕೂಗುವವರ ವಿರುದ್ಧ ದೃಶ್ಯಾವಳಿಗಳನ್ನು ಆಧರಿಸಿ ಶಿಸ್ತು ಕ್ರಮ ಜರುಗಿಸುತ್ತೇನೆ ಎಂದು ಎಚ್ಚರಿಕೆ ನೀಡಿದರು. ಇದು ಅತ್ಯಂತ ಮಹತ್ವದ ಸಭೆ. ಶಿಸ್ತು ಪಾಲನೆ ಮಾಡಿ ಎಂದರು.

ಕಾಂಗ್ರೆಸ್ ಪಕ್ಷದಿಂದ ನಾಯಕರು ಬೆಳೆದಿದ್ದಾರೆಯೇ ಹೊರತು ಅವರಿಂದ ಕಾಂಗ್ರೆಸ್ ಪಕ್ಷವಲ್ಲ, ನಾವೆಲ್ಲರೂ ಸೇರಿ ಕಾಂಗ್ರೆಸ್ ಪಕ್ಷವನ್ನು ಕಟ್ಟಬೇಕು. ಯಾವುದೇ ಕಾರಣಕ್ಕೂ ಶಿಸ್ತನ್ನು ಮರೆಯಬಾರದು ಎಂದರು.

2028ಕ್ಕೆ ಮತ್ತೊಮ್ಮೆ ಅಧಿಕಾರಕ್ಕೆ: 2028ರಲ್ಲಿ ಮತ್ತೊಮ್ಮೆ ನಾವೇ ಅಧಿಕಾರಕ್ಕೆ ಬರುತ್ತೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಜನರನ್ನು ತಲುಪಿದೆ. ಇದರಿಂದ ಜನರಲ್ಲಿ ಖುಷಿಯಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ 5 ಉಪಚುನಾವಣೆಗಳು ನಡೆದಿವೆ. 5 ಉಪ ಚುನಾವಣೆಗಳಲ್ಲಿ ನಾವು ಗೆಲುವು ಸಾಧಿಸಿದರೆ, ಜನರಪ್ರೀತಿ, ವಿಶ್ವಾಸಗಳಿಸಿಕೊಂಡಿದ್ದೇವೆ ಎಂದು ಅರ್ಥ. 2028 ಹಾಗೂ 2029ರಲ್ಲೂ ಮತ್ತೊಮ್ಮೆ ನಮ್ಮ ಪಕ್ಷವನ್ನು ಅಧಿಕಾರಕ್ಕೆ ತನ್ನಿ. ಹರಿಪ್ರಸಾದ್ ಅವರ ನಾಯಕತ್ವದಲ್ಲಿ ಪಕ್ಷ ಸದೃಢವಾಗಲಿ, ಬಲವಾಗಿ ಬೆಳೆಯಲಿ ಎಂದು ಆಶಿಸುತ್ತಾ, ನನ್ನ ಸಹಕಾರವನ್ನು ಸಂಪೂರ್ಣವಾಗಿ ಅವರ ಜತೆ ಧಾರೆ ಎರೆಯುತ್ತೇನೆ ಎಂದು ಭರವಸೆ ನೀಡುತ್ತಿದ್ದೇನೆ ಎಂದರು.

ಹಂದಿ ಜ್ವರಕ್ಕೆ ಚಿವತ್ತಿ ಗ್ರಾಮದ ವ್ಯಕ್ತಿ ಬಲಿ

• **ಯಲ್ಲಾಪುರ:** ತಾಲೂಕಿನ ಚವತ್ತಿ ಗ್ರಾಮದಲ್ಲಿ ಇನ್‌ಫ್ಲುಯೆಂಜಾ–ಎ (ಹಂದಿ ಜ್ವರ) ಸೋಂಕಿಗೆ ತುತ್ತಾಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ. ತಾಲೂಕಿನ ಚವತ್ತಿ ಗ್ರಾಮದ ನಿವಾಸಿ ರಾಜು ಮಂಜಾ ಗೌಡ (41) ಅವರು ಇನ್‌ಫ್ಲುಯೆಂಜಾ–ಎ (Influenza A) ವೈರಲ್ ಜ್ವರಕ್ಕೆ ತುತ್ತಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ರಾಜು ಮಂಜಾ ಗೌಡ ಅವರಿಗೆ ಜೂನ್ 10ರಂದು ಜ್ವರ ಕಾಣಿಸಿಕೊಂಡ ಹಿನ್ನೆಲೆ ಉಮ್ಮಚಗಿಯ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯಲಾಗಿತ್ತು. ಬಳಿಕ ಜೂನ್ 12ರಂದು ಮತ್ತೆ ಜ್ವರ ಕಾಣಿಸಿಕೊಂಡ ಕಾರಣ ಮಂಚಿಕೇರಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಆದರೂ ಆರೋಗ್ಯದಲ್ಲಿ ಚೇತರಿಕೆ ಕಾಣದ ಹಿನ್ನೆಲೆಯಲ್ಲಿ ಜೂನ್ 16ರಂದು ಜ್ವರ ಹಾಗೂ ಸುಸ್ತಿನ ಲಕ್ಷಣಗಳು ಹೆಚ್ಚಿದ ಕಾರಣ ಶಿರಸಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಜೂನ್ 17ರಂದು ಮಂಗಳೂರಿನ ಕೆ.ಎಸ್.ಹೆಗಡೆ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರೀಕ್ಷೆಯಲ್ಲಿ ಇನ್‌ಫ್ಲುಯೆಂಜಾ–ಎ ಸೋಂಕು ದೃಢಪಟ್ಟಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಜೂನ್ 21ರಂದು ಮೃತಪಟ್ಟಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನೂರು ವರ್ಷದ ಇತಿಹಾಸವಿರುವ ಆರೆಸ್ಸೆಸ್‌ನ ದೇಶ ಭಕ್ತಿಗೆ ಪ್ರಿಯಾಂಕಾ ಖರ್ಗೆಯವರ ನೋಂದಣಿಯ ಅಗತ್ಯವಿಲ್ಲ – **ಜಗದೀಶ ಶೆಟ್ಟರ್**
– ಆದರೆ ಅವರಿಗೆ ಅವರ ಹೆಸರು ಶೃಂಗಾರ ಸಂಘ ವಿರೋಧಿ ಪಟ್ಟಿಗೆ ನೋಂದಣಿಯಾಗಬೇಕಾಗಿದೆ!

'ಸಂಘ 100–ಜಾಗತಿಕ ದೃಷ್ಟಿಕೋನ': ಪ್ರಬುದ್ಧರೊಂದಿಗೆ ಸಂವಾದದಲ್ಲಿ ಮುಕುಂದ್ ಸಿ.ಆರ್.

ಸವಾಲುಗಳಿಗೆ ಹಿಂದು ಮೌಲ್ಯಗಳೇ ಪರಿಹಾರ

• **ಮಂಗಳೂರು:** ಜಗತ್ತು ಇಂದು ಬಹು ಧ್ರುವೀಯ ವ್ಯವಸ್ಥೆಯತ್ತ ಸಾಗುತ್ತಿದ್ದು, ಡಿಜಿಟಲೈಸೇಶನ್, ಡಿ-ಗ್ಲೋಬಲೈಸೇಶನ್, ಡಿ-ಕಾರ್ಬನೈಸೇಶನ್ ಹಾಗೂ ಡೆಮೊಗ್ರಫಿಕ್ ಚೇಂಜ್(ಜನಸಂಖ್ಯಾ ಅಸಮತೋಲನ) ನಂತಹ ಮಹತ್ವದ ಸವಾಲುಗಳನ್ನು ಎದುರಿಸುತ್ತಿದೆ. ಇಂತಹ ಜಾಗತಿಕ ಸವಾಲುಗಳಿಗೆ ಹಿಂದೂ ಧರ್ಮ, ಸಂಸ್ಕೃತಿ ಮತ್ತು ಮೌಲ್ಯಗಳಲ್ಲಿ ಅಡಗಿರುವ ಜೀವನದೃಷ್ಟಿಯೇ ಸಮತೋಲನದ ಪರಿಹಾರವನ್ನು ಒದಗಿಸಬಲ್ಲದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹ ಮುಕುಂದ ಸಿ.ಆರ್. ಅವರು ಒತ್ತಿ ಹೇಳಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಮಂಗಳೂರಿನ ಸಂಘನಿಕೇತನದಲ್ಲಿ ಭಾನುವಾರ ಆಯೋಜಿಸಿದ್ದ 'ಸಂಘದ ಶತಮಾನೋತ್ಸವ ಮತ್ತು ಜಾಗತಿಕ ದೃಷ್ಟಿಕೋನ' ವಿಷಯದ ಕುರಿತು ಪ್ರಬುದ್ಧ ನಾಗರಿಕರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘವೆಂಬುದು ಜೀವನ ವಿಧಾನ: ಸಂಘವು ಕೇವಲ ಒಂದು ಸಂಘಟನೆಯಲ್ಲ; ಅದು ಸಿದ್ಧಾಂತ, ಸಂಘಟನೆ, ಆಂದೋಲನ ಹಾಗೂ ಜೀವನ ವಿಧಾನವೂ ಆಗಿದೆ. ಕಳೆದ ನೂರು ವರ್ಷಗಳಲ್ಲಿ ಸಂಘವು ವ್ಯಕ್ತಿ ನಿರ್ಮಾಣದ ಮೂಲಕ ಸಮಾಜದಲ್ಲಿ ಮೌಲ್ಯಾಧಾರಿತ ಕಾರ್ಯಶಕ್ತಿಯನ್ನು ರೂಪಿಸಿದೆ. ಈ ಕಾರ್ಯಶಕ್ತಿಯೇ ಸಮಾಜ ಮತ್ತು ವ್ಯವಸ್ಥಾ ಪರಿವರ್ತನೆಗೆ ಕಾರಣವಾಗಿದೆ ಎಂದರು.

ಕಾಶ್ಮೀರದ 370ನೇ ವಿಧಿ ರದ್ದು, ಅಯೋಧ್ಯೆಯ ಶ್ರೀರಾಮಮಂದಿರ ನಿರ್ಮಾಣ, ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಆತ್ಮನಿರ್ಭರ ಭಾರತದಂತಹ ಉಪಕ್ರಮಗಳನ್ನು ವ್ಯವಸ್ಥಾ ಪರಿವರ್ತನೆಯ ಉದಾಹರಣೆಗಳಾಗಿ ಉಲ್ಲೇಖಿಸಿದರು. ಆದರೆ ಇವುಗಳಿಗಿಂತಲೂ ಮುಖ್ಯವಾದುದು ಸಾಮಾಜಿಕ ಪರಿವರ್ತನೆ ಎಂದು ಪ್ರತಿಪಾದಿಸಿದರು.

ಮನಃಸ್ಥಿತಿ ಬದಲಾಗಬೇಕು: ಸಾಮರಸ್ಯ, ಸ್ವದೇಶಿ, ಪರಿಸರ ಸಂರಕ್ಷಣೆ, ಕುಟುಂಬ ಪ್ರಬೋಧನ ಹಾಗೂ ನಾಗರಿಕ ಶಿಷ್ಟಾಚಾರ-ಕರ್ತವ್ಯಗಳಂತಹ ವಿಷಯಗಳಲ್ಲಿ ವ್ಯಕ್ತಿ ಮತ್ತು ಕುಟುಂಬದ ಮಟ್ಟದಿಂದಲೇ ಬದಲಾವಣೆ ಆಗಬೇಕಿದೆ. ಸಮಾಜದ ಮನಸ್ಥಿತಿಯಲ್ಲಿ ಬದಲಾವಣೆ ಇಲ್ಲದೆ ಯಾವುದೇ ವ್ಯವಸ್ಥಾ ಬದಲಾವಣೆ ಶಾಶ್ವತವಾಗುವುದಿಲ್ಲ ಎಂದು ಅವರು ಹೇಳಿದರು.

ಜಾಗತಿಕ ಬೆಳವಣಿಗೆಗಳ ಕುರಿತು ಮಾತನಾಡಿದ ಮುಕುಂದ ಅವರು, ವಿಶ್ವ ಈಗ ಅಮೆರಿಕ-ರಷ್ಯಾ ಕೇಂದ್ರಿತ ವ್ಯವಸ್ಥೆಯಿಂದ ಹೊರಬಂದು ಬಹುಧ್ರುವೀಯ ವ್ಯವಸ್ಥೆಯತ್ತ ಹೊರಳಿಕೊಳ್ಳುತ್ತಿದೆ. ಇದೇ ವೇಳೆ ತಂತ್ರಜ್ಞಾನ, ಪೂರೈಕೆ ಸರಪಳಿ, ಇಂಧನ, ಪರಿಸರ ಹಾಗೂ ಜನಸಂಖ್ಯಾ ರಚನೆಯಲ್ಲಿ ಸಂಭವಿಸುತ್ತಿರುವ ವೇಗದ ಬದಲಾವಣೆಗಳು ಹೊಸ ಸವಾಲುಗಳನ್ನು ಸೃಷ್ಟಿಸುತ್ತಿವೆ ಎಂದು ಅವರು ವಿಶ್ಲೇಷಿಸಿದರು.

ವಿಶೇಷವಾಗಿ ಜನಸಂಖ್ಯಾ ಪರಿವರ್ತನೆ ಮತ್ತು ಜನಸಂಖ್ಯಾ ಅಸಮತೋಲನದ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಭಾರತದಲ್ಲಿಯೂ ಈ ವಿಚಾರದ ಬಗ್ಗೆ ಗಂಭೀರ ಚಿಂತನೆ ಅಗತ್ಯವಿದೆ. ಕುಟುಂಬ ವ್ಯವಸ್ಥೆ ಮತ್ತು ಸಮಾಜದ ಸಮತೋಲನ ಕಾಪಾಡಲು ಆರೋಗ್ಯಕರ ಜನಸಂಖ್ಯಾ ರಚನೆ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಫಲವತ್ತತೆ ಕುಸಿತ ಗಂಭೀರ ವಿಚಾರ: ಒಂದು ಸಮಾಜ ಸದೃಢವಾಗಿ ಉಳಿದು ಮುಂದುವರಿಯಬೇಕಾದರೆ ಅಂತಹ ಸಮಾಜದ ಫಲವತ್ತತೆ 2.5ರಷ್ಟಿರಬೇಕು. ಆದರೆ ಜಗತ್ತಿನಾದ್ಯಂತ ಇಂದು ಫಲವತ್ತತೆಯ ಕುಸಿತ ಕಂಡುಬರುತ್ತಿದ್ದು, ಭಾರತದಲ್ಲಿದು 1.9 ಆಗಿದ್ದು, ಹಿಂದುಗಳಲ್ಲಿದು 1.7ಕ್ಕೆ ಕುಸಿದಿದೆ. ಸಮೃದ್ಧ, ಸದೃಢ ಸಮಾಜ ರೂಪುಗೊಳ್ಳಬೇಕಾದರೆ ಈ ಫಲವತ್ತತೆಯನ್ನು ಹೆಚ್ಚಿಸಬೇಕಿದೆ. ಕುಟುಂಬಕ್ಕೆ ಒಂದು ಮಗು ಇದ್ದಲ್ಲಿ ಹಂಚಿ ತಿನ್ನಬೇಕೆಂಬ ಕಲ್ಪನೆಯೇ ಇಲ್ಲವಾಗಿ ವ್ಯಕ್ತಿ-ಸಮಾಜದ ವರ್ತನೆಯಲ್ಲೇ ವ್ಯತ್ಯಯವಾಗುವ ಅಪಾಯವಿದೆ. ಅದೇ 3 ಮಕ್ಕಳಿದ್ದಲ್ಲಿ ಕೌಟುಂಬಿಕ ಸುಭದ್ರತೆ, ಸ್ವಸ್ಥತೆ ಹೆಚ್ಚಿರುತ್ತದೆ. ಈ ಬಗ್ಗೆ ಸಮಾಜ ಗಂಭೀರವಾಗಿ ಚಿಂತಿಸುವ ಅಗತ್ಯ ಇರುವುದನ್ನು ತಜ್ಞರು ಒತ್ತಿ ಹೇಳುತ್ತಿದ್ದಾರೆ.

ಹಿಂದೂ ಜೀವನದೃಷ್ಟಿಯು 'ವಸುಧೈವ ಕುಟುಂಬಕಂ', 'ಕೃಣ್ವಂತೋ ವಿಶ್ವಮಾರ್ಯಂ' ಮುಂತಾದ ತತ್ವಗಳ ಮೂಲಕ ವಿಶ್ವಮಾನವೀಯ ಸಂದೇಶ ನೀಡಿದೆ. ಪ್ರಕೃತಿಯನ್ನು ಶೋಷಿಸುವುದಲ್ಲ, ಸಹಜೀವನ ನಡೆಸುವುದು ಭಾರತೀಯ ಸಂಸ್ಕೃತಿಯ ಮೂಲ ತತ್ವವಾಗಿದೆ. ಇಂದು ಜಗತ್ತು 'ಸುಸ್ಥಿರ ಅಭಿವೃದ್ಧಿ' ಎಂದು ಕರೆಯುತ್ತಿರುವ ಚಿಂತನೆಗಳನ್ನು ಭಾರತೀಯ ಋಷಿಮುನಿಗಳು ಸಾವಿರಾರು ವರ್ಷಗಳ ಹಿಂದೆ ಸಹಜವಾಗಿಯೇ ಪ್ರತಿಪಾದಿಸಿದ್ದರು ಎಂದು ನೆನಪಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಸಂಘ ಚಾಲಕ್ ಡಾ.ಪಿ. ವಾಮನ ಶೆಣೈ, ಮಂಗಳೂರು ಮಹಾನಗರ ಸಂಘ ಚಾಲಕ್ ಡಾ.ಸತೀಶ್ ರಾವ್ ಇದ್ದರು.

ಸಂಘದ ವಿಚಾರಕ್ಕೆ ಜಗದ ಮನ್ನಣೆ

ಇತ್ತೀಚಿನ ವರ್ಷಗಳಲ್ಲಿ ಜಗತ್ತಿನ ವಿವಿಧ ದೇಶಗಳ ಚಿಂತಕರು ಮತ್ತು ನೀತಿ ನಿರೂಪಕರು ಸಂಘದ ಕಾರ್ಯ ಹಾಗೂ ಹಿಂದೂ ಮೌಲ್ಯಗಳ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ. ವಿವಿಧ ದೇಶಗಳಿಂದ ಬಂದ ಪ್ರತಿನಿಧಿಗಳು ಸಂಘದ ಕಾರ್ಯಪದ್ಧತಿಯನ್ನು ಮೆಚ್ಚಿಕೊಂಡಿದ್ದು, ತಮ್ಮ ದೇಶಗಳಲ್ಲಿಯೂ ಇಂತಹ ಮೌಲ್ಯಾಧಾರಿತ ಸಾಮಾಜಿಕ ಸಂಘಟನೆಗಳ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದ ಅವರು, ಅರಬ್ ಮತ್ತು ಯುರೋಪಿನ ಗಣ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಉಲ್ಲೇಖಿಸಿದರು.

ದಿನ ಭವಿಷ್ಯ

ಮೇಷ
ನಿಮ್ಮ ಕೆರಿಯರ್‌ಗೆ ಆದ್ಯತೆ ಕೊಡಿ. ಹೊಣೆ ವಹಿಸಬೇಕಾದ ಸಮಯ ಬಂದಿದೆ. ಕಾಲಹರಣ ಮಾಡಬೇಡಿ. ಹಣದ ಕೊರತೆ ಕಾಡಬಹುದು.

ವೃಷಭ
ನಿಮ್ಮ ಬದುಕಿನಲ್ಲಿ ಇತರರ ಹಸ್ತಕ್ಷೇಪ ಅಸಹನೆ ಮೂಡಿಸಲಿದೆ. ಆರ್ಥಿಕ ವ್ಯವಹಾರವೊಂದು ನೀವು ನಿರೀಕ್ಷಿಸಿದಂತೆ ಸಾಗದು. ಧನ ಹಾನಿ ಉಂಟಾದೀತು.

ಮಿಥುನ
ಗುರಿ ಸಾಧಿಸುವ ಛಲ ನಿಮ್ಮದು. ಕೋಪದಿಂದ ಎಗರಾಡುವ ಪ್ರಸಂಗ ಬಂದೀತು. ಇತರರನ್ನು ಅರಿತು ವ್ಯವಹರಿಸಲು ಪ್ರಯತ್ನಿಸಿ.

ಕಟಕ
ಆವೇಶದ ಹೆಜ್ಜೆ ಇಡಬೇಡಿ. ಯೋಚಿಸಿ ಕಾರ್ಯವೆಸಗಿ. ಕಾಣದ ಕೈಗಳು ನಿಮ್ಮ ವಿರುದ್ಧ ಕಾರ್ಯಾಚರಿಸುತ್ತವೆ. ಕೌಟುಂಬಿಕ ಸೌಹಾರ್ದ.

ಸಿಂಹ
ನಿಮ್ಮ ಬದುಕು ಸುದಾರಿಯಲ್ಲಿ ಸಾಗುತ್ತಿದೆ ಎಂಬ ಭಾವ. ವಿಘ್ನಗಳು ನಿವಾರಣೆ. ದಂಪತಿಗಳಿಗೆ ಶುಭ ಬೆಳವಣಿಗೆ. ಆರ್ಥಿಕ ಕೊರತೆ ನೀಗಲಿದೆ.

ಕನ್ಯಾ
ಉತ್ಸಾಹದ ದಿನ. ಆದರೆ ಫಲ ನೀಡದ ಕಾರ್ಯಕ್ಕೆ ಎಳಸಬೇಡಿ. ಅಪರಿಚಿತರ ಜತೆ ಎಚ್ಚರದ ನಡೆಯಿರಲಿ. ಬೇಸರ ಬೀಳುವ ಸಂಭವವಿದೆ.

ತುಲಾ
ವೃತ್ತಿಯಲ್ಲೂ ಖಾಸಗಿಯಾಗಿಯೂ ಉನ್ನತಿ. ದೊಡ್ಡ ಕಿರಿಕಿರಿಯೊಂದು ಅಂತ್ಯ. ಮನಸ್ಸಿಗೆ ನಿರಾಳತೆ. ಆರೋಗ್ಯ ಸುಸ್ಥಿರ.

ವೃಶ್ಚಿಕ
ಕುಟುಂಬದ ವ್ಯವಹಾರಕ್ಕೆ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಒತ್ತಡ ಹೆಚ್ಚಲಿದೆ. ಹೊಸ ವ್ಯವಹಾರ ಆರಂಭಿಸುವವರಿಗೆ ತೃಪ್ತಿಕರ ಬೆಳವಣಿಗೆ.

ಧನು
ನಿಮ್ಮ ನಿರ್ವಹಣೆ ಇತರರ ಗಮನಕ್ಕೆ ಬರಲಿದೆ. ಕೌಟುಂಬಿಕ ಸೌಹಾರ್ದ. ಮಕ್ಕಳ ಸಾಧನೆಯಿಂದ ತೃಪ್ತಿ. ಆರ್ಥಿಕ ಅಡ್ಡಿ ನಿವಾರಣೆ.

ಮಕರ
ಇತರರ ಜತೆ ಹೆಜ್ಜೆಯಿಟ್ಟು ಸಾಗಿ. ನಿಮ್ಮದೇ ವಿಭಿನ್ನ ದಾರಿ ತುಳಿಯದಿರಿ. ಪರಸ್ಪರ ಸಹಕಾರ ಅಗತ್ಯ. ಕೆಲವು ಅಡ್ಡಿಗಳು ಗೋಚರಿಸಲಿವೆ.

ಕುಂಭ
ಮನಸ್ಸು ಕೆಡಿಸುವ ಬೆಳವಣಿಗೆ. ಸಂಗಾತಿ ಜತೆ ಅಸಮಾಧಾನ. ವೃತ್ತಿಯಲ್ಲಿ ಎದುರಾಳಿಗಳನ್ನು ಎದುರಿಸುವಿರಿ. ಕೆಲವರ ಅಸಹಕಾರ ಉಂಟಾದೀತು.

ಮೀನ
ಅವಕಾಶಗಳು ನಿಮ್ಮ ಮುಂದಿವೆ. ಅವನ್ನು ಸದುಪಯೋಗ ಮಾಡುವ ಕಾರ್ಯ ನಿಮ್ಮದು. ಕಳೆದುದಕ್ಕೆ ಕೊರಗುತ್ತಾ ಉತ್ಸಾಹ ಕಳಕೊಳ್ಳದಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ: 0,7,2,6

ಬೇನಾಮಿ ಆಸ್ತಿ ಸಾಬೀತಾದ್ರೆ ದಾನ

ಪುಟ ೧ ➡ ರೈತರಿಗೆ ಅನುಕೂಲ ಮಾಡಲು ಹಾಲಿನ ಉತ್ಪನ್ನಗಳ ಉತ್ಪಾದನೆಗೆ ಅದನ್ನು ಬಳಸಲು ಇಟ್ಟಿದ್ದೇವೆ ಎಂದು ತಿಳಿಸಿದರು. ರೈತರು ಬೇಡ ಅಂದಿದ್ದಕ್ಕೆ ಕುಮಾರಸ್ವಾಮಿ ಈ ಯೋಜನೆ ಕೈಬಿಟ್ಟಿದ್ದರು. ಕುಮಾರಸ್ವಾಮಿ ಯಾವತ್ತೂ ರೈತರ ವಿರುದ್ಧ ತೀರ್ಮಾನ ಮಾಡಿಲ್ಲ. ನಾವು ಎಲ್ಲಾ ರೀತಿಯ ಹೋರಾಟಕ್ಕೆ ಸಿದ್ಧರಿದ್ದೇವೆ. ನಾವು ಹೋರಾಟದಿಂದ ಹೆದರಿ ಓಡಿಹೋಗುವುದಿಲ್ಲ, ಯಾರ ಬೆದರಿಕೆಗೂ ದೇವೇಗೌಡರ ಕುಟುಂಬ ಹೆದರಲ್ಲ ಎಂದರು.

ರೆಡ್ ಝೋನ್ ಹಾಕಿದ್ದಾರೆ ಎಂದು ಆರೋಪ ಮಾಡುತ್ತೀರಲ್ಲ, ನೀವು ಯೋಜನೆ ಕೈಬಿಡಿ, ಮುಂದೆ ನಾವೇ ಬಂದು ರೆಡ್ ಝೋನ್ ತೆಗೆಯುತ್ತೇವೆ. ಸರ್ಕಾರ ರಾತ್ರೋರಾತ್ರಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಇದರ ವಿರುದ್ಧ ಜೆಡಿಎಸ್ ಹೋರಾಟ ನಡೆಸುತ್ತಿದೆ ಎಂದರು. ರೈತರು 450 ದಿನಗಳಿಂದ ನಿರಂತರ ಹೋರಾಟ ಮಾಡುತ್ತಿದ್ದಾರೆ. ಸರ್ಕಾರದ ಯಾವುದೇ ಪ್ರತಿನಿಧಿಗಳು ರೈತರನ್ನು ಭೇಟಿ ಮಾಡಿಲ್ಲ, ರಾಜ್ಯ ಸರ್ಕಾರಕ್ಕೆ ಕಿವಿ ಕೇಳ್ತಿಲ್ಲ, ಕಣ್ಣು ಕಾಣ್ತಿಲ್ಲ, ಯೋಜನೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಮಾಡುತ್ತಿದ್ದಾರೆ. ಇದರಲ್ಲಿ ಸಾರ್ವಜನಿಕರ ಹಿತಾಸಕ್ತಿ ಇಲ್ಲ, ರೈತರ ಅನುಮತಿ ಪಡೆಯದೆ ಯೋಜನೆ ಮಾಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ರೈತರ ಭೂಮಿ ಕಸಿಯಲು ಸರ್ಕಾರ ದಲ್ಲಾಳಿಗಳನ್ನು ಬಿಟ್ಟಿದೆ. ಅವರು ರೈತರನ್ನು ಯಾಮಾರಿಸುವ ಕೆಲಸ ಮಾಡುತ್ತಿದ್ದಾರೆ. ರೈತರ ಒಗ್ಗಟ್ಟು ಒಡೆಯುವ ಕೆಲಸ ನಡೆಯುತ್ತಿದೆ. ಇದಕ್ಕೆ ರೈತರು ಅವಕಾಶ ಮಾಡಿಕೊಡಬಾರದು ಎಂದರು. ಪಾದಯಾತ್ರೆಯಲ್ಲಿ ಸಾವಿರಾರು ರೈತರು, ಜೆಡಿಎಸ್ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಎಂಎಲ್‌ಸಿ ಜವರಾಯಿಗೌಡ ಹಾಗೂ ಮಾಜಿ ಎಂಎಲ್‌ಸಿ ಶ್ರೀಕಂಠೇಗೌಡ, ಮಾಜಿ ಶಾಸಕ ಎ.ಮಂಜುನಾಥ್ ಹಾಗೂ ಇತರರು ಪಾಲ್ಗೊಂಡಿದ್ದರು.

ಪಾದಯಾತ್ರೆ ವೇಳೆ ವಾಗ್ವಾದ

ಪುಟ ೧ ➡ ಪಾದಯಾತ್ರೆಯನ್ನು ಅಂಚೆಪುರ ಗ್ರಾಮದಲ್ಲಿ ಆರಂಭಿಸಿ ಸಿವಿಲ್ ನಂತರ ಗ್ರಾಮದ ಕಾಲೋನಿ ಕಡೆಗೆ ಪಾದಯಾತ್ರೆ ಹೊರಟರು. ಅಷ್ಟೊತ್ತಿಗಾಗಲೇ ಗ್ರಾಮದ ವೃತ್ತದಲ್ಲಿ ಅಳವಡಿಸಿದ್ದ ಚೇಂಜ್ ಶಿಪ್ ಪರವಾದ ಫ್ಲೆಕ್ಸ್‌ಗಳನ್ನು ಹೋರಾಟಗಾರರು ಹರಿದಿರುವ ಸುದ್ದಿ ಹಬ್ಬಿತ್ತು.

ನಟ ಪ್ರಕಾಶ್ ರಾಜ್‌ಗೆ ಕಾನೂನು ಸಂಕಷ್ಟ

ಪುಟ ೧ ➡ ಈ ವೇಳೆ ವಕೀಲ ದಿಲೀಪ್ ಕುಮಾರ್ ಎಂಬುವರು ನಟನ ವಿರುದ್ಧ ಗಂಭೀರ ಆರೋಪ ಮಾಡಿದ್ದರು. ಪ್ರಕಾಶ್‌ರಾಜ್ ಅವರು ದೇಶದ ವಿವಿಧ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಪಾಂಡಿಚೇರಿಯಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದಾರೆ. ಇದು ಜನಪ್ರತಿನಿಧಿ ಕಾಯಿದೆ ಹಾಗೂ ದೇಶದ ಚುನಾವಣಾ ನಿಯಮಾವಳಿಗಳ ಅನ್ವಯ ಗಂಭೀರ ಅಪರಾಧ ಎಂದು ಆರೋಪಿಸಿದ್ದರು. ಈ ಅಕ್ರಮದ ಕುರಿತು ವಕೀಲ ದಿಲೀಪ್ ಕುಮಾರ್ ಅವರು 2019ರಲ್ಲಿ ಮೊದಲ ಬಾರಿಗೆ ಬೆಂಗಳೂರಿನ ಹಲಸೂರು ಗೇಟ್ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಆದರೆ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳದಿದ್ದಾಗ, ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೂ ಅಧಿಕೃತವಾಗಿ ದೂರು ಸಲ್ಲಿಸಲಾಯಿತು. ಯಾವುದೇ ಇಲಾಖೆಯಿಂದ ನಿರೀಕ್ಷಿತ ಮಟ್ಟದ ಕಾನೂನು ಕ್ರಮ ಜರುಗದ ಹಿನ್ನೆಲೆಯಲ್ಲಿ ದೂರುದಾರರು ಅಂತಿಮವಾಗಿ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮೊರೆ ಹೋಗಿ ಖಾಸಗಿ ದೂರು ದಾಖಲಿಸಿದ್ದರು. ಅದಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ 48ನೇ ಎಸಿಜೆಎಂ ಕೋರ್ಟ್‌ನಿಂದ ಅರೆಸ್ಟ್ ವಾರಂಟ್ ಜಾರಿ ಮಾಡಲಾಗಿದೆ. ಒಬ್ಬ ವ್ಯಕ್ತಿಗೆ ಒಂದೇ ಗುರುತಿನ ಚೀಟಿ ಇರಬೇಕು. ಪ್ರಕಾಶ್ ರಾಜ್ ಅವರು ಏಕಕಾಲಕ್ಕೆ 4 ಕಡೆ ಗುರುತಿನ ಚೀಟಿ ಹೊಂದಿದ್ದಾರೆ. ಹಾಗಾಗಿ ದೂರು ನೀಡಿದ್ದೆ ಎಂದು ದಿಲೀಪ್ ಕುಮಾರ್ ಹೇಳಿದ್ದಾರೆ.

ದೇಶದಾದ್ಯಂತ ನೀಟ್ ಮರುಪರೀಕ್ಷೆ ಸುಗಮ

ಪುಟ ೧ ➡ **ವಿಶೇಷ ಅಭ್ಯರ್ಥಿಗಳಿಗೆ ನೆರವು:** 10 ಸಾವಿರಕ್ಕೂ ಹೆಚ್ಚು ವಿಶಿಷ್ಟಚೇತನ ಅಭ್ಯರ್ಥಿಗಳಿಗೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿತ್ತು. ರಸ್ತೆ ಅಪಘಾತಕ್ಕೊಳಗಾದ ಹಾಗೂ ಕೀಮೋಥೆರಪಿ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೂ ಪ್ರತ್ಯೇಕ ಸೌಲಭ್ಯಗಳನ್ನು ಒದಗಿಸಲಾಗಿತ್ತು.

ನೀಟ್ ಸುಸೂತ್ರ: ನಕಲಿ ಪ್ರವೇಶ ಪತ್ರ ಹಾಗೂ ಮೊಬೈಲ್ ತೆಗೆದುಕೊಂಡು ಬರಲು ಯತ್ನಿಸಿದ ಕೆಲ ಪ್ರಕರಣಗಳು ಪತ್ತೆಯಾಗಿದ್ದರೂ, ಯಾವುದೇ ಅಕ್ರಮ ನಡೆಯದಂತೆ ತಡೆಯಲಾಗಿದೆ. ನೀಟ್ ಮರುಪರೀಕ್ಷೆ ಸುಸೂತ್ರವಾಗಿ ನಡೆದಿದೆ ಎಂದು ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ತಿಳಿಸಿದ್ದಾರೆ. ಕೆಲವೆಡೆ ವಿದ್ಯಾರ್ಥಿಗಳು ಮಳೆ, ಸಂಚಾರ ದಟ್ಟಣೆ ಹಾಗೂ ಅಪಘಾತಗಳಿಂದ ಪರೀಕ್ಷಾ ಕೇಂದ್ರಗಳಿಗೆ ತಡವಾಗಿ ತಲುಪಿದ ಕಾರಣ ಪ್ರವೇಶ ನಿರಾಕರಣೆಯಾದ ಘಟನೆಗಳೂ ವರದಿಯಾಗಿವೆ.

ದಿಲ್ಲಿ ಏರ್‌ಪೋರ್ಟ್‌ನಲ್ಲಿ 45 ನಿಮಿಷ ಕಾದ ಮೋದಿ

ಪುಟ ೧ ➡ ಅವರು ತಮ್ಮ 2 ದಿನಗಳ ಒಡಿಶಾ ಮತ್ತು ಪಶ್ಚಿಮ ಬಂಗಾಳ ಭೇಟಿ ಮುಗಿಸಿ ಹಿಂತಿರುಗಿದ್ದರು. ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮರಳುತ್ತಿದ್ದರು. ದಿಲ್ಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಳಿದು ಲೋಕಕಲ್ಯಾಣ ಮಾರ್ಗದಲ್ಲಿರುವ ತಮ್ಮ ನಿವಾಸಕ್ಕೆ ತೆರಳುವ ವೇಳೆ ನೀಟ್ ಪರೀಕ್ಷೆ 2 ಗಂಟೆಯಿಂದ ಆರಂಭಗೊಳ್ಳಲಿದ್ದ ಕಾರಣ ಅವರು ವಿದ್ಯಾರ್ಥಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದಕ್ಕಾಗಿ ಏರ್‌ಪೋರ್ಟ್‌ನಲ್ಲೇ 45 ನಿಮಿಷ ಉಳಿದು ಬಳಿಕ ನಿವಾಸಕ್ಕೆ ತೆರಳಿದರು.

ಮೈಸೂರಲ್ಲಿ ಶಂಕಿತ ಬಾಂಗ್ಲಾ ವಲಸಿಗರ ಪತ್ತೆ

• **ಮೈಸೂರು:** ರೈಲು ನಿಲ್ದಾಣದಲ್ಲಿ 40ಕ್ಕೂ ಹೆಚ್ಚು ಶಂಕಿತ ಬಾಂಗ್ಲಾ ವಲಸಿಗರು ಪತ್ತೆಯಾಗಿದ್ದು, ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಇವರನ್ನು ಗುರುತಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೋಲ್ಕತ್ತಾದಿಂದ ವಾರಕ್ಕೊಮ್ಮೆ ಸಂಚರಿಸುವ ಹೌರಾ ಎಕ್ಸ್‌ಪ್ರೆಸ್ ರೈಲಿನ ಮೂಲಕ ಇವರು ಮೈಸೂರಿಗೆ ಬಂದಿರುವುದಾಗಿ ತಿಳಿದುಬಂದಿದೆ. ರೈಲು ನಿಲ್ದಾಣದಲ್ಲಿ ಕಾರ್ಯಕರ್ತರು ಅವರ ಗುರುತಿನ ಚೀಟಿಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಪರಿಶೀಲನೆ ವೇಳೆ ಹಲವರ ಬಳಿ ಇದ್ದ ಗುರುತಿನ ಚೀಟಿಗಳ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಕೆಲವು ದಾಖಲೆಗಳು ನಕಲಿಯಾಗಿರುವ ಶಂಕೆ ಮೂಡಿದೆ ಎಂದು ಹೇಳಲಾಗಿದೆ. ಹೆಚ್ಚಿನವರ ಬಳಿ ಪಶ್ಚಿಮ ಬಂಗಾಳದ ಗುರುತಿನ ಚೀಟಿಗಳು ಪತ್ತೆಯಾಗಿವೆ. ವಿಚಾರಣೆ ವೇಳೆ ಪ್ರತಿಯೊಬ್ಬರೂ ಬೇರೆ ಬೇರೆ ಕಾರಣಗಳನ್ನು ನೀಡಿರುವುದು ಅನುಮಾನಕ್ಕೆ ಕಾರಣವಾಗಿದೆ. ಕೆಲವರು ಕೆಲಸಕ್ಕಾಗಿ ಬಂದಿದ್ದೇವೆ ಎಂದರೆ, ಇನ್ನೂ ಕೆಲವರು ಬೇರೆ ಕಾರಣಗಳನ್ನು ತಿಳಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಮೈಸೂರಿನಿಂದ ಕೇರಳ ಹಾಗೂ ಮಡಿಕೇರಿ ಭಾಗಗಳಿಗೆ ತೆರಳುವ ಉದ್ದೇಶದಿಂದ ಇವರು ಬಂದಿದ್ದರು ಎಂದು ತಿಳಿದುಬಂದಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ರೈಲ್ವೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಎಲ್ಲರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳಿಕ ಸ್ಥಳೀಯ ಪೊಲೀಸರು ಕೂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಲಸಿಗರ ದಾಖಲೆಗಳು, ಗುರುತು ಮತ್ತು ಪ್ರಯಾಣದ ಉದ್ದೇಶದ ಬಗ್ಗೆ ಅಧಿಕಾರಿಗಳು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ. ತನಿಖೆಯ ಬಳಿಕ ಸತ್ಯಾಸತ್ಯತೆ ಹೊರಬೀಳಲಿದೆ.

ವಿಶ್ವ ಶಾಂತಿಗೆ ಯೋಗ

ಪುಟ ೧ ➡ ಯೋಗವು ಜನರಿಗೆ ಇದನ್ನೇ ಕಲಿಸುತ್ತದೆ. ಯೋಗದ ಮೂಲ ಆಗ್ರಹವಿಕೆ ಸಮತೋಲನ ಮತ್ತು ಇದು ನಮ್ಮೆಲ್ಲರ ಬದುಕಿಗೆ ಅತ್ಯವಶ್ಯ ಎಂದು ಹೇಳಿದರು. ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಗ್ರೌಂಡ್‌ನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸಾವಿರಾರು ಜನರ ಎದುರ ರಾಷ್ಟ್ರವನ್ನುದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

ಮಾನಸಿಕ ಸ್ವಾಸ್ಥ್ಯಕ್ಕೂ ಯೋಗವೇ ಮದ್ದು: ಬಹುತೇಕ ಜನರು ತಮ್ಮ ಆಧುನಿಕ ಜೀವನಶೈಲಿಯಿಂದಾಗಿ ಬದುಕಿನಲ್ಲಿ ಸಮತೋಲನ ಕಾಯ್ದುಕೊಳ್ಳಲು ಹೆಣಗಾಡುತ್ತಾರೆ. ಸಮತೋಲಿತವಾಗಿ ಬದುಕುವುದು ಹೇಗೆಂಬುದನ್ನು ಯೋಗವು ನಮಗೆ ಕಲಿಸುತ್ತದೆ. ಯಾವುದು ಬೇಕು, ಯಾವುದು ಬೇಡ ಎಂಬುದನ್ನೂ ಕಲಿಸುತ್ತದೆ. ನಮ್ಮ ಶರೀರಗಳನ್ನು ಸೂಕ್ತವಾದ ರೀತಿಯಲ್ಲಿ ನಿರ್ವಹಿಸಲು ಕಲಿತಾಗ ಆರೋಗ್ಯವು ನಮಗೊಂದು ಅಭ್ಯಾಸವಾಗುತ್ತದೆ. ಯೋಗವು ಕೇವಲ ದೈಹಿಕ ಸ್ವಾಸ್ಥ್ಯ ಕಾಪಾಡಲು ಸೀಮಿತವಲ್ಲ, ವಾಸ್ತವದಲ್ಲಿ ಮಾನಸಿಕ ಆರೋಗ್ಯ ಕಾಪಾಡಲು ಸಹಕರಿಸುವ ಮುಖೇನ ದೈಹಿಕ ಆರೋಗ್ಯಕ್ಕೆ ಹಾದಿ ತೋರುವುದು ಎಂದು ಯೋಗದ ಮಹತ್ವವನ್ನು ಪ್ರಧಾನಿ ಮೋದಿ ಅರ್ಥಪೂರ್ಣವಾಗಿ ವಿವರಿಸಿದರು.

ಜಾಗತಿಕ ಶಾಂತಿಗೂ ಹಾದಿ ಸುಗಮ: ಯಾವುದು ಸರಿ ಮತ್ತು ಯಾವುದು ತಪ್ಪು ಅಥವಾ ಯಾವುದು ಬೇಕು, ಯಾವುದು ಬೇಡ ಎಂಬುದನ್ನು ನಿರ್ಧರಿಸುವ ಆತ್ಮಪ್ರಜ್ಞೆಯಿಂದ ಮಾನಸಿಕ ಶಾಂತಿ ಲಭಿಸುವುದು ಮಾತ್ರವಲ್ಲ, ಜಾಗತಿಕ ಶಾಂತಿಗೂ ಹಾದಿ ಸುಗಮವಾಗುವುದು. ಹಾಗಾಗಿಯೇ ನಮ್ಮ ವೈಯಕ್ತಿಕ ಜೀವನಶೈಲಿಗೆ ಮಾತ್ರವಲ್ಲ, ಈ ಜಗತ್ತಿನ ಉಜ್ವಲ ಭವಿಷ್ಯಕ್ಕಾಗಿ ಕೂಡ ಯೋಗ ಅತ್ಯವಶ್ಯ ಎಂದು ಪ್ರಧಾನಿ ಮೋದಿ ಹೇಳಿದರು.

ಜಗತ್ತಿನ ಹಲವು ವಲಯಗಳು ಸಶಸ್ತ್ರ ಸಂಘರ್ಷಗಳಿಂದ ಜರ್ಜರಿತವಾಗಿ ರುವುದು ಹಾಗೂ ರಾಜತಾಂತ್ರಿಕ ಒತ್ತಡಗಳಿಂದ ಕೊಳಲಾಡುತ್ತಿರುವುದು ಮತ್ತು ಸಂಘರ್ಷ, ವಿವಾದಗಳಿಗೆ ಮಾತುಕತೆ ಮುಖೇನ ಶಾಂತಿಯುತ ಪರಿಹಾರ ಕಂಡುಕೊಳ್ಳುವಂತೆ ಭಾರತ ಸುದೀರ್ಘ ಕಾಲದಿಂದ ಆಗ್ರಹಿಸುತ್ತಿರುವ ವಾಸ್ತವ ಮಧ್ಯೆ, ಸಮತೋಲಿತ ಬದುಕು, ಆತ್ಮಪ್ರಜ್ಞೆ, ಅಂತರಂಗವಾಗಿ ಸ್ಥಿರತೆ-ಮೌಲ್ಯಗಳಿಗಾಗಿ ಯೋಗಾಭ್ಯಾಸ ಮಾಡಿ, ಯೋಗವು ಪರಸ್ಪರ ದ್ವೇಷಾಸೂಯೆ, ಸಂಘರ್ಷಗಳಿಂದ ಮುಕ್ತರಾಗಲು ಸಮಾಜಕ್ಕೆ ನೆರವಾಗುವುದೆಂಬ ಅಪೂರ್ವ ಸಂದೇಶವನ್ನು ಪ್ರಧಾನಿ ಮೋದಿ ನೀಡಿದ್ದಾರೆ.

ಕೋಲ್ಕತ್ತಾ ಜನತೆಗೆ ಮೋದಿ ಅಭಿನಂದನೆ


ಸ್ವಚ್ಛತಾ ಸೆ ಸ್ವಾಗತ್ ಉಪಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಿರುವ ಕೋಲ್ಕತ್ತಾ ಜನತೆಯನ್ನು ಪ್ರಧಾನಿ ಮೋದಿ ಅಭಿನಂದಿಸಿದರು. ಸ್ವಚ್ಛತಾ ಸೆ ಸ್ವಾಗತ್ ಘೋಷಣೆಯನ್ನು ಕಾರ್ಯಗತಗೊಳಿಸಲು ಸಮರ್ಪಣಾ ಭಾವದಿಂದ ಪ್ರಯತ್ನಿಸಿ, ದುಡಿದ ಕೋಲ್ಕತ್ತಾ ಜನತೆಯನ್ನು ತಾನು ಅಭಿನಂದಿಸುತ್ತೇನೆ. ಅವರ ನಾಗರಿಕ ಕರ್ತವ್ಯವು ಇಡೀ ದೇಶವನ್ನೇ ಪ್ರಭಾವಿತಗೊಳಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು. ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಧಾನ ವಿಚಾರವಾದ ಯೋಗ ಫಾರ್ ಹೆಲ್ದೀ ಏಜಿಂಗ್‌ನ್ನು ಉಲ್ಲೇಖಿಸಿ, ಶಾರೀರಿಕ ಆರೋಗ್ಯ, ಮಾನಸಿಕ ಸ್ವಾಸ್ಥ್ಯದ ಜತೆ ವಯಸ್ಸು ಮೀರಿದರೂ ಕ್ರಿಯಾಶೀಲರಾಗಿರಲು, ತನ್ಮೂಲಕ ಬದುಕಿನ ಗುಣಮಟ್ಟವನ್ನು ಸುಧಾರಿಸಲು ನಮ್ಮ ಪ್ರಾಚೀನ ಯೋಗ ಪದ್ಧತಿ ನೆರವಾಗುತ್ತದೆ ಅಥವಾ ನಿರ್ಣಾಯಕ ಪಾತ್ರ ವಹಿಸುತ್ತದೆ. ಬದುಕಿನುದ್ದಕ್ಕೂ ನಮ್ಮ ಶರೀರ ಮತ್ತು ಮನಸ್ಸನ್ನು ಸ್ವಯಂ ಅರ್ಥೈಸಿಕೊಳ್ಳಲು ನಿತ್ಯ ಯೋಗಾಭ್ಯಾಸ ನೆರವಾಗುತ್ತದೆ. ನಮ್ಮನ್ನು ನಾವು ಚೆನ್ನಾಗಿ ಅರ್ಥಮಾಡಿಕೊಂಡಲ್ಲಿ ಅಷ್ಟೇ ಚೆನ್ನಾಗಿ ನಮ್ಮನ್ನು ನಾವು ನಿಭಾಯಿಸಿಕೊಳ್ಳಲು ಶಕ್ತರಾಗುತ್ತೇವೆ. ಹಾಗಾಗಿಯೇ ಹಿರಿಯರಿಗೆ ಮಾತ್ರವಲ್ಲ ಎಲ್ಲಾ ವಯೋಮಾನದವರಿಗೂ ಯೋಗ ಬೇಕೆಂಬುದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಧಾನ ತಿರುಳಾಗಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ರಾಜ್ಯದ ವಿವಿಧೆಡೆ ಯೋಗ ಕಾರ್ಯಕ್ರಮ

ಪುಟ ೧ ➡ ಇದೇ ವೇಳೆ ಮಲ್ಲಕಂಬ ಪ್ರದರ್ಶನ ಕಣ್ಮನ ಸೆಳೆಯಿತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸೇರಿದಂತೆ ನಗರದ ವಿವಿಧೆಡೆ ಬೃಹತ್ ಯೋಗ ಶಿಬಿರಗಳು ನಡೆದವು. ಏಕಕಾಲಕ್ಕೆ 45 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗಾಭ್ಯಾಸದಲ್ಲಿ ತೊಡಗಿಸಿಕೊಂಡು ಗಮನ ಸೆಳೆದರು. ಮೈಸೂರಿನಲ್ಲಿ ಬೆಳಗ್ಗೆಯಿಂದಲೇ ಅರಮನೆ ಆವರಣ ಸೇರಿದಂತೆ ನಗರದ ಪ್ರಮುಖ ಸ್ಥಳಗಳಲ್ಲಿ ಓಂಕಾರ ಮತ್ತು ಯೋಗಾಸನಗಳ ಪ್ರದರ್ಶನಗಳು ನಡೆದವು. ಬೆಳಗಾವಿಯಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಭಾಗವಹಿಸಿದ್ದರು. ಚಾಮರಾಜನಗರದ ಪೊಲೀಸ್ ಕವಾಯತು ಮೈದಾನ, ಶಿವಮೊಗ್ಗ, ಬಳ್ಳಾರಿ ಹಾಗೂ ದಾವಣಗೆರೆ ಜಿಲ್ಲೆಗಳಲ್ಲೂ ಜಿಲ್ಲಾಡಳಿತ ಹಾಗೂ ಆಯುಷ್ ಇಲಾಖೆಯ ವತಿಯಿಂದ ವಿಶೇಷ ಯೋಗ ದಿನವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.

50 ವರ್ಷಗಳಿಂದಲೂ ಕಾವೇರಿ ಸಮಸ್ಯೆ: ಎಚ್ಡಿಕೆ

• **ಮಂಡ್ಯ:** ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ತಮಿಳುನಾಡಿನ ರಾಜಕೀಯ ಪಕ್ಷಗಳು ಕರ್ನಾಟಕದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ರಾಜಕೀಯ ಕಾರಣಗಳಿಗಾಗಿ ಪ್ರತಿಷ್ಠೆಯನ್ನು ಮುಂದಿಟ್ಟುಕೊಂಡು



ದಬ್ಬಾಳಿಕೆ ನಡೆಸುವುದು ಸರಿಯಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನದಿ ನೀರಿನ ವಿಚಾರವಾಗಿ ತ.ನಾಡು ಕ್ಯಾತೆ ತೆಗೆಯುವುದು ಹೊಸದೇನಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ತಮಿಳುನಾಡಿನ ರಾಜಕೀಯ ಪಕ್ಷಗಳು ಎರಡೂ ರಾಜ್ಯದ ರೈತರ ಹಿತ ಬಯಸಬೇಕು. ಎರಡೂ ರಾಜ್ಯದವರು ಅಣ್ಣ-ತಮ್ಮಂದಿರ ರೀತಿ ಇರಬೇಕು. ಸಂಕಷ್ಟ ಕಾಲದಲ್ಲಿ ನೀರನ್ನು ಯಾವ ರೀತಿ ಹಂಚಿಕೊಳ್ಳಬೇಕೆಂಬ ಬಗ್ಗೆ ಮಾತುಕತೆ ನಡೆಸಿ ಸಿದ್ಧ ಸೂತ್ರ ರೂಪಿಸಬೇಕು ಎಂದರು.

ಮದ್ಯ ಪರವಾನಗಿ ಹರಾಜುಗಳಲ್ಲಿ ಎಸ್ಸಿ, ಎಸ್ಟಿಗಳಿಗೆ ಮೀಸಲಾತಿ

• **ಬೆಂಗಳೂರು:** ರಾಜ್ಯದಲ್ಲಿ ಮೊದಲ ಬಾರಿಗೆ ಮದ್ಯ ಪರವಾನಗಿ ಹರಾಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ನೀಡಲು ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಸರ್ಕಾರವು 2026ರ ಜೂನ್ 17ರಂದು ಹೊರಡಿಸಿದ ಅಧಿಸೂಚನೆಯ ಈ ತಿದ್ದುಪಡಿಯು, CL 2A ಮತ್ತು ಇತರೆ ಪರವಾನಗಿಗಳ ಇ-ಹರಾಜುಗಳಲ್ಲಿ ಮೀಸಲಾತಿ ಹಂಚಿಕೆ ಮಾಡಿದೆ. ಪರಿಶಿಷ್ಟ ಜಾತಿ –ಎಗೆ 5.25%, ಪರಿಶಿಷ್ಟ ಜಾತಿ-ಬಿಗೆ 5.25%, ಪರಿಶಿಷ್ಟ ಜಾತಿ-ಸಿಗೆ 4.5%, ಮತ್ತು ಪರಿಶಿಷ್ಟ ಪಂಗಡಕ್ಕೆ 3% ಮೀಸಲಾತಿ ನಿಗದಿಪಡಿಸಲಾಗಿದೆ.

ಮಲ್ಲಕಂಬ ಪ್ರದರ್ಶನ



ಆಯುಷ್ ಇಲಾಖೆಯ ವತಿಯಿಂದ ಭಾನುವಾರ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಲಾಗಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದರ್ಶಿಸಿದ ಮಲ್ಲಕಂಬ ಎಲ್ಲರ ಗಮನ ಸೆಳೆಯಿತು.

ಜಗನ್ನಾಥ ರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ | ದತ್ತಾತ್ರೇಯ ಹೊಸಬಾಳೆ ಮಾತು

ಸಮಾಜದ ಔನ್ನತ್ಯಕ್ಕೆ ಜಗನ್ನಾಥ ಭವನ ಬಳಕೆಯಾಗಲಿ

• **ಬೆಳಗಾವಿ:** ತಮ್ಮ ಜೀವನವನ್ನೇ ಸಮಾಜ ಸೇವೆಗೆ ಸಮರ್ಪಿಸಿದ ಜಗನ್ನಾಥ ರಾವ್ ಜೋಶಿ ಅವರ ಸ್ಮರಣಾರ್ಥ ನಿರ್ಮಿಸಲಾದ ಜಗನ್ನಾಥರಾವ್ ಜೋಶಿ ಸ್ಮಾರಕ ಭವನವನ್ನು ಇಡೀ ಸಮಾಜಕ್ಕೆ ಅರ್ಪಿಸಲಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ಭಾನುವಾರ ನಗರದ ಸಂಘ ಸದನದಲ್ಲಿ ನ್ಯೂ ಗೂಡ್ಸ್ ಶೆಡ್ ರಸ್ತೆಯಲ್ಲಿರುವ ಭವ್ಯ ಅಂತಸ್ತಿನ ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆಗೊಳಿಸಿದ ಬಳಿಕ ವೇದಿಕೆಯ ಸಮಾರಂಭದಲ್ಲಿ ಮಾತನಾಡಿದ ಅವರು, ಜನಹಿತ ಮತ್ತು ಜನಕಲ್ಯಾಣದ ಉದ್ದೇಶದಿಂದ ಈ ಭವನ ನಿರ್ಮಿಸಲಾಗಿದೆ. ಭವನ ನಿರ್ಮಾಣಕ್ಕೆ ಬಳಸಿರುವ ಪ್ರತಿಯೊಂದು ಪೈಸೆಯೂ ಸದುಪಯೋಗವಾಗಬೇಕು ಹಾಗೂ ಪ್ರತಿಯೊಂದು ಇಂಚು ಜಾಗವೂ ಸಮಾಜದ ಹಿತಕ್ಕಾಗಿ ಬಳಕೆಯಾಗಬೇಕು ಎಂದರು.

ಕಾರಂಜಿಮಠದ ಶ್ರೀ ಗುರುಸಿದ್ಧ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಂಘಚಾಲಕ ಬಸವರಾಜ ಡಂಬಳ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ ಸ್ವಾಗತಿಸಿದರು. ಜನ ಕಲ್ಯಾಣ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ, ಆರ್‌ಎಸ್‌ಎಸ್ ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ ಸೇರಿದಂತೆ ಹಲವು ಗಣ್ಯರು ಇದ್ದರು.



ಅತ್ಯಂತ ಸರಳ ಜೀವನ

ಜಗನ್ನಾಥರಾವ್ ಜೋಶಿ ಅವರು ಜಾತಿ, ಮತ, ಧರ್ಮಗಳ ಗಡಿಗಳನ್ನು ಮೀರಿ ಬದುಕಿದ ಮಹಾನಾಯಕರಾಗಿದ್ದು, ದೇಶ ಸೇವೆಯನ್ನೇ ಪರಮೋಚ್ಚ ಗುರಿಯನ್ನಾಗಿಸಿಕೊಂಡಿದ್ದರು. ಜನರಿಗಾಗಿ ಜೀವನವನ್ನೇ ಮುಡಿಪಾಗಿಟ್ಟ ಅವರು ಅತ್ಯಂತ ಸರಳ ಜೀವನ ನಡೆಸಿದ್ದರು. ಅವರ ಸಾರ್ಥಕ ಜೀವನಕ್ಕೆ ಗೌರವ ಸಲ್ಲಿಸುವ ಉದ್ದೇಶದಿಂದ ಈ ಸ್ಮಾರಕ ಭವನ ನಿರ್ಮಿಸಲಾಗಿದೆ ಎಂದರು. ಸಮಾಜದ ಔನ್ನತ್ಯ, ಜನಕಲ್ಯಾಣದ ಕಾರ್ಯಗಳಿಗೆ ಈ ಭವನ ಕೇಂದ್ರವಾಗಲಿ. ಜಗನ್ನಾಥರಾವ್ ಜೋಶಿ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯಕ್ಕೆ ಇದು ನೆರವಾಗಲಿ ಎಂದು ದತ್ತಾತ್ರೇಯ ಹೊಸಬಾಳೆ ಆಶಿಸಿದರು.

ಸಮಾರಂಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ, ಗೋವಿಂದ ಕಾರಜೋಳ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಮಾಜಿ ಸಚಿವರಾದ ಸಿ.ಟಿ.ರವಿ, ಮುರುಗೇಶ ನಿರಾಣಿ, ಕೆ.ಎಸ್.ಈಶ್ವರಪ್ಪ, ಸಿ.ಸಿ.ಪಾಟೀಲ, ಶಶಿಕಲಾ ಜೊಲ್ಲೆ, ಕೋಟ ಶ್ರೀನಿವಾಸ ಪೂಜಾರಿ, ಜನಪ್ರತಿನಿಧಿಗಳು, ಸಂಘದ ಪ್ರಮುಖರು ಸೇರಿದಂತೆ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಹೈಗೆ ವರದಿ ಸಲ್ಲಿಕೆ: ಸಿಟಿ ರವಿ

• **ಬೆಳಗಾವಿ:** ಪರಿಷತ್ ಚುನಾವಣೆಯ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಮುಂದಿನ ಎರಡು ದಿನಗಳಲ್ಲಿ ಪಕ್ಷದ ಹೈಕಮಾಂಡ್‌ಗೆ ಪ್ರಾಥಮಿಕ ಹಾಗೂ ಮಧ್ಯಂತರ ವರದಿಯನ್ನು ಸಲ್ಲಿಸಲಾಗುವುದು ಎಂದು ಸತ್ಯಶೋಧನಾ ಸಮಿತಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದರು. ಭಾನುವಾರ ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಕ್ಷಗಳಿಂದ ಒಟ್ಟು 12 ಮತಗಳು ವ್ಯತ್ಯಾಸವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಗೌಪ್ಯ ಮತದಾನ ಆಗಿರುವ ಹಿನ್ನೆಲೆಯಲ್ಲಿ ಮತಗಳ ಕೊರತೆ ಎದುರಾಗಿದೆ. ಇದರಲ್ಲಿ ಒಂದು ಮತ ಕುಲಗೆಟ್ಟಿದೆ (ಅಸಿಂಧು). ತಲಾ 30 ವೋಟುಗಳಂತೆ ಪ್ರತ್ಯೇಕವಾಗಿ ಯೋಜನೆ ರೂಪಿಸಿ ಜವಾಬ್ದಾರಿ ಹಂಚಲಾಗಿತ್ತು. ಆದರೆ, ಈಗ ಲೆಕ್ಕಾಚಾರ ಉಲ್ಟಾ ಆಗಿದೆ ಎಂದರು. ಯಾವ ಶಾಸಕರು ಕ್ರಾಸ್ ವೋಟಿಂಗ್ ಮಾಡಿದ್ದಾರೆ ಎನ್ನುವುದರ ಬಗ್ಗೆ ಸದ್ಯಕ್ಕೆ ಯಾರ ಮೇಲೂ ನಾವು ನೇರ ಆರೋಪ ಮಾಡುವುದಿಲ್ಲ, ಕೇವಲ ಸಾಂದರ್ಭಿಕ ಸಾಕ್ಷ್ಯಗಳನ್ನು ಮತ್ತು ಮಾಹಿತಿಯನ್ನು ಕಲೆ ಹಾಕುತ್ತಿದ್ದೇವೆ. ಅನುಮಾನಿಸುವುದಷ್ಟೇ ಹೊರತು, ಇವರೇ ತಪ್ಪು ಮಾಡಿದ್ದಾರೆ ಎಂದು ಸಾರಲು ಸಾಧ್ಯವಿಲ್ಲ. ಸತ್ಯಶೋಧನೆ ನಡೆಸಿ ನಿಖರವಾದ ವರದಿ ಕೊಡುವ ಕೆಲಸವನ್ನು ಸಮಿತಿ ಪ್ರಾಮಾಣಿಕವಾಗಿ ಮಾಡಲಿದೆ. ವರದಿ ಸಲ್ಲಿಕೆಯಾದ ಬಳಿಕ ಪಕ್ಷದ ಶಿಸ್ತು ಸಮಿತಿಯು ಮುಂದಿನ ಕ್ರಮಗಳ ಬಗ್ಗೆ ಆಲೋಚನೆ ಮಾಡಲಿದೆ ಎಂದು ಹೇಳಿದರು.

ಪಕ್ಷದಲ್ಲಿ ಆತ್ಮಾವಲೋಕನ ಅಗತ್ಯ: ಶಾಸಕ ಬೆಲ್ಲದ

• **ಬೆಳಗಾವಿ:** ರಾಜ್ಯ ಬಿಜೆಪಿಯಲ್ಲಿ ಇತ್ತೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳು ಹಾಗೂ ಚುನಾವಣಾ ಫಲಿತಾಂಶಗಳ ಹಿನ್ನೆಲೆಯಲ್ಲಿ ಪಕ್ಷದೊಳಗಿನ ಸ್ಥಿತಿಗತಿಗಳ ಕುರಿತು ಹಾಗೂ ಪಕ್ಷದ ಸಂಘಟನೆ ಮತ್ತಷ್ಟು ಬಲಪಡಿಸಲು ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದು ಶಾಸಕ ಅರವಿಂದ ಬೆಲ್ಲದ ಅಭಿಪ್ರಾಯಪಟ್ಟರು. ಭಾನುವಾರ ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಕ್ಷದ ಸಂಘಟನೆ ಮತ್ತು ಇತ್ತೀಚಿನ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಹೈಕಮಾಂಡ್ ನಾಯಕರು ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲಿದ್ದಾರೆ. ಪಕ್ಷದಲ್ಲಿರುವ ಲೋಪದೋಷಗಳನ್ನು ಗುರುತಿಸಿ ಸರಿಪಡಿಸಿಕೊಂಡು ಮುನ್ನಡೆಯುವುದು ಈಗಿನ ಅಗತ್ಯವಾಗಿದ್ದು, ಇದು ಎಲ್ಲರಿಗೂ ಆತ್ಮಾವಲೋಕನದ ಸಮಯವಾಗಿದೆ ಎಂದು ಹೇಳಿದರು. ರಾಜ್ಯ ಬಿಜೆಪಿ ಅಧ್ಯಕ್ಷರು ಪಕ್ಷದ ಎಲ್ಲ ನಾಯಕರನ್ನು ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸಿಕೊಂಡು ಸಾಗುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ ಎಂದರು.

ಕೆರೆಗೆ ತ್ಯಾಜ್ಯ: ಡಾಕ್ಟರ್ ಮೇಲೆ ದೂರು ದಾಖಲು

• **ಬೆಂಗಳೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಂಟಗಾನಹಳ್ಳಿ ಕೆರೆಗೆ ವೈದ್ಯಕೀಯ ತ್ಯಾಜ್ಯ ಸುರಿದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಸೂಚನೆ ಮೇರೆಗೆ ಅಧಿಕಾರಿಗಳು ಕ್ರಮ ವಹಿಸಿದ್ದು, ಖಾಸಗಿ ಕ್ಲಿನಿಕ್ ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಯಂಟಗಾನಹಳ್ಳಿ ಗ್ರಾಮಪಂಚಾಯ್ತಿಗೆ ಸಚಿವರು ಹಠಾತ್ ಭೇಟಿ ನೀಡಿದ್ದ ವೇಳೆ ಸಾರ್ವಜನಿಕರು ವೈದ್ಯಕೀಯ ತ್ಯಾಜ್ಯವನ್ನು ಕೆರೆಗೆ ಸುರಿದಿರುವ ಬಗ್ಗೆ ಮಾಹಿತಿ ನೀಡಿದ್ದರು. ಕೂಡಲೇ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗೆ ಸ್ಥಳ ಪರಿಶೀಲಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸೂಚಿಸಿದ್ದರು. ಸಚಿವ ಖಂಡ್ರೆ ಅವರ ಸೂಚನೆಯಂತೆ ಸ್ಥಳ ಪರಿಶೀಲನೆ ನಡೆಸಿದ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಡಾ. ಬಿಂದು, ಸಚಿತ್ರ ಮಾಹಿತಿ ನೀಡಿದ ತರುವಾಯ ತಾಲೂಕು ವೈದ್ಯಾಧಿಕಾರಿ ಡಾ. ಪದ್ಮಿನಿ ನೆಲಮಂಗಲ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನನಗೆ ಶಕ್ತಿ ತುಂಬಿದ ಪದಾಧಿಕಾರಿಗಳು: ಸಿಎಂ ಡಿ.ಕೆ.ಶಿವಕುಮಾರ್

ಕಾರ್ಯಕರ್ತರಿಗೆ ಅಧಿಕಾರ

• **ಬೆಂಗಳೂರು:** ಕಳೆದ ಆರು ವರ್ಷಗಳಲ್ಲಿ ನನ್ನ ಜೊತೆ ಪಕ್ಷದ ಅನೇಕ ಪದಾಧಿಕಾರಿಗಳು ಶ್ರಮಿಸಿದ್ದು, ಎಲ್ಲಾ ಶಾಸಕರು ಹಾಗೂ ಮುಖಂಡರು ತನು, ಮನ, ಧನ ಅರ್ಪಿಸಿ ನನಗೆ ಶಕ್ತಿ ತುಂಬಿದ್ದಾರೆ. ಎಲ್ಲೋ ಪಕ್ಷಕ್ಕೆ ಅಧಿಕಾರ ನೀಡಲು ಸಾಧ್ಯವಾಗಿಲ್ಲ, ನಾವು ಗ್ಯಾರಂಟಿ ಯೋಜನೆಗಳ ಸಮಿತಿ ಮಾಡಿ, ಸಾವಿರಾರು ಕಾರ್ಯಕರ್ತರಿಗೆ ಅಧಿಕಾರ ನೀಡಿದ್ದೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ಪಂಚಾಯಿತಿ ಹಾಗೂ ವಾರ್ಡ್ ಮಟ್ಟದಲ್ಲಿ ಸಮಿತಿ ರಚನೆಗೆ ನಾನು ಹಾಗೂ ನಮ್ಮ ಪಕ್ಷದ ಅಧ್ಯಕ್ಷರು ಚರ್ಚೆ ಮಾಡಿದ್ದೇವೆ. ಎಲ್ಲಾ ವರ್ಗದವರಿಗೂ ಸಮಾನವಾಗಿ ಈ ಸಮಿತಿಯಲ್ಲಿ ನೇಮಕ ಮಾಡಲಾಗುವುದು. ಈ ಸಮಿತಿಸದಸ್ಯರನ್ನು ರಾಜಕೀಯ ಭವಿಷ್ಯದ ದಾಖಲೆ ಮರುಪರಿಶೀಲನೆ ಮಾಡಬೇಕು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಕರೆ ನೀಡಿದರು.

ಪ್ರತಿ ವಾರ್ಡ್ ಹಾಗೂ ಪಂಚಾಯಿತಿಯಲ್ಲಿ ಐದು ಜನರಂತೆ, 7 ಸಾವಿರ ಪಂಚಾಯಿತಿ, 4 ಸಾವಿರ ವಾರ್ಡ್‌ಗಳಲ್ಲಿ ಗ್ಯಾರಂಟಿ ಸಮಿತಿ ರಚಿಸಲಾಗುವುದು. ಅಮೂಲ್ಯ ನಾವು ಎಷ್ಟು ನಾಯಕರನ್ನು ತಯಾರು ಮಾಡುತ್ತಿದ್ದೇವೆ ಎಂದು ನೀವೇ ಆಲೋಚಿಸಿ. ನಾಯಕತ್ವದವರು ನಾಯಕರನ್ನು ಬೆಳೆಸಬೇಕೇ ಹೊರತು, ಹಿಂಬಾಲಕರನ್ನಲ್ಲ ಎಂಬುದಕ್ಕೆ ಕಾಂಗ್ರೆಸ್ ಪಕ್ಷ ಬದ್ಧವಾಗಿದೆ ಎಂದು ತಿಳಿಸಿದರು.

ಕಾರ್ಯಕರ್ತರ ಸಂಕಟ ಕೆಲಸ: ನಾನು ಮುಖ್ಯಮಂತ್ರಿಯಾಗಿದ್ದರೂ ಕಾರ್ಯಕರ್ತನಾಗಿ ನಿಮ್ಮ ಜತೆಗೆ ಕೆಲಸ ಮಾಡುತ್ತೇನೆ. 2028ರಲ್ಲಿ ಕಾಂಗ್ರೆಸ್ ಅನ್ನು ಮತ್ತೆ ಅಧಿಕಾರಕ್ಕೆ ತರಲು 2029ರಲ್ಲಿ ರಾಹುಲ್ ಗಾಂಧಿ ಅವರನ್ನು ದೇಶದ ಪ್ರಧಾನಿಯಾಗಿ ಮಾಡಲು ನಾವೆಲ್ಲರೂ ಸಂಕಲ್ಪ ಮಾಡಿದ್ದೇವೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ಸಿಕ್ಕ ಅವಕಾಶ ನಮಗೆ ಸಿಕ್ಕಿಲ್ಲ ಎಂದು ಬಿಜೆಪಿಯವರು ಕೈ ಹಿಸುಕಿಕೊಳ್ಳುತ್ತಿದ್ದಾರೆ. ನೀವು ಚಿಂತೆ ಮಾಡುವ ಅಗತ್ಯವಿಲ್ಲ. 2028ರಲ್ಲಿ ಹಾಗೂ 2029ರಲ್ಲೂ ನಿಮ್ಮದೇ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಸಂದೇಶ ನೀಡಿದರು.

ಪಕ್ಷ ಶಕ್ತಿ ಮೀರಿ ಕಾರ್ಯಕರ್ತರ ಸೇವೆ, ಪಕ್ಷ ಸಂಘಟನೆ: ನಾನು ನನ್ನ ಶಕ್ತಿ ಮೀರಿ, ಕಾರ್ಯಕರ್ತರ ಸೇವೆ ಮಾಡಿ, ಪಕ್ಷವನ್ನು ಸಂಘಟನೆ ಮಾಡಿದ್ದೇನೆ. ನನ್ನಿಂದ ಅನೇಕ ತಪ್ಪುಗಳಾಗಿರಬಹುದು ಎಂದರು.



ಎಲ್ಲಾ ಜಿಲ್ಲಾ ಮಂತ್ರಿಗಳು ವಾರಕ್ಕೆ ಒಂದು ದಿನ ನಿಮ್ಮ ಜಿಲ್ಲೆಗಳಲ್ಲಿರುವ ಒಂದು ತಾಲ್ಲೂಕಿನಲ್ಲಿ ಜನಸ್ಪಂದನ ಕಾರ್ಯಕ್ರಮ ಮಾಡಿ, ಜನರ ಸಮಸ್ಯೆಗೆ ಪರಿಹಾರ ನೀಡಬೇಕು ಎಂದು ಸೂಚಿಸಿದ್ದೇನೆ. ನೀವು ಶಕ್ತಿಶಾಲಿಯಾದರೆ, ನಾವು ಬಲಿಷ್ಠವಾಗುತ್ತೇವೆ.
■ **ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ

ಈ ವರ್ಷದಿಂದಲೇ ವಿದ್ಯಾರ್ಥಿ ಚುನಾವಣೆ

ರಾಜ್ಯದಲ್ಲಿ ನಿಲ್ಲಿಸಿರುವ ವಿದ್ಯಾರ್ಥಿ ಚುನಾವಣೆಯನ್ನು ಈ ವರ್ಷದಿಂದಲೇ ಆರಂಭಿಸುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ಅಧಿಕಾರ ಹಸ್ತಾಂತರಿಸಿ ಅವರು ಮಾತನಾಡಿದರು. ಈ ವೇಳೆ ವಿದ್ಯಾರ್ಥಿ ಚುನಾವಣೆ ಆರಂಭಿಸುವ ಬಗ್ಗೆ ಅವರು ಮಾಹಿತಿ ನೀಡಿದರು. ಕೋವಿಡ್ ಕಾಲದಲ್ಲಿ ಮನೆಯಿಂದ ಹೊರಗೆ ಹೋಗೋಕೆ ಆಗಲಿಲ್ಲ, ಜೂಮ್ ಮೀಟಿಂಗ್ ಮೂಲಕವೇ ಅನೇಕ ಸಮಸ್ಯೆ ಪರಿಹರಿಸಿದ್ದೇವೆ. ಕೋಟಿ ಕೋಟಿ ಜನ ಮೆಚ್ಚ ಮಾಡಿ ಫುಡ್ ಕಿಟ್ ಕೊಟ್ಟಿದ್ದೇವೆ. ಕೆಲವರು ಯಾರಿಗೂ ಪರಿಗಣ ಒಬ್ಬರೂ ಹೋಗಬೇಕಿತ್ತು. ಆಗ ಕೆಪಿಸಿಸಿ ವತಿಯಿಂದ 1 ಕೋಟಿ ರೂ. ಚೆಕ್ ಕೊಟ್ಟೆ ರೈಲು, ಬಸ್ಸಲ್ಲಿ ಹೋಗೋಕೆ ವ್ಯವಸ್ಥೆ ಮಾಡಿದೆ. ಅಂದು ಮಾಡಿ ಕೊಟ್ಟಂತೆ ನಡೆದುಕೊಂಡಿದ್ದೇವೆ. ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಸರ್ಕಾರ ನೆರವು ನೀಡಿದ್ದೇವೆ ಎಂದರು. ಕೃಷಿ ಕಾಯ್ದೆ ವಿರುದ್ಧ ಹೋರಾಟ ಮಾಡಿದ್ದೇವೆ. ಬೆಲೆ ಏರಿಕೆ ವಿರುದ್ಧ ಹೋರಾಟ ಮಾಡಿದ್ದೇವೆ. ಆಗ ಇಬ್ಬರು ಮಂತ್ರಿಗಳು ರಾಜೀನಾಮೆ ಕೊಡಿಸಿದ್ದೆವು. ಆಗ ಸೋನಿಯಾ ಗಾಂಧಿ, ರಾಹುಲ್ ಗಾಂಧಿಯವರಿಗೆ ಕರೆದುಕೊಂಡು ನೀಡಿದರು. ಅದೆಲ್ಲಾ ನಮ್ಮನ್ನು ಅದರಲ್ಲಿ ಟ್ರೈನ್‌ಕೊಂಡು ಹೋರಾಟ ಮಾಡಿದ್ದು, ಕೃಷ್ಣ ಕಾವೇರಿ ಹೋರಾಟ, ಮೇಕೆದಾಟು ಹೋರಾಟ ಮಾಡಿದ್ದು, ಅಂದು ಬಿಜೆಪಿಯ ಅವಕಾಶ ನೀಡಲಿಲ್ಲ, ಈಗ ಅದೆಲ್ಲಾ ಇತಿಹಾಸ ಎಂದರು.

ಒತ್ತಡಕ್ಕೆ ಯೋಗ ಮದ್ದು

• **ಬೆಂಗಳೂರು:** ಇಂದಿನ ಆಧುನಿಕ ದಿನಗಳಲ್ಲಿ ನಾವೆಲ್ಲ ಒತ್ತಡದಲ್ಲಿದ್ದೇವೆ. ಇದಕ್ಕೆ ಯೋಗವೇ ಮದ್ದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.



ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದ ಮುಂಭಾಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 12ನೇ ಯೋಗ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಬಾರಿ ಸೌಹಾರ್ದತೆ ಮತ್ತು ಶಾಂತಿಗಾಗಿ ಯೋಗ ಎಂಬ ಧ್ಯೇಯದಡಿ ವಿಶ್ವ ಯೋಗ ದಿನವನ್ನು ಆಚರಿಸಲಾಗುತ್ತಿದೆ. ಜಗತ್ತಿನಲ್ಲಿ ಯುದ್ಧದಿಂದಾಗಿ ಸಾಕಷ್ಟು ತೊಂದರೆಯನ್ನು ನಾವೆಲ್ಲ ಅನುಭವಿಸುತ್ತಿದ್ದೇವೆ. ಇದಕ್ಕೆ ಪ್ರಮುಖ ಕಾರಣ ವಿಶ್ವಾಸದ ಕೊರತೆ. ಈ ವಿಶ್ವಾಸವನ್ನು ಯೋಗದಿಂದ ವೃದ್ಧಿಸಿಕೊಳ್ಳಲು ಸಾಧ್ಯವಿದೆ ಎಂದರು.

ಇಂದು ಎಲ್ಲರಿಗೂ ಒತ್ತಡವಿದೆ. ಅದು ವಿದ್ಯಾರ್ಥಿ ಇರಬಹುದು, ರಾಜಕಾರಣಿಗಳು ಇರಬಹುದು. ಎಲ್ಲರದೂ ಒತ್ತಡದ ಬದುಕಾಗಿದೆ. ಈ ಒತ್ತಡದ ನಡುವೆ ಸಮಾಧಾನವಾಗಿ ಕೆಲಸ ಮಾಡಲು ಯೋಗ ಸಹಕಾರಿ. ಮನಸ್ಸಿನ ಸಮತೋಲನ ಕಾಪಾಡಲು ಯೋಗ ಬೇಕು. ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವೂ ಇದ್ದರೆ ಭವಿಷ್ಯ ಉಜ್ವಲವಾಗಲಿದೆ. ನಮ್ಮ ಭವಿಷ್ಯ ಉಜ್ವಲವಾಗಿದ್ದರೆ ದೇಶದ ಭವಿಷ್ಯ ಉಜ್ವಲವಾಗಲಿದೆ. ದೇಶದ ಭವಿಷ್ಯ ಉಜ್ವಲವಾದರೆ ವಿಶ್ವದ ಭವಿಷ್ಯ ಚೆನ್ನಾಗಿ ಇರಲಿದೆ ಎಂದು ವಿಜಯೇಂದ್ರ ವಿವರಿಸಿದರು.

ನಿತ್ಯ ಯೋಗಿಗಳಾಗೋಣ: ಒತ್ತಡ ನಿವಾರಣೆಗೆ ನಾವೆಲ್ಲ ಪ್ರತಿ ದಿನ ಯೋಗ ಮಾಡೋಣ. ನಮ್ಮ ಬದುಕು ಉತ್ತಮವಾಗಲು, ಉತ್ತಮ ಬದುಕು ಕಾಣಲು ಪ್ರತಿ ದಿನ ಯೋಗಾಭ್ಯಾಸ ಮಾಡಲೇಬೇಕು. ಪ್ರತಿಯೊಬ್ಬರ ಬದುಕು ಚೆನ್ನಾಗಿರಲು ಯೋಗ ಸಹಕಾರಿ. ಯೋಗ ಮಾಡಲು ಕೇವಲ ಮನಸ್ಸು ಮತ್ತು ಉದ್ದೇಶ ಮಾತ್ರ ಸಾಕು. ಪ್ರತಿಯೊಬ್ಬರ ವ್ಯಕ್ತಿತ್ವ ರೂಪಿಸುವಲ್ಲಿ ಯೋಗ ಮಹತ್ವದ ಪಾತ್ರ ವಹಿಸಲಿದೆ ಎಂದು ಶಾಸಕ ಡಾ. ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಫಿಟ್ ಅಂಡ್ ಹೆಲ್ತ್ ಫೌಂಡೇಶನ್‌ನ ಡಾ. ನಾ. ಸೋಮೇಶ್ವರ ಮಾತನಾಡಿ, ಯೋಗದಿಂದ ಹಲವಾರು ಪ್ರಯೋಜನಗಳಿವೆ. ಪ್ರೋಫೆಸರ್ ಆದರೆ ಇವು ಸಾಬೀತಾಗಿವೆ ಎಂದರು. ಯೋಗ ಗುರುಗಳಾದ ಮಂಜುನಾಥ್ ಹಾಗೂ ಗೀತಾ ಮಂಜುನಾಥ್ ಅವರು ಯೋಗಾಭ್ಯಾಸ ಮಾಡಿಸಿದರು. ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ನಟಿ ಕಾರುಣ್ಯ ರಾಮ್ ಭಾಗವಹಿಸಿದ್ದರು.

ಬಿಗಿ ಭದ್ರತೆಯಲ್ಲಿ ಮರು ನೀಟ್

• **ಬೆಂಗಳೂರು:** ಪರೀಕ್ಷಾ ಅಕ್ರಮಗಳ ಕಪ್ಪು ಅನುಭವದ ಬಳಿಕ ದೇಶಾದ್ಯಂತ ಮರುನಡೆಸಲಾದ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ಭಾನುವಾರ ರಾಜ್ಯ ಸೇರಿದಂತೆ ದೇಶದಾದ್ಯಂತ ಬಿಗಿ ಭದ್ರತೆಯ ನಡುವೆ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಬಾರಿ ಪ್ರಶ್ನೆಪತ್ರಿಕೆ ಹಿಂದಿನ ಪರೀಕ್ಷೆಗಿಂತ ಹೆಚ್ಚು ಕಠಿಣವಾಗಿದ್ದು, ವಿಶೇಷವಾಗಿ ಭೌತಶಾಸ್ತ್ರ ವಿಭಾಗ ವಿದ್ಯಾರ್ಥಿಗಳಿಗೆ ತೀವ್ರ ಸವಾಲೊಡ್ಡಿದೆ ಎಂದು ಪರೀಕ್ಷಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ.

ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರ ಅಕ್ರಮಗಳ ಆರೋಪಗಳು ದೇಶವ್ಯಾಪಿ ವಿವಾದಕ್ಕೆ ಕಾರಣವಾಗಿ ಪರೀಕ್ಷೆಯನ್ನು ರದ್ದುಗೊಳಿಸಲಾಗಿತ್ತು. ಇದರ ಬೆನ್ನಲ್ಲೇ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ದೇಶಾದ್ಯಂತ 22,79,743 ವಿದ್ಯಾರ್ಥಿಗಳಿಗಾಗಿ ಮರುಪರೀಕ್ಷೆಯನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಯೊಂದಿಗೆ ನಡೆಸಿತು.

ಪ್ರಶ್ನೆಪತ್ರಿಕೆ ಕಠಿಣ: ಪರೀಕ್ಷೆ ಮುಗಿದ ಬಳಿಕ ವಿವಿಧ ಕೇಂದ್ರಗಳಿಂದ ಹೊರಬಂದ ವಿದ್ಯಾರ್ಥಿಗಳು ಈ ಬಾರಿ ಪ್ರಶ್ನೆಪತ್ರಿಕೆಯು ನಿರೀಕ್ಷೆಗಿಂತ ಕಠಿಣವಾಗಿತ್ತು ಎಂದು ಪ್ರತಿಕ್ರಿಯಿಸಿದರು. ವಿಷಯವಾರು ನೋಡಿದರೆ ಭೌತಶಾಸ್ತ್ರ ವಿಭಾಗದ ಪ್ರಶ್ನೆಗಳು ದೀರ್ಘವಾಗಿದ್ದು, ವಿಶ್ಲೇಷಣಾತ್ಮಕ ಚಿಂತನೆಗೆ ಹೆಚ್ಚಿನ ಸಮಯ ಬೇಕಾಗಿತ್ತು. ರಸಾಯನಶಾಸ್ತ್ರ ವಿಭಾಗ ಸಾಧಾರಣದಿಂದ ಕಠಿಣ ಮಟ್ಟದಲ್ಲಿದ್ದರೆ, ಜೀವಶಾಸ್ತ್ರ ವಿಭಾಗದ ಪ್ರಶ್ನೆಗಳು ಸುಲಭವಾಗಿದ್ದರೂ ಅವುಗಳನ್ನು ಅರ್ಥೈಸಿ ಉತ್ತರಿಸಲು ಹೆಚ್ಚಿನ ಸಮಯ ಕೇಳುತ್ತಿತ್ತು ಎಂದು ವಿದ್ಯಾರ್ಥಿಗಳು ತಿಳಿಸಿದರು.

ಒಟ್ಟಾರೆ ಮೇ 3ರಂದು ನಡೆದಿದ್ದ ಪರೀಕ್ಷೆಗಿಂತ ಈ ಬಾರಿಯ ಮರುಪರೀಕ್ಷೆ ಹೆಚ್ಚು ಸವಾಲಿನಿಂದ ಕೂಡಿತ್ತು ಎಂದು ಬಹುತೇಕ ಪರೀಕ್ಷಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ. ಕೆಲವರು ಹಿಂದಿನ ಪರೀಕ್ಷೆಯ 2, 3 ಪ್ರಶ್ನೆಗಳು ಪುನರಾವರ್ತನೆಯಾಗಿದ್ದವು ಎಂಬುದನ್ನೂ ಉಲ್ಲೇಖಿಸಿದರು.

ಹೆಚ್ಚುವರಿ 15 ನಿಮಿಷಗಳ ಕಾಲಾವಕಾಶ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಬಾರಿ ಪರೀಕ್ಷೆಯ ಅವಧಿಯನ್ನು 15 ನಿಮಿಷಗಳ ಕಾಲ ವಿಸ್ತರಿಸಲಾಗಿತ್ತು. ಮಧ್ಯಾಹ್ನ 2 ಗಂಟೆಗೆ ಆರಂಭವಾದ ಪರೀಕ್ಷೆ ಸಂಜೆ 5.15 ಗಂಟೆವರೆಗೆ ನಡೆಯಿತು. ಹೆಚ್ಚುವರಿ ಸಮಯದಿಂದಾಗಿ ದೀರ್ಘ ಪ್ರಶ್ನೆಗಳಿಗೆ ಉತ್ತರಿಸಲು ಸ್ವಲ್ಪ ಅನುಕೂಲವಾಯಿತು ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.


ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್.ಸೋಮನಾಥನ್ ಇಂಗಿತ

ಯೋಗ ಜಗತ್ತಿನೊಂದಿಗೆ ಬೆಸೆಯುವ ಕೊಂಡಿ

• **ಬೆಂಗಳೂರು:** ಯೋಗ ಎಂಬುದು ಕೇವಲ ದೈಹಿಕ ಭಂಗಿ ಅಥವಾ ಆಸನಗಳಿಗೆ ಸೀಮಿತವಾದುದಲ್ಲ, ಅದು ನಮ್ಮ ಒಳಮನಸ್ಸನ್ನು ಜಗತ್ತಿನೊಂದಿಗೆ ಬೆಸೆಯುವ ಕೊಂಡಿ ಹಾಗೂ ಜಾಗತಿಕ ಮಟ್ಟಕ್ಕೆ ಭಾರತ ನೀಡಿರುವ ಅತ್ಯುನ್ನತ ಕೊಡುಗೆಯಾಗಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್.ಸೋಮನಾಥನ್ ಹೇಳಿದರು.

ವಿಶ್ವ ಯೋಗದಿನದ ಅಂಗವಾಗಿ ರಾಷ್ಟ್ರೋತ್ಥಾನ ಪರಿಷತ್ ಸಭಾಂಗಣದಲ್ಲಿ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಯೋಗ ಎಂಬುದು ಒಂದು ಜಾಗತಿಕ ಆಂದೋಲನವಾಗಿ ಮಾರ್ಪಟ್ಟಿದೆ. ಜಗತ್ತಿನಾದ್ಯಂತ ನಡೆಯುತ್ತಿರುವ ಈ ಮಹತ್ತರ ಚಳವಳಿಯಲ್ಲಿ ನಾವೆಲ್ಲರೂ ಭಾಗಿಯಾಗಿರುವುದು ಹೆಮ್ಮೆಯ ಸಂಗತಿ. ಭಾರತವು ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಜಗತ್ತಿಗೆ ನೀಡಿದ ಅತ್ಯಂತ ದೊಡ್ಡ ಕೊಡುಗೆ ಎಂದರೆ ಯೋಗ ಎಂದು ಬಣ್ಣಿಸಿದರು.

ಸದೃಢ ಮನಸ್ಸಿಗೆ ಯೋಗದ ಆಸರೆ: ಯೋಗ ವನ್ನು ದಿನನಿತ್ಯದ ಬದುಕಿನಲ್ಲಿ ಶಿಸ್ತಿನಿಂದ ಅಳವಡಿಸಿಕೊಂಡರೆ, ಮಾನಸಿಕ ಒತ್ತಡಗಳನ್ನು ಗೆಲ್ಲಬಹುದಾಗಿದೆ. ಯೋಗದ ಮಹತ್ವ ಅರಿತು ಇದರಿಂದ ವಿಶ್ವದಲ್ಲೇ ಮಾದರಿಯಾಗಲು ಸಾಧ್ಯ ಎಂದರು. ಭಾರತವು ಜಾಗತಿಕವಾಗಿ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಲು ಯೋಗದಂತಹ ನಮ್ಮ ಪ್ರಮುಖ ಕಾರಣವಾಗಿದೆ. ಧರ್ಮ, ಪ್ರಾದೇಶಿಕತೆಗಳನ್ನು ಮೀರಿ ಜಗತ್ತಿನ ಪ್ರತಿಯೊಬ್ಬರನ್ನು ಬೆಸೆಯುವ ವಿಶಿಷ್ಟ ಶಕ್ತಿ ಯೋಗಕ್ಕಿದೆ ಎಂದು ಹೇಳಿದರು.



ರಾಷ್ಟ್ರೋತ್ಥಾನ ಪರಿಷತ್ತು ವತಿಯಿಂದ ಬೆಂಗಳೂರಿನ 26 ಕಡೆಗಳಲ್ಲಿ ಪ್ರತಿನಿತ್ಯ 4,000 ಕ್ಕೂ ಹೆಚ್ಚು ಜನರು ಯೋಗಾಭ್ಯಾಸ ಮಾಡುತ್ತಿದ್ದಾರೆ.
■ **ನಾ. ದಿನೇಶ್ ಹೆಗ್ಡೆ**, ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ

ವಿಶ್ವದ ಪ್ರತಿಯೊಬ್ಬರನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ರೂಪಿಸುವಲ್ಲಿ ಭಾರತದ ಮೂಲ ಆದರ್ಶವಾಗಿದೆ. ಮನುಷ್ಯ ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕವಾಗಿ ಬೆಳೆಯಬೇಕು. ಆಧುನಿಕ ಜೀವನಶೈಲಿಯ ತೊಂದರೆಗಳಿಗೆ ಪ್ರಾಚೀನ ಭಾರತೀಯ ಪರಂಪರೆಯು ಜಗತ್ತಿಗೆ ನೀಡಿದ ಯೋಗ ಅತ್ಯುತ್ತಮ ಪರಿಹಾರವಾಗಿದೆ. ನಿತ್ಯವಾಗಿ ಅಭ್ಯಾಸ ಮಾಡುವುದರಿಂದ ಆಯುಷ್ಯ ಕ್ಷೀಣಿಸುತ್ತದೆ ಎಂದು ತಿಳಿಸಿದರು.

ಯೋಗ ಆರೋಗ್ಯಕರ

• **ಬೆಂಗಳೂರು:** ಯೋಗವು ಆರೋಗ್ಯಕರ ವ್ಯಾಸ್ಯಾಂಕ್ಕೆ ಮಾತ್ರವಲ್ಲ, ಶಾಶ್ವತ ಯೌವನದತ್ತ ಕೊಂಡೊಯ್ಯುವ ಜೀವಶಕ್ತಿಯಾಗಿದೆ ಎಂದು ಪದ್ಮಶ್ರೀ ಡಾ. ಬಿ.ಎನ್.ಗಂಗಾಧರ್ ತಿಳಿಸಿದರು.



ರಾಷ್ಟ್ರೋತ್ಥಾನ ವತಿಯಿಂದ ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆಯಲ್ಲಿ ಮಾತನಾಡಿ, ಯೋಗ ಭ್ಯಾಸದ ವೇಳೆ ಒಂದಾದ ಜನದ ಹರೆಯಾದವರ ಕುರಿತು ನಡೆದ ಸಂಶೋಧನೆಗಳನ್ನು ಉಲ್ಲೇಖಿಸಿದ ಡಾ. ಗಂಗಾಧರ್, ವಿಶೇಷ ಎಂಆರ್‌ಐ ತಂತ್ರಜ್ಞಾನದ ಮೂಲಕ ನಡೆದ ಅಧ್ಯಯನದಲ್ಲಿ ಒಂದರ ಜನ ಮಾಡುವಾಗ ಭಾವನೆಗಳನ್ನು ನಿಯಂತ್ರಿಸುವ ಲಿಂಬಿಕ್ ವ್ಯವಸ್ಥೆಯ ಚಟುವಟಿಕೆ ಕಡಿಮೆಯಾಗುವುದು ಕಂಡುಬಂದಿದೆ ಎಂದರು. ರಾಷ್ಟ್ರೋತ್ಥಾನ ಪರಿಷತ್‌ನ ಪಿ.ಆಚಂಚಿ ನಾರಾಯಣ ಕೆ.ಎಸ್. ಹಾಗೂ ಯೋಗ ಪಟುಗಳು, ಯೋಗಾಭ್ಯಾಸಿಗಳು ಇದ್ದರು.

ಬದುಕನ್ನು ಗೆದ್ದವರು...

▸ **ಗಿರಿಧರ್‌ಉದ್ಯಾವರ**



ದೂರವಾಣಿಯಲ್ಲಿ ದನಿಯೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ ಮತ್ತು ಕೃಷ್ಣಮಾಚಾರಿಕೆಗೆ ಆ ಬಂಗಾಳಿ ಬಾಬು ಯಾರು ಎಂಬುದೇ ಅಂದಾಜಾಗುತ್ತಿರಲಿಲ್ಲ. ಸಿರಿಗುಡಿಯ ಯಾರೋ ವಿಶಾಲ ಚಕ್ರವರ್ತಿ ತಮ್ಮ ಮಗನ ವಿವಾಹಕ್ಕೆ ನನಗೇಕೆ ವಿಮಾನದ ಟಿಕೆಟ್ ಕಳುಹಿಸಿದ್ದಾರೆ ಎಂಬ ಗೊಂದಲ ಅವರದು!

ಅದು ಸುಮಾರು 20 ವರ್ಷಗಳ ಹಿಂದಿನ ಕಥೆ. ಅಂದು ಇದೇ ವಿಶಾಲ ಚಕ್ರವರ್ತಿ ತಮ್ಮ ಮಗನನ್ನು ಉಳ್ಳಿಸಿದ್ದ ಕಾಯಿಲೆಯ ಚಿಕಿತ್ಸೆಗಾಗಿ ಮುಂಬಯಿಯ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಕರೆತಂದಿದ್ದರು. ಆಗ ಅವರ ಕುಟುಂಬದ ವಸತಿಗೆ ನಾನಾ ಪಾಲ್ವರ್ ಸ್ಮೃತಿ ಸಮಿತಿಯ ರುಗ್ಣಸೇವಾ ಸದನದಲ್ಲಿ ಉಳಿಯುವ ವ್ಯವಸ್ಥೆ. ಆಗ ಆ ಸಮಿತಿಯ ಪ್ರಬಂಧಕರಾಗಿದ್ದವರು ಸಂಘದ ಸ್ವಯಂಸೇವಕ ಕೃಷ್ಣಮಾಚಾರಿಕ್.

ಅಲ್ಲಿಗೆ ಬರುತ್ತಿದ್ದ ನೂರಾರು ಕುಟುಂಬಗಳಂತೆಯೇ ಈ ಬಂಗಾಳಿ ಮಧ್ಯಮವರ್ಗದ ಕುಟುಂಬದವರಿಗೂ ಉಚಿತ ವಸತಿ ಮತ್ತು ವಸತಿಯ ಜೊತೆಯಲ್ಲಿ ಉಳಿದೆಲ್ಲ ತರಹದ ಸಹಾಯವೂ ದೊರೆತಿತ್ತು. 5 ವರ್ಷ ವಯಸ್ಸಿನ ವಿದುರನ್ ಗಬ್ಬೀಶವಾದ ರಕ್ತದ ಕ್ಯಾನ್ಸರಿನಿಂದ ಬಳಲುತ್ತಿದ್ದ. ಬಳಲುವವರಲ್ಲಿ ಬಕ್ಕತ್ತ ಒಬ್ಬರು ಮಾತ್ರ ಬದುಕುಳಿಯುವ ಸಾಧ್ಯತೆ ಇರುವ ಕ್ಯಾನ್ಸರ್ ಹೊಂದಿದ್ದ ಈ ಹೆಮ್ಮಾರಿಯನ್ನು ಹೊಡೆದೋಡಿಸಲು ಬೋನ್ ಮ್ಯಾರೋ ಟ್ರಾನ್ಸ್ ಪ್ಲ್ಯಾಂಟೇಶನ್ ಅನಿವಾರ್ಯವಿತ್ತು. 1997ರಲ್ಲಿ ವೈದ್ಯರು ಹೇಳಿದ್ದ 13 ಲಕ್ಷ ರೂಪಾಯಿಗಳನ್ನು ಹೊಂದಿಸುವುದೂ ಆ ಕುಟುಂಬದ ಕಲ್ಪನೆಗೂ ಮೀರಿದ್ದಾಗಿತ್ತು. ಆಗ ಮುಂಬಯಿಯ ನಾನಾ ಪಾಲ್ವರ್ ಸ್ಮೃತಿ ಸಮಿತಿಯ ಈ ಪರಿವಾರಕ್ಕೆ ಸಹಾಯ ಮಾಡುವ ಹೊಣೆ ಹೊತ್ತಿತ್ತು.

ಇಂದು IIT ಯಿಂದ ಇಂಜಿನಿಯರ್ ಪದವಿ ಪಡೆದಿರುವ ವಿದುರನ್ ತನಗೆ ಪುನರ್ಜನ್ಮ ನೀಡಿದ್ದ ಕೃಷ್ಣ ಚಾಚಾರನ್ನು ಮರೆತಿರಲಿಲ್ಲ, ಅದಕ್ಕೆಂದೇ, ವಿಶಾಲ ಚಕ್ರವರ್ತಿಯವರು ತಮ್ಮ ಮಗನ ವಿವಾಹದ ಮೊದಲ ಆಮಂತ್ರಣ ಪತ್ರಿಕೆಯನ್ನು ದೇವರ ಮುಂದಿಡದೇ, ಸಮಿತಿಯ ಕಾರ್ಯಕರ್ತರ ಮುಂದಿರಿಸಿದ್ದರು.

ವಿದುರನ್ ತರಹದ ಅದೆಷ್ಟೋ ರೋಗಿಗಳು ಕ್ಯಾನ್ಸರಿನಂತಹ ಭೀಕರ ಖಾಯಿಲೆಯ ಚಿಕಿತ್ಸೆಗಾಗಿ ಟಾಟಾ ಮೆಮೋರಿಯಲ್ ಆಸ್ಪತ್ರೆಗೆ ಬಂದವರೆಲ್ಲ, ನಾನಾ ಪಾಲ್ವರ್ ರುಗ್ಣ ಸೇವಾ ಸದನಕ್ಕೆ ಅವುಗೆಲ್ಲಾ ಮನೆ ಹಾಗೂ ಸಮಿತಿಯ ಸದಸ್ಯರೇ ಅವರ ಬಂಧುಗಳು. ರೋಗಿಗಳಿಗಾಗಿ ಮತ್ತು ಅವರನ್ನು ನೋಡಿಕೊಳ್ಳುವವರಿಗಾಗಿ ಒಂದು ತಿಂಗಳವರೆಗೆ 5 ರೂಪಾಯಿಯ ತಿಂಡಿ ಹಾಗೂ 10 ರೂಪಾಯಿಯ ಊಟ ಮಾತ್ರವಲ್ಲದೆ ಉಚಿತ ವಸತಿ ಸೌಲಭ್ಯವನ್ನೂ ಸಮಿತಿ ಕಲ್ಪಿಸುತ್ತದೆ. 1968ರಲ್ಲಿ ಕೆಲವೇ ಕೋಣೆಗಳಿಂದ ಪ್ರಾರಂಭವಾದ ಈ ಸಮಿತಿ ಇಂದು ಹತ್ತು ಅಂತಸ್ತಿನ ಕಟ್ಟಡವಾಗಿ ಬೆಳೆದಿದೆ. ಇದರಲ್ಲಿ ಇಂದು ಡಯಾಲಿಸಿಸ್ ಪ್ರಾಥಾಣಿಕ ಲ್ಯಾಬ್, 14 ಡಯಾಲಿಸಿಸ್ ಯಂತ್ರಗಳು, ಚಿಟ ಚಿಕಿತ್ಸಾ ಕೇಂದ್ರ, ಯೋಗ ಪ್ರಶಿಕ್ಷಣ ಕೇಂದ್ರ, ಆಯುಲ್ಲೆನ್ಸ್ ಸೇವೆ ಹಾಗೂ ಚಿಕಿತ್ಸಾ ಕೇಂದ್ರಗಳೆಲ್ಲ ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ.

ಅಂದು ತಂದೆ ತಾಯಿಯ ಒಬ್ಬನೇ ಮಗನಾದ ವಿದುರನ್ ಚಕ್ರವರ್ತಿಯ ಚಿಕಿತ್ಸೆಗಾಗಿ, ಬೋನ್ ಮ್ಯಾರೋವನ್ನು ಕೇವಲ ಒಡಹುಟ್ಟಿದವರಿಂದಲೇ ಪಡೆಯ ವಿದುರನ್ ಗೆ ಟ್ರಾನ್ಸ್ ಪ್ಲ್ಯಾಂಟ್ ಮಾಡಬೇಕಾಗಿತ್ತು. ಆಗ ವಿದುರನ್ ನ ಕುಟುಂಬಕ್ಕೆ ಸಮಿತಿಯ ಸದನವೇ ತವರು ಮನೆಯಂತಾಗಿ ಒಂಭತ್ತು ತಿಂಗಳ ಬಳಿಕ ಆಕೆ ಹೆಣ್ಣು ಮಗುವೊಂದಕ್ಕೆ ಜನ್ಮ ನೀಡಿದರು. ನಂತರವೇ ವಿದುರನ್ ನ ಚಿಕಿತ್ಸೆ ಪೂರ್ಣಗೊಂಡಿದ್ದು! ನಂತರದ ಸಮಸ್ಯೆ ಚಿಕಿತ್ಸೆಯನ್ನು ಮುಂದುವರಿಸಲು ಆಗುವ ಖರ್ಚಿನದಾಗಿತ್ತು. ಆಗ ಸಮಿತಿಯು ಮುಂದೆ ಬಂದು ಕೆಲವಾರು ಕಡೆ ನಿಂದ ಮುಖಾಂತರ ಒಟ್ಟು 2 ಲಕ್ಷ ರೂಪಾಯಿಗಳ ಸಹಾಯದೊಂದಿಗೆ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿಯವರ 4 ಲಕ್ಷ ರೂಪಾಯಿಗಳ ಉದಾರ ಧನಸಹಾಯವೂ ಬಂದು ಸೇರಿತು.

ಇಂದು ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ವಿದುರನ್ ಚಕ್ರವರ್ತಿಯ ಬಾಲ್ಯದಲ್ಲಿ ನಡೆದ ಯಶಸ್ವಿ ಶಸ್ತ್ರಚಿಕಿತ್ಸೆಯನ್ನು ವೈದ್ಯಕೀಯ ಪವಾಡವೆಂದೇ ಇಂದಿಗೂ ಅಮೆರಿಕದ ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗುತ್ತಿದೆ. ಇದೆಲ್ಲಾ ಕೇವಲ ಟಾಟಾ ಮೆಮೋರಿಯಲ್ ಆಸ್ಪತ್ರೆಯ ವೈದ್ಯರ ಪರಿಶ್ರಮದಿಂದ ಮಾತ್ರವಲ್ಲದೆ ಸಮಿತಿಯ ಕಾರ್ಯಕರ್ತರ ಸ್ನೇಹ, ಸಹಕಾರ ಹಾಗೂ ಹಾರೈಕೆಗಳಿಂದ ಸಾಧ್ಯವಾಯಿತೆಂಬ ವಿಶಾಲರ ನಂಬಿಕೆ. ಇಂತಹ ಅದೆಷ್ಟೋ ಮನಮುಟ್ಟುವ ಕಥೆಗಳಿಗೂ ರುಗ್ಣಸೇವಾ ಸದನವು ಸಾಕ್ಷಿಯಾಗಿದೆ. ಆರ್.ಎಸ್.ಎಸ್. ಪ್ರಚಾರಕರಾಗಿದ್ದ ಸ್ವರ್ಗೀಯ ನಾನಾ ಪಾಲ್ವರ್ ರವರ ನೆನಪಿನಲ್ಲಿ ರಚಿತವಾದ ಈ ರುಗ್ಣಸೇವಾ ಸದನವು ಬಡ ರೋಗಿಗಳು ಮತ್ತು ಅವರ ಮನೆ ಮಂದಿಯ ಪಾಲಿಗೆ ದೇವಾಲಯವೇ ಆಗಿಹೋಗಿದೆ. ಇತರೆಡೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಬೇಕಾಗುವ ಡಯಾಲಿಸಿಸನ್ನು ಇಲ್ಲಿ ಕೇವಲ 350 ರೂಪಾಯಿಗಳಲ್ಲಿ ಮಾಡಲಾಗುತ್ತಿದೆ. ಅಂತಹ 1,10,000 ಡಯಾಲಿಸಿಸ್‌ಗಳನ್ನು ಸದನದ ಡಯಾಲಿಸಿಸ್ ಸೆಂಟರಿನಲ್ಲಿ 2004ರಿಂದ 2017ರ ಇಸವಿಯವರೆಗೂ ಅವಧಿಯಲ್ಲಿ ಮಾಡಲಾಗಿದೆ. ಈ ಸಮಿತಿಯು ಮಾಸಿಕ ಅವಧಿಯಲ್ಲಿ ಲಕ್ಷ ರೂಪಾಯಿಗಳನ್ನು ವಿವಿಧ ಚಿಕಿತ್ಸಾ ಕೇಂದ್ರಗಳಲ್ಲಿ ರುಜು ಆನಾರೋಗ್ಯ ಪೀಡಿತರ ಶಸ್ತ್ರಚಿಕಿತ್ಸೆ ಇತ್ಯಾದಿಗಳಿಗಾಗಿ ವ್ಯಯಿಸುತ್ತಿದೆ. ವಾಡಿಯ ಆಸ್ಪತ್ರೆಯಲ್ಲಿ ದಾಖಲಾಗಿರುವ ಹಲವರಿಗೆ ಊಟದ ವ್ಯವಸ್ಥೆಯನ್ನೂ ಮಾಡಲಾಗಿದೆ. ಮುಲುಂಡದ ಯಾವುದೇ ರೋಗಿಯೂ ಚಿಕಿತ್ಸೆಯಿಂದ ವಂಚಿತನಾಗದಂತೆ ಸಮಗ್ರ ವ್ಯವಸ್ಥೆ ನಿರ್ಮಿಸುವುದು ಈ ಸಮಿತಿಯ ಗುರಿಯಾಗಿದೆ.

ಸೇವಾಗಾಥ
ಕಥೆ-10

ಸಂಪರ್ಕ- ಕೃಷ್ಣ ಮಹಾದಿಕ್,
ಮೊಬೈಲ್- 9969612553

ಕಿರುಸುದ್ದಿ

ಸರ್ಕಾರದ ಹೊಸ ಆದೇಶಕ್ಕೆ ಭಾರತ ಶಿಕ್ಷಣ ಉಳಿಸಿ ಸಮಿತಿ ವಿರೋಧ

• **ದಾವಣಗೆರೆ:** ರಾಜ್ಯ ಸರ್ಕಾರವು ಪದವಿಪೂರ್ವ ಉಪನ್ಯಾಸಕರು ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಬೋಧಿಸಬೇಕೆಂಬ ಆದೇಶ ಹೊರಡಿಸಿರುವುದು ಅತ್ಯಂತ ಅವೈಜ್ಞಾನಿಕ ಮತ್ತು ಶಿಕ್ಷಣ ವಿರೋಧಿ ನಿಲುವಾಗಿದೆ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಟೀಕಿಸಿದೆ.

ಸರ್ಕಾರದ ಹೊಸ ಆದೇಶದಿಂದ ಶಿಕ್ಷಣದ ಮೂಲ ಸ್ವರೂಪಕ್ಕೆ ಧಕ್ಕೆಯಾಗುತ್ತದೆ. 10ನೇ ತರಗತಿ ನಂತರದ ವಿದ್ಯಾರ್ಥಿಗಳನ್ನು ಶಾಲಾ ಮಕ್ಕಳೊಂದಿಗೆ ಸೇರಿಸುವುದು ಪ್ರತಿಕೂಲ ಪರಿಣಾಮ ಬೀರುತ್ತದೆ. 10ನೇ ತರಗತಿವರೆಗಿನ ಬೋಧನಾ ವಿಧಾನ ಮತ್ತು ಪಿಯು ಹಂತದ ಶಿಕ್ಷಣ ಸಂಪೂರ್ಣ ಭಿನ್ನವಾಗಿರುವುದರಿಂದ ಶಿಕ್ಷಣದ ಗುಣಮಟ್ಟ ಕುಸಿಯುತ್ತದೆ. ಪ್ರೌಢಶಾಲಾ ಶಿಕ್ಷಕರ ನೇಮಕಾತಿಯನ್ನು ಶಾಶ್ವತವಾಗಿ ನಿಲ್ಲಿಸುವ ಜೊತೆಗೆ ಸಾವಿರಾರು ಅತಿಥಿ ಉಪನ್ಯಾಸಕರನ್ನು ಬೀದಿಪಾಲು ಮಾಡುವುದು ಸರ್ಕಾರದ ಹುನ್ನಾರವಾಗಿದೆ. ಹೀಗಾಗಿಯೇ ಪಿಯು ಉಪನ್ಯಾಸಕರ ಬೋಧನಾ ಅವಧಿಯನ್ನು 16ರಿಂದ 20 ಗಂಟೆಗೆ ಹೆಚ್ಚಿಸುವ ಜೊತೆಗೆ ಶಾಲಾ ಶಿಕ್ಷಣ ಬೋಧನೆಯ ಹೊಣೆ ಹೊರಿಸಲಾಗಿದೆ. ಸರ್ಕಾರವು ಈ ಕೂಡಲೇ ತನ್ನ ಜನವಿರೋಧಿ ನಿರ್ಧಾರವನ್ನು ಹಿಂಪಡೆಯಬೇಕು. ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ ಬದಲು ಹಾಲಿ ಇರುವ ಮೂಲಸೌಕರ್ಯ ನಾಶಪಡಿಸುವ ಇಂತಹ ಅವೈಜ್ಞಾನಿಕ ತಿದ್ದುಪಡಿಗಳನ್ನು ಸರ್ಕಾರ ತಕ್ಷಣ ಕೈಬಿಡಬೇಕೆಂದು ಸಮಿತಿಯ ಜಿಲ್ಲಾ ಸಂಚಾಲಕ ತಿಪ್ಪೇಸ್ವಾಮಿ ಅಣಬೇರು ಒತ್ತಾಯಿಸಿದ್ದಾರೆ.

ಯೋಗ ದಿನಾಚರಣೆ

ದಾವಣಗೆರೆ: ನಗರದ ಎಂ.ಬಿ ವಿಂಗ್ಸ್ ಪ್ರೀ ಸ್ಕೂಲ್‌ನಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಬಗ್ಗೆ ತಿಳಿಸಿಕೊಡಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಯೋಗಗುರು ನೀಲಪ್ಪ ಮಾತನಾಡಿ, ಯೋಗದ ಮಹತ್ವ ಹಾಗೂ ಅದರ ಆರೋಗ್ಯಕರ ಪ್ರಯೋಜನಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಹಲವು ಯೋಗಾಸನಗಳನ್ನು ಪ್ರಾತ್ಯಕ್ಷಿಕೆ ಮಾಡಿಸಿದರು. ಸಂಸ್ಥೆಯ ನಿರ್ದೇಶಕ ಲಕ್ಷ್ಮಿ ಶೆಟ್ಟಿ ಸೇರಿದಂತೆ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆಯಲ್ಲಿ ವಿಶ್ವ ಯೋಗ ದಿನಾಚರಣೆ

• **ಚಿಕ್ಕಮಗಳೂರು:** ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಜಿಲ್ಲಾ ಸಮಿತಿ ಹಾಗೂ ಎಸ್‌ಡಿಎಂ ಯೋಗ ಶಾಖೆ ಚಿಕ್ಕಮಗಳೂರು ಇವರ ಸಹಯೋಗದಲ್ಲಿ ಶನಿವಾರ ವಿಶ್ವ ಯೋಗ ದಿನಾಚರಣೆಯನ್ನು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆಯಲ್ಲಿ ಆಚರಿಸಲಾಯಿತು.

ಉಪನ್ಯಾಸಕರು ಮತ್ತು ಅಭಾಸಾಪದ ಮಕ್ಕಳ ಪ್ರಕಾರದ ಪ್ರಮುಖ್ ಆದ ಕುಮಾರಸ್ವಾಮಿ ಮಾತನಾಡಿ, ಈ ವರ್ಷದ ವಿಶ್ವಸಂಸ್ಥೆಯ ಘೋಷಣೆ ಆರೋಗ್ಯಪೂರ್ಣ ವೃದ್ಧಾಪ್ಯಕ್ಕಾಗಿ ಯೋಗ ಎಂಬುದಾಗಿದ್ದು, ಎಲ್ಲರೂ ವೃದ್ಧಾಪ್ಯದೆಡೆಗೆ ಹೆಜ್ಜೆ ಹಾಕುತ್ತಿದ್ದೇವೆ. ಆದರೆ ವೃದ್ಧಾಪ್ಯದಲ್ಲೂ ಆರೋಗ್ಯವಂತರಾಗಿರಲು ಯೋಗ ಅತ್ಯಗತ್ಯ, ಯೋಗ ಭಾರತೀಯರ ಕೊಡುಗೆಯಾಗಿದ್ದು, ಇಂದು ಇಡೀ ವಿಶ್ವವೇ ಯೋಗಕ್ಕೆ ಮಾನ್ಯತೆಯನ್ನು ನೀಡಿದೆ ಎಂದರು.

ಅಭಾಸಾಪ ಜಿಲ್ಲಾ ಕಾರ್ಯದರ್ಶಿ ಪ್ರಕಾಶ್ ಹೊಳೆಹೊನ್ನೂರು ಮಾತನಾಡಿ ಯೋಗವು ಮನುಷ್ಯನ ದೈಹಿಕ ಮತ್ತು ಮಾನಸಿಕ ಸಮತೋಲನವನ್ನು ಕಾಪಾಡುತ್ತದೆ, ಇದನ್ನು ಜೀವನ ಶೈಲಿಯನ್ನಾಗಿ ಅಳವಡಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಸುಮಾರು 15ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿ ಯೋಗಾಭ್ಯಾಸ ನಡೆಸಿದರು. ಆಸ್ಪತ್ರೆಯ ವ್ಯವಸ್ಥಾಪಕ ರೇಣುಕುಮಾರ್ ಕಾರ್ಯ ಕ್ರಮವನ್ನು ನಿರೂಪಿಸಿ, ಯೋಗ ತರಬೇತುದಾರರಾದ ಜಗದೀಶ್ ವಂದಿಸಿದರು.



ಪ್ರೋತ್ಸಾಹ ಸೌಲಭ್ಯ ವಿತರಿಸಿದ ಚಿತ್ರದುರ್ಗ ಸಂಸದ ಗೋವಿಂದ ಎಂ. ಕಾರಜೋಳ

ಯುವಜನರ ಸಬಲೀಕರಣಕ್ಕೆ ಕೇಂದ್ರ ಸರ್ಕಾರ ಬದ್ಧ

• **ಚಿತ್ರದುರ್ಗ:** ಯುವಜನತೆಗೆ ಕೇವಲ ಉದ್ಯೋಗದ ಅವಕಾಶ ನೀಡದೆ, ಅವರ ಕೈಗಳಿಗೆ ನೇರವಾದ ಶಕ್ತಿ ತುಂಬುವುದು ಪ್ರಧಾನ ಮಂತ್ರಿ ವಿಕಸಿತ ಭಾರತ ರೋಜ್‌ಗಾರ್ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಯುವಜನರ ಸಬಲೀಕರಣಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಸಂಸದ ಗೋವಿಂದ ಎಂ. ಕಾರಜೋಳ ಹೇಳಿದರು.

ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಇಪಿಎಫ್‌ಒ ಪ್ರಾದೇಶಿಕ ಕಚೇರಿ ಬಳ್ಳಾರಿ ವತಿಯಿಂದ, ನಗರದ ಎಸ್‌ಜೆಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಸಿವಿಲ್ ವಿಭಾಗದ ಸರ್. ಎಂ.ವಿ. ಸೆಮಿನಾರ್ ಹಾಲ್‌ನಲ್ಲಿ ಇತ್ತೀಚೆಗೆ ಪ್ರಧಾನ ಮಂತ್ರಿ ವಿಕಸಿತ ಭಾರತ ರೋಜ್‌ಗಾರ್ ಯೋಜನೆ ಫಲಾನುಭವಿಗಳಿಗೆ ಪ್ರೋತ್ಸಾಹ ಸೌಲಭ್ಯಗಳ ವಿತರಿಸಿ ಮಾತನಾಡಿದರು.

ಯುವಕರಿಗೆ ಮತ್ತು ಉದ್ಯೋಗದಾತ ಕಂಪನಿಗಳಿಗೆ ಉತ್ತೇಜನ ನೀಡಲು ಸರ್ಕಾರ ಈ ಯೋಜನೆ ರೂಪಿಸಿದೆ. ಹೊಸದಾಗಿ ಉದ್ಯೋಗ ಪಡೆಯುವ ಯುವಕರಿಗೆ ಆರು ತಿಂಗಳ ಅಂತರದಲ್ಲಿ ಎರಡು ಕಂತುಗಳಲ್ಲಿ ಒಟ್ಟು ರೂ.15,000 ಪ್ರೋತ್ಸಾಹ ಧನ ನೀಡಲಾಗುತ್ತದೆ. ಹಳ್ಳಿಯಿಂದ ಓದು ಮುಗಿಸಿ ಉದ್ಯೋಗ ಹುಡುಕಿಕೊಂಡು ಮೊದಲ ಬಾರಿಗೆ ಪಟ್ಟಣಗಳಿಗೆ ವಲಸೆ ಹೋಗುವ ಯುವಕರಿಗೆ ಮೊದಲ ತಿಂಗಳು ಸಂಬಳ ಇರುವುದಿಲ್ಲ, ಅಂತಹವರಿಗೆ ನೆರವಾಗಲು ಮೊದಲ ಸರ್ಕಾರ ಮೊದಲ ತಿಂಗಳ ಖರ್ಚು-ವೆಚ್ಚಕ್ಕಾಗಿ ಅವರ ಖಾತೆಗೆ ರೂ.15,000 ಜಮಾ ಮಾಡಲಿದೆ ಎಂದರು.

ಇದರೊಂದಿಗೆ ಹೊಸ ಉದ್ಯೋಗಿಗಳಿಗೆ ಕೆಲಸ ನೀಡುವ ಕಂಪನಿಗಳಿಗೆ ಎರಡು ವರ್ಷಗಳ ಅವಧಿಗೆ ಪ್ರತಿ ತಿಂಗಳು ಕನಿಷ್ಠ ರೂ.3,000 ಪ್ರೋತ್ಸಾಹ ಧನವನ್ನು ಸರ್ಕಾರ ನೀಡಲಿದೆ. ಈ ಮಹತ್ವಾಕಾಂಕ್ಷೆಯ ಯೋಜನೆಗಾಗಿ ಕೇಂದ್ರ ಸರ್ಕಾರ ರೂ.99,446 ಕೋಟಿ ಹಣವನ್ನು ಮೀಸಲಿಟ್ಟಿದೆ. 2027ರ ಅಂತ್ಯದ ವೇಳೆಗೆ ದೇಶದಲ್ಲಿ 3.5 ಕೋಟಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ. ಈ ಯೋಜನೆ ಆರಂಭವಾದಾಗಿನಿಂದ ಇದುವರೆಗೆ ಸುಮಾರು 15 ಲಕ್ಷ ಉದ್ಯೋಗಗಳನ್ನು ಒದಗಿಸಲಾಗಿದೆ ಎಂದು ಹೇಳಿದರು.

ಎಸ್‌ಜೆಎಂ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಬಿ.ಗುಡಸಿ ಮಾತನಾಡಿ, ಎಂಎ-ವಿಬಿಜಿ ವೈ ಅಡಿ ಉದ್ಯೋಗದಾತರಿಗೂ ಮತ್ತು ಉದ್ಯೋಗಿಗಳಿಗೆ ಇಬ್ಬರಿಗೂ ಪ್ರೋತ್ಸಾಹಧನ ಸಿಗುವಂತೆ ಕಾರ್ಯಕ್ರಮ ರೂಪಿಸಲಾಗಿದೆ. ಉತ್ಪಾದನಾ ವಲಯಗಳಲ್ಲಿ ಉತ್ತಮ ಮತ್ತು ನುರಿತ ಉದ್ಯೋಗಗಳು ದೊರೆತರೆ ಆ ಸಂಸ್ಥೆಯ ಉತ್ಪಾದಕತೆ ಹೆಚ್ಚಾಗುತ್ತದೆ ಎಂದರು.

ಎಸ್‌ಜೆಎಂಐಟಿ ಪ್ರಾಂಶುಪಾಲ ಡಾ.ಪಿ.ಬಿ. ಭರತ್, ಇಪಿಎಫ್‌ಒ ವಲಯ ಆಯುಕ್ತ ಹೆಂಸರಾಜ್, ಬಳ್ಳಾರಿ ವಲಯ ಕಚೇರಿ ಪಿ.ರವಿಕೃಷ್ಣ, ಚಿನ್ನವೀರಣ್ಣ, ಮಹಮದ್ ಶಫಿ, ಜಲಶಕ್ತಿ ದೇವರಾಜ ರೆಡ್ಡಿ ಮತ್ತಿತರರಿದ್ದರು.



ಕೇಂದ್ರ ಸರ್ಕಾರ ಬೆನ್ನಿಗೆ ನಿಲ್ಲಲಿದೆ..
ಜಿಲ್ಲೆಯ ಉದ್ಯಮಿಗಳು, ಸಣ್ಣ ಕೈಗಾರಿಕೆಗಳ ಮಾಲೀಕರು ಮತ್ತು ಸಹೋದ್ಯಮಿಗಳು ತಮ್ಮ ಉದ್ಯೋಗಗಳನ್ನು ವಿಸ್ತರಿಸಿ, ನಮ್ಮ ಜಿಲ್ಲೆಯ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶ ನೀಡಬೇಕು. ಕೇಂದ್ರ ಸರ್ಕಾರ ಸದಾ ನಿಮ್ಮ ಬೆನ್ನಿಗೆ ನಿಲ್ಲಲಿದೆ ಎಂದು ಭರವಸೆ ನೀಡಿದರು.

ವಿದ್ಯಾರ್ಥಿಗಳು ಅನ್ವೇಷಿಸುವ ಗುಣ ಬೆಳೆಸಿಕೊಳ್ಳಿ: ಮಲ್ಲಿಕಾರ್ಜುನಪ್ಪ

• **ಚಿತ್ರದುರ್ಗ:** ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಹೊಸವಿನಿಂದ ನಮಗೆ ಉಪಕಾರಿಯಾಗಬೇಕೇ ವಿನಃ ನಿಯಂತ್ರಣಕ್ಕೆ ಸಿಗದ ಆನೆಯಾಗಬಾರದು. ಎಐ ಬಳಸದಿದ್ದರೆ ಮುಖ್ಯವಾಹಿನಿಯಿಂದ ದೂರ ಉಳಿಯ ಬೇಕಾಗುತ್ತದೆ ಎಂಬ ಆತಂಕದ ಬದಲು, ಅದನ್ನು ಜಾಗೃತವಾಗಿ ಮತ್ತು ಸಕಾರಾತ್ಮಕವಾಗಿ ಅನ್ವೇಷಿಸುವ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಸ್ಪೆಕ್ಸ್ ಫೌಂಡೇಶನ್ ಅಧ್ಯಕ್ಷ ಡಾ.ಜಿ.ಎಸ್. ಮಲ್ಲಿಕಾರ್ಜುನಪ್ಪ ಹೇಳಿದರು.

ತಾಲೂಕಿನ ಸೀಬಾರ ಗುತ್ತಿನಾಡು ಗ್ರಾಮದ ವಿಶ್ವಮಾನವ ಪದವಿ ಕಾಲೇಜಿನಲ್ಲಿ ಶನಿವಾರ ವಿಶ್ವಮಾನವ ಸಾಂಸ್ಕೃತಿಕ ಮತ್ತು ವಿದ್ಯಾಸಂಸ್ಥೆ ಹಾಗೂ ಚಿತ್ರದುರ್ಗ ಸ್ಪೆಕ್ಸ್ ಫೌಂಡೇಶನ್‌ನಿಂದ ಕೃತಕ ಬುದ್ಧಿಮತ್ತೆ (ಎಐ) ಯುಗದಲ್ಲಿ ಶೈಕ್ಷಣಿಕ ಹಾದಿ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಎಐ ಬಳಕೆಯಿಂದಾಗಿ ವಿದ್ಯಾರ್ಥಿಗಳ ಕಲಿಕೆಯ ವಿಧಾನ ಹಾಗೂ ಯೋಚನೆಯ ದೃಷ್ಟಿಕೋನದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತಿವೆ. ಯಾವುದೇ ಮಾಹಿತಿಯನ್ನು ಹುಡುಕುವುದು, ವಿಷಯಗಳನ್ನು ಗ್ರಹಿಸುವುದು ಮತ್ತು ಹೊಸ ವಿಚಾರಗಳನ್ನು ತಿಳಿದುಕೊಳ್ಳುವುದು ಇಂದು ಸುಲಭವಾಗಿದೆ. ಆದರೆ ತಂತ್ರಜ್ಞಾನದ ಸುಲಭ ಲಭ್ಯತೆಯ ನಡುವೆಯೂ ವಿದ್ಯಾರ್ಥಿಗಳು ತಮ್ಮ ಸಹಜ ಬುದ್ಧಿವಂತಿಕೆ, ಸೃಜನಶೀಲತೆ ಮತ್ತು ಸ್ವತಂತ್ರ ಚಿಂತನೆಯ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಶಿಕ್ಷಣ ಕೌಶಲ ಸಲಹೆಗಾರ ಟಿ. ದಿಲೀಪ್ ಕುಮಾರ್ ವಿಶೇಷ ಉಪನ್ಯಾಸ ನೀಡಿದರು. ಸಂಸ್ಥೆ ಕಾರ್ಯದರ್ಶಿ ಎಂ. ನೀಲಕಂಠದೇವ ಮಾತನಾಡಿದರು. ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಪೋಷಕರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲೆ ಎಚ್.ಆರ್.ಸುಧಾ, ಸಂಸ್ಥೆ ರೂವಾರಿ ಹೆಚ್.ಜಲೀಲ್‌ಸಾಬ್, ಫೌಂಡೇಶನ್ ಕಾರ್ಯದರ್ಶಿ ಹೆಚ್.ಎಸ್.ಟಿ. ಸ್ವಾಮಿ, ನಿರ್ದೇಶಕ ಈ. ರುದ್ರಮುನಿ ಭಾಗವಹಿಸಿದ್ದರು.

ಚಿತ್ರದುರ್ಗ ಕ್ಷೇತ್ರ ಅಭಿವೃದ್ಧಿ ಕಡೆಗೆ ಕೊಂಡೊಯ್ಯುವೆ: ಶಾಸಕ ಪಪ್ಪಿ

• **ಚಿತ್ರದುರ್ಗ:** ನನ್ನ ಮತ ಕ್ಷೇತ್ರದ ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದೇನೆ, ನನ್ನ ಪಾಲಿಗೆ ಬಂದ ಕೆಲಸವನ್ನು ಪ್ರಾಮಾಣಿಕವಾಗಿ ಜನರಿಗೆ ಅನುಕೂಲ ವಾಗುವಂತಹ ಅಭಿವೃದ್ಧಿ ಕೆಲಸವನ್ನು ಕ್ಷೇತ್ರದ ವಿವಿಧೆಡೆ ಮಾಡಲಾಗುತ್ತಿದೆ ಎಂದು ಶಾಸಕ ವೀರೇಂದ್ರ ಪಪ್ಪಿ ತಿಳಿಸಿದರು.

ನಗರದ ಸ್ಟಾಣೇಶ್ವರದೇವಸ್ಥಾನ ಹಾಗೂ ಸಿದ್ದಾರ್ಥ ಬಡಾವಣೆಗಳಲ್ಲಿ 1.20 ಕೋಟಿ ವೆಚ್ಚದ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ



ಬಹುತೇಕ ಹಳ್ಳಿಗಳಲ್ಲಿ ಅಭಿವೃದ್ಧಿ ಕೆಲಸಗಳು ಕಾರ್ಯೋನ್ಮುಖವಾಗಿ ಸಾಗುತ್ತಿವೆ. ಇದರ ಜೊತೆಗೆ ವಿವಿಧ ಹಳ್ಳಿಗಳಲ್ಲಿ ಭೂಮಿಪೂಜೆ ನೆರವೇರಿಸಲಾಗುತ್ತಿದೆ. ಒಟ್ಟಾರೆ ಕ್ಷೇತ್ರದ ಬಹುತೇಕ ಹಳ್ಳಿಗಳು ಕೆಸರು ಮುಕ್ತ ರಸ್ತೆಗಳನ್ನಾಗಿ ಮಾಡುವ ಗುರಿ ಹೊಂದಿದ್ದೇವೆ. ಹಾಗಾಗಿ ಹಳ್ಳಿಗಳ ಅಭಿವೃದ್ಧಿಗಾಗಿ ಸಿ.ಸಿ ರಸ್ತೆ ವಿದ್ಯುತ್ ದೀಪ ಕುಡಿಯುವ ನೀರಿನ ವ್ಯವಸ್ಥೆಗೆ ಅನಾನು ಕೂಲವಾಗದಂತೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನಗರಾಭಿವೃದ್ಧಿ ಮಾಜಿ ಸದಸ್ಯ ಪಾರೆಕ್ಷ್ವರಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರೆಂಟಿ ಸಮಿತಿ ಜಿಲ್ಲಾಧ್ಯಕ್ಷ ಶಿವಣ್ಣ, ಕೆಡಿಪಿ ಸದಸ್ಯರಾದ ಸಂತೋಷ್ ನಾಗರಾಜ್, ಕೆಆರ್‌ಐಡಿಎಲ್ ಎಇಇ ಇಂಜಿನಿಯರ್ ಉಮೇಶ್ ಕೆ.ಆರ್, ಸಹಾಯಕ ಇಂಜಿನಿಯರ್ ಶರತ್, ಮುಖಂಡರಾದ ಮಹೇಶ್ ಇದ್ದರು.

ಪ್ರಾಚೀನ ಭಾರತೀಯ ಜೀವನ ಪದ್ಧತಿ ಯೋಗ



• **ಹರಿಹರ:** ಯೋಗವು ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನ ಸಾಧಿಸುವ ಪ್ರಾಚೀನ ಭಾರತೀಯ ಜೀವನ ಪದ್ಧತಿಯಾಗಿದೆಯೆಂದು ಶಾಸಕ ಬಿ.ಪಿ ಹರೀಶ್ ಅಭಿಮತ ವ್ಯಕ್ತಪಡಿಸಿದರು.

ರಾಘವೇಂದ್ರ ಸ್ವಾಮಿ ಮಠ ಹಿಂಭಾಗ ನದಿ ತೀರದ ತುಂಗಭದ್ರಾರತಿ ಕಾರಿಡಾರ್ ನಲ್ಲಿ ತಾಲ್ಲೂಕು ಆಡಳಿತ, ಶಾಲಾ ಶಿಕ್ಷಣ ಇಲಾಖೆ, ನಗರಸಭೆ ವತಿಯಿಂದ ಆಯೋಜಿಸಿದ್ದ ಯೋಗ ದಿನಾಚರಣೆ ಪ್ರಯುಕ್ತ ಯೋಗ ಸಂಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅಂತರಾಷ್ಟ್ರೀಯ ಯೋಗ ದಿನವನ್ನು ಪ್ರತಿವರ್ಷ ಜೂನ್ 21ರಂದು ಆಚರಿಸಲಾಗುತ್ತದೆ. ಭಾರತದ ಪ್ರಸ್ತಾವನೆಯ ಮೇರೆಗೆ 2014ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ವಿಶ್ವಸಂಸ್ಥೆಯಲ್ಲಿ ಈ ಕುರಿತು ಪ್ರಸ್ತಾಪಿಸಿದ ಬಳಿಕ, ವಿಶ್ವದಾದ್ಯಂತ ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದೆ ಎಂದರು. ನಿಯಮಿತ ಯೋಗಾಭ್ಯಾಸದಿಂದ ದೈಹಿಕವಾಗಿ ಆರೋಗ್ಯ ಸುಧಾರಿಸುವುದರ ಜೊತೆಗೆ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ, ಏಕಾಗ್ರತೆ ಹೆಚ್ಚುತ್ತದೆ ಹಾಗೂ ಆರೋಗ್ಯಕರ ಜೀವನಶೈಲಿ ರೂಪುಗೊಳ್ಳುತ್ತದೆ. ಯೋಗದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಸರ್ಕಾರಿ ಆಯುರ್ವೇದ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ. ಸುಚಿತ್ರಾ, ತಹಶೀಲ್ದಾರ್ ಜಿ.ಸಂತೋಷಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ದುರುಗಪ್ಪ, ಪೌರಾಯುಕ್ತ ವಿ.ಈರಪ್ಪ, ಸಿಪಿಐ ಆರ್. ಎಫ್.ದೇಸಾಯಿ, ಅರಣ್ಯ ವೃತ್ತ ನಿರೀಕ್ಷಕ ಪ್ರವೀಣ್ ವಾಲೇಕರ್, ಹನುಮಂತಪ್ಪ ಲಮಾಣಿ, ದರ್ಶಿನಿ, ಗ್ರಾಮ ಆಡಳಿತಾಧಿಕಾರಿ ಜಿ.ಎಚ್.ಹೇಮಂತ್ ಕುಮಾರ್ ಇದ್ದರು.

ವಿಶ್ವವೇ ಒಪ್ಪಿದ ಶಾಸ್ತ್ರ ಯೋಗ



• **ದಾವಣಗೆರೆ:** ನಗರದ ಆರ್ದರ್ಶ ಯೋಗ ಪ್ರತಿಷ್ಠಾನದಲ್ಲಿ ಭಾನುವಾರ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮ ನಡೆಯಿತು. ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಜಡೇಸಿದ್ಧ ಶಿವಯೋಗೀಶ್ವರ ಕಾಂತಾಶ್ರಮದ ಡಾ. ಶಿವಾನಂದ ಸ್ವಾಮೀಜಿ ಮಾತನಾಡಿ, ಯೋಗವು ಇಡೀ ವಿಶ್ವವೇ ಒಪ್ಪಿದ ಶಾಸ್ತ್ರವಾಗಿದೆ. ಇದರ ಮಹಿಮೆ ಅಪಾರವಾದುದು. ಇದರ ನಿರಂತರ ಅಭ್ಯಾಸ ಮಾಡುವುದರಿಂದ ಶರೀರ ಮತ್ತು ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು. ಇದು ಆರೋಗ್ಯ ಸಂಪಾದನೆ ಮಾಡುವ ವಿದ್ಯೆಯಾಗಿದೆ. ಹುಟ್ಟು ಸಾವಿನ ನಡುವೆ ಸಾರ್ಥಕವಾದ ಜೀವನ ನಮ್ಮದಾಗಲು ನಿತ್ಯ ಯೋಗಾಭ್ಯಾಸದಲ್ಲಿ ನಿರತರಾಗಬೇಕು ಎಂದರು.

ಗೋಂದಲದ ಗೂಡಾದ ಮನಸ್ಸನ್ನು ನಿಯಂತ್ರಿಸಲು ಧ್ಯಾನ, ಪ್ರಾಣಾಯಾಮಗಳು ಸಹಕಾರಿಯಾಗಿವೆ. ತೃಪ್ತಿ ಇಲ್ಲದ ಬದುಕು ಅನಾರೋಗ್ಯವನ್ನು ತಂದುಕೊಡುತ್ತದೆ ಎಂದರು.

ಪ್ರತಿಷ್ಠಾನದ ಡಾ.ರಾಘವೇಂದ್ರ ಗುರೂಜಿ, ರೇಣುಕಾ ಶೈಲೇಶ್, ಮಹಾಂತೇಶ ಕಲ್ಲೇಶ್, ಹಮ್ಮಿರ, ಎಂ.ನಿತಿನ್, ಎಸ್. ಚಂದ್ರ, ಹೆಚ್.ಎನ್.ಪ್ರಕಾಶ್, ವರುಣ್ ಇನ್ನಿತರರು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದರು.

ತಿಂಗಳಿಗೊಮ್ಮೆ ಆರೋಗ್ಯ ಪರೀಕ್ಷೆ ಮಾಡಿಸಿ



• **ಜಗಳೂರು:** ದಿನ ನಿತ್ಯ ಒತ್ತಡ ಜೀವನದಲ್ಲಿ ತಮ್ಮ ಆರೋಗ್ಯದ ಕಡೆ ಗಮನ ಹರಿಸದೆ ಇರುವುದು ಭವಿಷ್ಯದಲ್ಲಿ ಒಳ್ಳೆಯದಲ್ಲ, ಇಂದಿನ ಆಹಾರ ಮತ್ತು ಜೀವನ ಕ್ರಮ ಹಲವಾರು ರೋಗಗಳಿಗೆ ಕಾರಣವಾಗುತ್ತಿದೆ ಆದಕ್ಕೆ ಕನಿಷ್ಠ ತಿಂಗಳಿಗೊಮ್ಮೆ ಪರೀಕ್ಷಿಸಿಕೊಳ್ಳುವುದು ಉತ್ತಮ ಎಂದು ಸಪ್ತಗಿರಿ ಆಸ್ಪತ್ರೆಯ ಹೃದ್ರೋಗ ತಜ್ಞರಾದ ಡಾ.ನಂದಕುಮಾರ್ ಹೇಳಿದರು.

ಪಟ್ಟಣದ ಬಯಲು ರಂಗ ಮಂದಿರದ ಸಭಾಂಗಣದಲ್ಲಿ ಜೈ ಭಾರತ್ ಟ್ರಸ್ಟ್ ಹಾಗು ಬೆಂಗಳೂರು ಸಪ್ತಗಿರಿ ಆಸ್ಪತ್ರೆಯ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರ ಉದ್ಘಾಟಿಸಿ ಮಾತನಾಡಿದರು.

ನಗರ ಮತ್ತು ಗ್ರಾಮೀಣ ಪ್ರದೇಶದ ಜನ ಸಮುದಾಯಕ್ಕೆ ಉತ್ತಮ ಆರೋಗ್ಯ ಸೇವೆ ನೀಡುವ ಉದ್ದೇಶದಿಂದಲೇ ನಮ್ಮ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ. ಉಚಿತ ಆರೋಗ್ಯ ಶಿಬಿರಗಳಲ್ಲಿ ಹೃದಯರೋಗ, ಕಿಡ್ನಿ ಕೀಲು ಮೂಳೆ, ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ಅನೇಕ ಖಾಯಿಲೆಗಳಿಗೆ ಉಚಿತ ತಪಾಸಣೆ ಮಾಡಿ ಗಂಭೀರ ಪ್ರಮಾಣದ ರೋಗಿಗಳಿಗೆ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರು ಸಪ್ತಗಿರಿ ಆಸ್ಪತ್ರೆ ಕರೆದೊಯ್ದು ಸರ್ಕಾರದ ವಿವಿಧ ಆರೋಗ್ಯ ಸೇವಾ ಯೋಜನೆಗಳ ಅನುಸಾರ ಚಿಕಿತ್ಸೆ ನೀಡಲಾಗುವುದು ಎಂದರು.

ರೇಣುಕಾಂಬಾ ಅಕಾಡೆಮಿ ವಿಕಲಚೇತನ ಸಂಸ್ಥೆ ಮುಖ್ಯಸ್ಥ ರಂಗಸ್ವಾಮಿ ಮಾತನಾಡಿ, ಕಳೆದ ವಾರ ಇದೇ ಸ್ಥಳದಲ್ಲಿ ಶಂಕರ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ನಡೆಸಲಾಗಿತ್ತು ಸುಮಾರು 300 ಹೆಚ್ಚು ಜನರು ತಪಾಸಣೆ ಮಾಡಿಸಿಕೊಂಡಿದ್ದಾರೆ ಹೀಗೆ ಸಂಘ ಸಂಸ್ಥೆಗಳು ಮುಂದು ಬಂದರೆ ಸಾಮಾಜಿಕ ಕಾರ್ಯ ಮಾಡಬಹುದು ನಾಗರೀಕರು ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಮುಖಂಡ ಧನ್ಯಕುಮಾರ್, ಡಾ.ನವೀನ್ ಸೂರಜ್, ಡಾ.ಭರತ್ ಸಿಂಗ್, ಡಾ.ವಿಕಾಸ್, ಕೃಷ್ಣಪ್ಪ, ಕಿರಿಯ ಆರೋಗ್ಯಾಧಿಕಾರಿ ವೆಂಕಟೇಶ್ ನಾಯ್ಕ, ಹೆಚ್. ಮೆಹಬೂಬ್ ಅಲಿ , ಕೆಳಗೋಟೆ ಅಹಮದ್ ಅಲಿ ಇದ್ದರು.

ಬಿಜೆಪಿ ನಗರ ಮಂಡಲ ವತಿಯಿಂದ ವಿಶ್ವ ಯೋಗ ದಿನಾಚರಣೆ

• **ಚಿತ್ರದುರ್ಗ:** ಪ್ರಸ್ತುತ ದಿನಗಳಲ್ಲಿ ಮನುಷ್ಯನನ್ನು ನಾನಾ ರೀತಿಯ ರೋಗಗಳು ಬಾಧಿಸುತ್ತಿವೆ. ಇವುಗಳಿಂದ ಮುಕ್ತವಾಗಿ ಆರೋಗ್ಯಯುತ ಜೀವನ ನಡೆಸಲು ಯೋಗಾಭ್ಯಾಸ ಅಗತ್ಯ ಎಂದು ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್ ತಿಳಿಸಿದರು.

ಚಿತ್ರದುರ್ಗ ಬಿಜೆಪಿ ನಗರ ಹಾಗೂ ಗ್ರಾಮಾಂತರ ಮಂಡಲ ವತಿಯಿಂದ ಭಾನುವಾರ ಬೆಳಿಗ್ಗೆ ನಗರದ ಚಂದ್ರವಳ್ಳಿ ಆವರಣದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿನ ಆಧುನಿಕ ರೀತಿಯ ಜೀವನ ಶೈಲಿ ಹಾಗೂ ಆಹಾರ ಪದ್ಧತಿಯಿಂದ ಅನೇಕ ರೋಗಗಳು ಹರಡುತ್ತಿವೆ. ಅಲ್ಲದೇ ಇಂದಿನ ದಿನಗಳಲ್ಲಿ ಮನುಷ್ಯ ಎಲ್ಲ ಕೆಲಸಗಳಿಗೆ ಯಂತ್ರಗಳನ್ನು ಅವಲಂಬಿಸಿದ್ದಾನೆ. ಇದರಿಂದ ಹೆಚ್ಚಾಗಿ ದೈಹಿಕ ಶ್ರಮ ವ್ಯಯ ಮಾಡುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ ದೈಹಿಕ ಚಟುವಟಿಕೆ ಇಲ್ಲದಂತಾಗಿದೆ. ಹಾಗಾಗಿ ಯೋಗಾಭ್ಯಾಸ ಮಾಡುವುದು ಉತ್ತಮ. ಆ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬಹುದು ಎಂದರು.



ಈ ಸಂದರ್ಭದಲ್ಲಿ ಚಿತ್ರದುರ್ಗ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ಬಿಜೆಪಿ ವಿಭಾಗಾಧಿಕಾರಿ ಡಾ. ಕಾಂತರಾಜ್, ದಾವಣಗೆರೆ ಸಹಪ್ರಭಾರಿ ಎ.ಮುರಳಿ, ನಗರಾಧ್ಯಕ್ಷ ಹೆಚ್. ಎನ್.ರೋಹಿತ್ ಕುಮಾರ್, ಗ್ರಾಮಾಂತರ ಮಂಡಲದ ಅಧ್ಯಕ್ಷ ನಾಗರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ವೆಂಕಟೇಶ್ ಯಾದವ್, ಮೋಹನ್ ಕುಮಾರ್, ಮಾಧುರಿ ಗಿರೀಶ್ ಜಿಲ್ಲಾ ಉಪಾಧ್ಯಕ್ಷ ಲಿಂಗರಾಜು, ಜಿಲ್ಲಾ ಕಾರ್ಯದರ್ಶಿ ರೇಖಾ, ಜಿಲ್ಲಾ ವಕ್ತಾರ ನಾಗರಾಜ್ ಬೇದ್ರೆ, ಜಿಲ್ಲಾ ಎಸ್.ಸಿ. ಮೋರ್ಚಾ ಜಿಲ್ಲಾಧ್ಯಕ್ಷ ಪರಶುರಾಮ್, ನಗರ ಪ್ರಧಾನ ಕಾರ್ಯದರ್ಶಿ ಲೀಲಾವತಿ ಶಶಿಧರ್, ಬಸವೇಶ್, ಯುವ ಮೋರ್ಚಾ ನಗರಾಧ್ಯಕ್ಷ ಡಾ. ವಸಂತ್ ಅಜಾದ್, ನಗರ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಮೊಹಮ್ಮದ್ ದಸ್ತಗಿರ್, ಗ್ರಾಮಾಂತರ ಯುವ ಮೋರ್ಚಾ ಅಧ್ಯಕ್ಷ ಸಿದ್ದೇಶ್, ಯಶೋಧ, ಸುಮಾ, ಕಮಲ ಹಾಗೂ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಒತ್ತಡದ ಜೀವನಶೈಲಿ ನಿರ್ವಹಣೆಗೆ ಯೋಗ ಅವಶ್ಯ

• **ಚಿತ್ರದುರ್ಗ:** ನಗರದ ಎಸ್.ಜೆ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಲಾಗಿತ್ತು.

ಆಯುಷ್ ಯೋಗ, ಕ್ರೀಡೆ, ಸಾಂಸ್ಕೃತಿಕ, ಕ್ಷೇಮಾಭಿವೃದ್ಧಿ ಸಂಸ್ಥೆಯ ಜಿಲ್ಲಾಧ್ಯಕ್ಷ ಪ್ರಸನ್ನಕುಮಾರ್ ಮಾತನಾಡಿ, ಇಂದಿನ ಬದಲಾದ ಜೀವನ ಶೈಲಿಯಲ್ಲಿ ಮನುಷ್ಯ ಬದುಕುತ್ತಿದ್ದಾನೆ. ಇದು ಅವನ ಮನಸ್ಸಿನ ಮೇಲೆ ಒತ್ತಡ ಹಾಗೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಮಾನಸಿಕ ಒತ್ತಡದಿಂದ ಹೊರಬರಲು ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಅತ್ಯವಶ್ಯವಾಗಿದೆ ಎಂದರು.

ವಯಸ್ಸಿನ ಬೇಧವಿಲ್ಲದೆ ಎಲ್ಲಾ ವಯೋಮಾನದವರು ಯೋಗವನ್ನು ಮಾಡಬಹುದು. ಯೋಗ ನಮಗೆ ಸಿಕ್ಕರುವ ವರ. ಯೋಗ ನಮ್ಮ ಬದುಕಿನಿಂದಿನ ಭಾಗವಾಗಿ ಪರಿಗಣಿಸಿ ದಿನನಿತ್ಯ ಯೋಗಾಭ್ಯಾಸ ಮಾಡಿ ಯೋಗದ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಪ್ರಾಚಾರ್ಯ ಡಾ.ಪಿ.ಬಿ. ಭರತ್ ಮಾತನಾಡಿ, ಯೋಗ ಪ್ರಸ್ತುತ ನಮ್ಮ ದೇಶಕ್ಕಷ್ಟೇ ಸೀಮಿತವಾಗಿಲ್ಲ, ಯೋಗದ ಮಹತ್ವ ಇಡೀ ವಿಶ್ವಕ್ಕೆ ತಿಳಿದಿದ್ದು,



ವಿದೇಶಗಳಲ್ಲಿ ಯೋಗಕ್ಕೆ ನಮ್ಮ ದೇಶಕ್ಕಿಂತ ಹೆಚ್ಚಿನ ಪ್ರಾಧಾನ್ಯತೆ ನೀಡಿ ಯೋಗದ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರಿಂದ ಎಲ್ಲರೂ ವಿಶೇಷವಾಗಿ ಪ್ರಾಣಾಯಾಮಕ್ಕೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ. ಆರೋಗ್ಯಕರ, ನೆಮ್ಮದಿಯ ಬದುಕಿಗೆ ಯೋಗ ಅನಿವಾರ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಯುಷ್ ಯೋಗ ಸಂಸ್ಥೆಯ ಮಹಿಳಾ ವಿಭಾಗದ ಅಧ್ಯಕ್ಷ ನೀಲಮ್ಮ, ಉಪಾಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಎಲ್. ಬಸವರಾಜ್, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ. ಕುಮಾರಸ್ವಾಮಿ, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು, ಆಯುಷ್ ಯೋಗ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರೊ.ಆರ್.ಸುಷ್ಮಾ ಪ್ರಾರ್ಥಿಸಿ, ಪ್ರೊ.ಟಿ. ತನುಜಾ ಸ್ವಾಗತಿಸಿ, ಡಾ.ಎಸ್. ಚೇತನ್ ಕಾರ್ಯಕ್ರಮ ನಿರೂಪಿಸಿದರು.

ಕಿರುಸುದ್ದಿ

ಗಾಯಗೊಂಡಿದ್ದ ನಾಲ್ಕು ತಿಂಗಳ ಚಿರತೆ ಮರಿ ಚಿಕಿತ್ಸೆ ಫಲಕಾರಿಯಾಗದೆ ಸಾವು

• **ಸಾಗರ :** ತಾಲೂಕಿನ ಕಾರ್ಗಲ್ ವನ್ಯಜೀವಿ ವಲಯದ ಮುಪ್ಪಾನೆ ಅರಣ್ಯ ವಿಭಾಗದ ಹಾಳೆಸಾಲು ಕಳ್ಳಬೇಟೆ ನಿಗ್ರಹ ಶಿಬಿರದಲ್ಲಿ ಭಾನುವಾರ ನಾಲ್ಕು ತಿಂಗಳ ಚಿರತೆ ಮರಿಯೊಂದು ಮೃತಪಟ್ಟಿದ್ದು ತಹಸೀಲ್ದಾರ್ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಅಂತಿಮ ಸಂಸ್ಕಾರ ನಡೆಸಲಾಯಿತು. ಮುಪ್ಪಾನೆ ಅರಣ್ಯ ಗಸ್ತು ವ್ಯಾಪ್ತಿಯ ಮಂಡವಳ್ಳಿ ಗ್ರಾಮದ ಸರ್ವೆ ನಂ. 44ರಲ್ಲಿನ ಯೋಗರಾಜ್ ಎಂಬುವವರಿಗೆ ಸೇರಿದ ಅಡಿಕೆ ತೋಟದ ಸಮೀಪ ಚಿರತೆ ಮರಿಯೊಂದು ಶನಿವಾರ ಗಾಯಗೊಂಡು ಬಿದ್ದಿತ್ತು. ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಮರಿಯನ್ನು ಸುರಕ್ಷತೆ ದೃಷ್ಟಿಯಿಂದ ಸಮೀಪದಲ್ಲಿರುವ ಕಳ್ಳಬೇಟೆ ನಿಗ್ರಹ ಶಿಬಿರಕ್ಕೆ ತಂದು ಚಿಕಿತ್ಸೆ ನೀಡಿದ್ದರು. ಚಿಕಿತ್ಸೆ ಫಲಕಾರಿಯಾಗದ ಚಿರತೆ ಮರಿ ಮೃತಪಟ್ಟಿದೆ ಎನ್ನಲಾಗಿದೆ.

ಚಿರತೆ ಮರಿಯ ಬೆನ್ನು ಮೂಳೆ, ಕಾಲು ಮುಂದು ಗಂಭೀರ ಗಾಯದಿಂದ ನರಳುತ್ತಿತ್ತು. ಗಾಯದ ಸೋಂಕು ಹೆಚ್ಚಾಗಿ ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ.

ಪಶುವೈದ್ಯಾಧಿಕಾರಿ ಆಕಾಶ್ ಮರಣೋತ್ತರ ಪರೀಕ್ಷೆ ನಡೆಸಿದ್ದು ವಲಯ ಅರಣ್ಯಾಧಿಕಾರಿ ಧನಂಜಯ ಕುಮಾರ್, ರೆವಿನ್ಯೂ ಇನ್ಸ್‌ಪೆಕ್ಟರ್ ಬೀರಪ್ಪ, ಯಲ್ಲಲಿಂಗ ಹಾಜರಿದ್ದರು. ನಿನ್ನೆ ಗಾಯಗೊಂಡು ಬಿದ್ದಿದ್ದ ಚಿರತೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ತಂದು ಚಿಕಿತ್ಸೆ ನೀಡಿದ್ದರು.

ವಂದೇ ಮಾತರಂ–150 ಉಪನ್ಯಾಸ ಮತ್ತು ಸಂವಾದದಲ್ಲಿ ಆರ್‌ಎಸ್‌ಎಸ್ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್

ವಂದೇ ಮಾತರಂ ರಾಷ್ಟ್ರ ಜಾಗೃತಿಯ ಸಂಕೇತ

ಶಿವಮೊಗ್ಗ : ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟೀಷರ ವಿರುದ್ಧ ರಾಷ್ಟ್ರವನ್ನು ಜೋಡಿಸಿದ ರಣ ಮಂತ್ರವಾಗಿ ವಂದೇ ಮಾತರಂ ಗೀತೆ ಹೊರ ಬಂದಿತ್ತು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ಹೇಳಿದರು.

ಮಂಥನ ಶಿವಮೊಗ್ಗ ವೈಚಾರಿಕ ವೇದಿಕೆ ವತಿಯಿಂದ ತಿಲಕ್ ನಗರದ ರಾಘವೇಂದ್ರ ಸ್ವಾಮಿ ಮಠದ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ವಂದೇ ಮಾತರಂ–150 ಉಪನ್ಯಾಸ ಮತ್ತು ಸಂವಾದದಲ್ಲಿ ಮಾತನಾಡಿದರು.

ವಂದೇ ಮಾತರಂ ಗೀತೆಯಾಗಿ, ಘೋಷಣೆಯಾಗಿ ರಾಷ್ಟ್ರ ಜಾಗೃತಿಗೆ ಮುನ್ನುಡಿ ಬರೆದು, ಧ್ವಜವಾಗಿಯೂ ರಾರಾಜಿಸಿತ್ತು. ರಾಷ್ಟ್ರ ಜಾಗೃತಿಯ ಸಂಕೇತವೂ ಆಗಿತ್ತು. ಈ ಗೀತೆಯಿಂದ ಪ್ರೇರಣೆ ಪಡೆದ ಅನೇಕ ಕವಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಗೀತೆಗಳನ್ನು ರಚನೆ ಮಾಡಿದರು. ಕರ್ನಾಟಕದಲ್ಲಿ ಕುವೆಂಪು ಅವರು ಪ್ರೇರಣೆಯಾಗಿ ನಾಡಗೀತೆ ಬರೆದರು. ಪಂಜೆ ಮಂಗೇಶರಾಯರಂತೆ ಹೀಗೆ ಅನೇಕರು ಪ್ರೇರಿತರಾಗಿ ಸಾಹಿತ್ಯ ರಚನೆ ಮಾಡಿದ್ದಾರೆ ಎಂದರು.

ಬಂಕಿಮ ಚಂದ್ರ ಚಟರ್ಜಿಯವರು ಈ ಗೀತೆಯನ್ನು ಯಾವ ಸಂದರ್ಭದಲ್ಲಿ ರಚನೆ ಮಾಡಿದ್ದಾರೆಂಬುದರ ಬಗ್ಗೆಯೂ ಅನೇಕರು ಬರೆದಿದ್ದಾರೆ. ಹಾಗೆ ಬರೆದವರಲ್ಲಿ ಅಂತ್ಯ ಕೂಡ ಒಬ್ಬರು. ಭಾರತದ ಪ್ರಕೃತಿಯೇ ಈ ಗೀತೆಗೆ ಸ್ಫೂರ್ತಿ ಎಂಬ ನಿರ್ಧಾರಕ್ಕೂ ಬರಲಾಗಿದೆ ಎಂದರು.

1875ರಲ್ಲಿ ಅವರ ಪತ್ರಿಕೆಯಲ್ಲಿ ಈ ಗೀತೆ ಪ್ರಕಟಿಸುತ್ತಾರೆ.



1882ರಲ್ಲಿ ಆನಂದಮಠ ಪ್ರಕಟಿಸಿದಾಗ ದರ ಆರಂಭದ ಗೀತೆಯಾಗಿ ವಂದೇ ಮಾತರಂ ಪ್ರಕಟಿಸಿದರು. 1893 ಕೋಲ್ಕತಾಗೆ ಪ್ರಮುಖ ವರ್ಷವಾಗಿತ್ತು. ಸ್ವಾಮಿ ವಿವೇಕಾನಂದರು ಅಮೇರಿಕಾದಲ್ಲಿ ಮಾಡಿದ ಭಾಷಣ. ಈ ಭಾಷಣದ ಪ್ರಭಾವ ಕೂಡ ಬಂಕಿಮರ ಮೇಲೆ ಆಯಿತು ಎಂದರು.

ಅರವಿಂದ ಘೋಷ್ ಬ್ರಿಟೀಷ್ ಶಿಕ್ಷಣ ಪದ್ಧತಿ ಅಪಾಯಕಾರಿ ಎಂಬ ಭಾಷಣ ಮಾಡಿದರು. ಅಲ್ಲಿಂದ ಭಾರತೀಯ ರಾಷ್ಟ್ರೀಯ ವಾದ ಚಿಗುರೊಡೆಯಿತು. 1894ರಲ್ಲಿ ಬಂಕಿಮರು ತೀರಿಕೊಂಡರು. ಅವರು ತೀರಿಕೊಂಡ ನಂತರ ಅಂದಿನ ಯುವಕರಲ್ಲಿ ವಂದೇ ಮಾತರಂ ಸಂಚಲನ ಮೂಡಿಸಿತು. ವಂದೇ ಮಾತರಂ ಗೀತೆಗೆ ರವೀಂದ್ರನಾಥ ಟ್ಯಾಗೋರರು ರಾಗ ಸಂಯೋಜನೆ ಮಾಡಿದರು ಎಂದರು.

1885ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಆರಂಭವಾಯಿತು. ಅದರ ಉದ್ಘಾಟನಾ ಸಮಾರಂಭದಲ್ಲಿ ರವೀಂದ್ರನಾಥ ಟ್ಯಾಗೋರರು ಇದನ್ನು ಹಾಡಿದರು. 1905ರ ಕಾಂಗ್ರೆಸ್ ಅಧಿವೇಶನದಲ್ಲಿಯೂ ಹಾಡಲಾಯಿತು. ಬಳಿಕ ಇದರ ಜನಪ್ರಿಯತೆ ಕಂಡ ಬ್ರಿಟೀಷರು ಬಂಗಾಳ ಮತ್ತು ಢಾಕಾ ಪ್ರಾಂತ್ಯಗಳೆಂದು ಒಡೆದರು. ಇದನ್ನು ಹಿಂದು ಮತ್ತು ಮುಸಲ್ಮಾನರು ವಿರೋಧಿಸಿದರು. ಈ ವಿರೋಧಕ್ಕೆ ವಂದೇ ಮಾತರಂ ಘೋಷಣೆ ಮೊಳಗಲಾರಂಭಿಸಿತು ಎಂದರು.

ಬಂಗಾಳ ವಿಭಜನೆ ತಡೆಯಲು ಪ್ರಮುಖ ಘೋಷಣೆಯಾಗಿಯೂ ಇದು ಬಳಕೆಯಾಯಿತು. ಸ್ವದೇಶಿ ಚಳವಳಿಗೆ ಕಲ್ಕತಾ ಮುಂದಾಗಿತ್ತು. ಬ್ರಿಟೀಷ್ ಉತ್ಪನ್ನಗಳನ್ನು ಸಂಪೂರ್ಣ ನಿಷೇಧಿಸಲಾಯಿತು. ಇದರ ಪರಿಣಾಮವಾಗಿ ಬ್ರಿಟೀಷ್ ವೇಷಭೂಷಣ ಹಾಕಿಕೊಂಡು ಬಂದವರಿಗೆ ಯಾವುದೇ ವಸ್ತುಗಳಾಗಲಿ, ಸೇವೆಗಳಾಗಲಿ ಸಿಕ್ಕುತ್ತಿರಲಿಲ್ಲ. ಬಳಿಕ ವಂದೇಮಾತರಂ ಘೋಷಣೆ ಕಲ್ಕತಾದಿಂದ ಹೊರಗೆ ದೇಶದ ಎಲ್ಲಾ ಭಾಗಗಳಲ್ಲಿ ಮೊಳಗಲಾರಂಭಿಸಿತು ಎಂದರು.

ವಂದೇ ಮಾತರಂ ಪತ್ರಿಕೆಯನ್ನು ಲಾಲಾ ಲಜಪತ್ ರಾಯ್ ತಂದರು. ತಮಿಳುನಾಡಿನಲ್ಲಿ ಉದ್ಯಮಗಳು ಬಂದವು. ಸ್ವದೇಶಿ ಹಡಗು ಬಂದವು. ಇದರಿಂದಾಗಿ ಬ್ರಿಟೀಷ್ ವಸ್ತುಗಳಿಗೆ ಮಾರುಕಟ್ಟೆಯೇ ಇಲ್ಲದೆ ಸೊರಗುವಂತಾಗಿತ್ತು. ಕ್ರಮೇಣ ವಂದೇ ಮಾತರಂ ಕ್ರಾಂತಿಯ ಜ್ವಾಲೆ ಧಗಧಗಿಸಲಾರಂಭಿಸಿತು ಎಂದರು.

> 1937ರ ಕಾಂಗ್ರೆಸ್ ಅಧಿವೇಶನದಲ್ಲಿ ವಂದೇ ಮಾತರಂ ಹಾಡಲು ನಿರ್ಧರಿಸಲಾಗಿತ್ತು. ಆದರೆ ಅದರಲ್ಲಿ ಕೆಲವು ಪದಗಳನ್ನು ಸಹಿಸಿಕೊಳ್ಳಲು ಮತೀಯ ಮನಸ್ಥಿತಿಯವರಿಗೆ ಸಾಧ್ಯವಿರಲಿಲ್ಲ. ಹೀಗಾಗಿ ಒಂದು ಸಮಿತಿ ರಚನೆ ಮಾಡಿ ವಂದೇ ಮಾತರಂ ಗೀತೆ ತುಂಡು ಮಾಡಲಾಯಿತು. ಬಳಿಕ ದೇಶವನ್ನೇ ತುಂಡು ಮಾಡಲಾಯಿತು. ಈಗಲೂ ಮತೀಯ ಮನಸ್ಸುಗಳಿಗೆ ಈ ಗೀತೆಯಲ್ಲಿನ ಪದಗಳನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ.
> ■ ರಾಜೇಶ್ ಪದ್ಮಾರ್, ಆರ್‌ಎಸ್‌ಎಸ್ ಪ್ರಾಂತ ಪ್ರಚಾರ ಪ್ರಮುಖ್

ಸ್ವಾತಂತ್ರ್ಯ ಬಂದ ಮೇಲೆ ಅನೇಕರಿಗೆ ವಂದೆ ಮಾತರಂ ತುಂಡು ಮಾಡಲಾಗಿದೆ ಅನಿಸಿ ಸರಿಪಡಿಸಲು ಮುಂದಾದರು. ಬೇರೆ ಬೇರೆ ಬೆಳವಣಿಗೆಯಲ್ಲಿ ಕಳೆದ ವರ್ಷ ಕೇಂದ್ರ ಸರ್ಕಾರ ವಂದೇ ಮಾತರಂ ಎಲ್ಲಾ ಕಡೆ ಹಾಡಬೇಕೆಂದು ಅಧಿಸೂಚನೆ ಹೊರಡಿಸಿದೆ. ಇದಾದ ಬಳಿಕವೇ ಪಶ್ಚಿಮ ಬಂಗಾಳದಲ್ಲಿ ಗೀತೆಯ ಪ್ರಭಾವ ಏನೆಂದು ಗೊತ್ತಾಗಿದೆ ಎಂದರು.

ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ. ಎಚ್.ಆರ್. ಶಂಕರ ನಾರಾಯಣ ಶಾಸ್ತ್ರಿ ವೇದಿಕೆಯಲ್ಲಿದ್ದರು.

ಭದ್ರಾವತಿ ವಿವಿಧ ಶಾಲಾ-ಕಾಲೇಜುಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

• **ಭದ್ರಾವತಿ:** ನಗರದ ವಿವಿಧೆಡೆ ಶಾಲಾ-ಕಾಲೇಜು, ಸರ್ಕಾರಿ ಕಚೇರಿ, ಸಂಘ-ಸಂಸ್ಥೆಗಳಲ್ಲಿ ಭಾನುವಾರ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಶಾಲಾ-ಕಾಲೇಜು, ಸರ್ಕಾರಿ ಕಚೇರಿಗಳಿಗೆ ರಜೆ ಇದ್ದರೂ ಸಹ ಎಂದಿನಂತೆ ಬೆಳಗ್ಗೆ ಹಾಜರಾಗಿ ವಿವಿಧ ಆಸನಗಳ ಪ್ರದರ್ಶನದ ಮೂಲಕ ಯೋಗ ದಿನ ಆಚರಿಸಲಾಯಿತು. ವಿವಿಧೆಡೆ ಯೋಗ ಕೇಂದ್ರಗಳ ಶಿಕ್ಷಕರು ಹಾಜರಾಗಿ ಯೋಗ ಕಲಿಕೆ ಮಹತ್ವ, ಪರಂಪರೆ ಹಾಗೂ ವಿವಿಧ ಆಸನಗಳ ಕುರಿತು ಮಾಹಿತಿ ನೀಡಿದರು.

ಶ್ರೀ ಕನಕ ವಿದ್ಯಾಸಂಸ್ಥೆ : ಹಳೇನಗರದ ಬಸವೇಶ್ವರ ವೃತ್ತ, ಶ್ರೀ ಕನಕ ವಿದ್ಯಾಸಂಸ್ಥೆಯಿಂದ ಡಾ. ಬಿ.ಆರ್ ಅಂಬೇಡ್ಕರ್ ಭವನ ಆವರಣದಲ್ಲಿ ವಿವಿಧ ಆಸನಗಳನ್ನು ಪ್ರದರ್ಶಿಸುವ ಮೂಲಕ ಯೋಗ ದಿನ ಆಚರಿಸಲಾಯಿತು.

ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಸಿ.ಡಿ ಮಂಜುನಾಥ್ ವಿದ್ಯಾರ್ಥಿಗಳಿಗೆ ಯೋಗ ಕಲಿಕೆ ಮಹತ್ವ ವಿವರಿಸಿದರು. ಪ್ರಾಥಮಿಕ ಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಜಿ.ಕೆ ಹರೀಶ್ ಮತ್ತು ಶಾಲೆಯ ಸಿಬ್ಬಂದಿ ವರ್ಗದವರು, ಪೋಷಕರು ಉಪಸ್ಥಿತರಿದ್ದರು.

ವಿಶ್ವೇಶ್ವರಾಯ ವಿದ್ಯಾಸಂಸ್ಥೆ : ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘ ಆಶ್ರಿತದ ನಗರದ ಹೊಸ ಸೇತುವೆ ರಸ್ತೆಯ ವಿಶ್ವೇಶ್ವರಾಯ ವಿದ್ಯಾಸಂಸ್ಥೆಯಲ್ಲಿ 12ನೇ ವರ್ಷದ ಅಂತಾರಾಷ್ಟ್ರೀಯ ಯೋಗ ದಿನ ವಿಶೇಷವಾಗಿ ಆಚರಿಸಲಾಯಿತು.

ಈ ಬಾರಿಯ ಯೋಗ ದಿನಾಚರಣೆ ಧ್ಯೇಯ ವಾಕ್ಯ 'ಆರೋಗ್ಯಕರ ವ್ಯವಸ್ಥೆಗಾಗಿ ಯೋಗ' ಘೋಷಣೆಯೊಂದಿಗೆ ಕಾರ್ಯಕ್ರಮ ಉದ್ಘಾಟಿಸಲಾಯಿತು. ವಿದ್ಯಾಸಂಸ್ಥೆ ಅಧ್ಯಕ್ಷ ಬಿ. ಸಿದ್ದಬಸಪ್ಪ, ಬಾಲಕಿಯರ ಸರ್ಕಾರಿ ಸಂಚಿಯ ಹೊನ್ನಮ್ಮ ಪ್ರೌಢಶಾಲೆ ಉಪ ಪ್ರಾಂಶುಪಾಲ ಮನೋಹರ್, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್. ಬಸವರಾಜ್ ಇದ್ದರು.

ವಿದ್ಯಾ ಸಂಸ್ಥೆ ಆಡಳಿತಾಧಿಕಾರಿ ಡಾ. ಎಸ್.ಪಿ. ರಾಕೇಶ್ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ, ರಾಷ್ಟ್ರಪ್ರಶಸ್ತಿಪುರಸ್ಕೃತ ಶಿವಲಿಂಗೇಗೌಡ ನೇತೃತ್ವದಲ್ಲಿ ಎಲ್ಲ ವಿಭಾಗದ ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಸಹ ಶಿಕ್ಷಕರ ಸಹಯೋಗದೊಂದಿಗೆ ಪ್ರಾಥಮಿಕ ಪ್ರೌಢ ಶಾಲಾ ವಿದ್ಯಾರ್ಥಿಗಳು ಮತ್ತು ಬಿ.ಇಡಿ ಪ್ರಶಿಕ್ಷಣಾರ್ಥಿಗಳು ಸೇರಿದಂತೆ ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಯೋಗ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ದೈಹಿಕ ಶಿಕ್ಷಣ ಶಿಕ್ಷಕಿ ಪಿ. ರೇವತಿ ನಿರೂಪಿಸಿ, ಎಂ.ಎಸ್ ಮಂಜುನಾಥ್ ಸ್ವಾಗತಿಸಿದರು. ಟಿ.ಎಸ್ ವತ್ಸಲ ದೇವಿ ಪ್ರಾರ್ಥಿಸಿ, ದೈಹಿಕ ಶಿಕ್ಷಣ ಶಿಕ್ಷಕರು ಆರ್. ರವಿ ವಂದಿಸಿದರು.

ಅನ್ವರ್ ಫುತ್ತಾ ಅನಸ್ಯ ವಿದ್ಯಾಸಂಸ್ಥೆ : ನಗರದ ಅನ್ವರ್ ಫುತ್ತಾ ಅನಸ್ಯ ವಿದ್ಯಾಸಂಸ್ಥೆ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ವಿಜೃಂಭಣೆಯಿಂದ ಆಚರಿಸಲಾಯಿತು. ಅನಸ್ಯ ಎಜ್ಯುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಕೆ. ನಾಗರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಾನವನಿಗೆ ಎಲ್ಲದಕ್ಕಿಂತ ಆರೋಗ್ಯ ಮುಖ್ಯ, ಆರೋಗ್ಯವೇ ಭಾಗ್ಯ. ಯೋಗದಿಂದ ಉತ್ತಮ ಆರೋಗ್ಯ ಹೊಂದಲು ಸಾಧ್ಯ ಎಂದರು.

ವಿದ್ಯಾಸಂಸ್ಥೆ ಮುಖ್ಯೋಪಾಧ್ಯಾಯ ಕೆ. ಕಲ್ಲೇಶ್ ಕುಮಾರ್, ಯೋಗ ದಿನದ ಇತಿಹಾಸ, ಯೋಗ ದಿನದ ವಿಶೇಷತೆ. ಯೋಗ ಒಂದು ಬದುಕಿನ ಕಲೆ ಎಂದು ಯೋಗದ ಪ್ರಾಮುಖ್ಯತೆ ವಿವರಿಸಿದರು. ಶ್ರೀ ಕುಮಾರ್ ಆರ್ ಹಾಗೂ ಶ್ರೀಮತಿ ನಿಶ್ಚಿತ ಕೆ ದೈಹಿಕ ಶಿಕ್ಷಕರು ಹಾಗೂ ಅನಸ್ಯ ಯೋಗಾ ಕೇಂದ್ರದ ಸದಸ್ಯರು ಇವರ ನೇತೃತ್ವದಲ್ಲಿ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಯೋಗಾಸನವನ್ನು ಪ್ರದರ್ಶಿಸಿದರು.



ಭದ್ರಾವತಿ ಹಳೇನಗರದ ಬಸವೇಶ್ವರ ವೃತ್ತ, ಶ್ರೀ ಕನಕ ವಿದ್ಯಾಸಂಸ್ಥೆಯಿಂದ ಡಾ. ಬಿ.ಆರ್ ಅಂಬೇಡ್ಕರ್ ಭವನ ಆವರಣದಲ್ಲಿ ಯೋಗ ದಿನ ಆಚರಿಸಲಾಯಿತು.



ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘ ಆಶ್ರಿತದ ವಿಶ್ವೇಶ್ವರಾಯ ವಿದ್ಯಾಸಂಸ್ಥೆಯಲ್ಲಿ 12ನೇ ವರ್ಷದ ಅಂತಾರಾಷ್ಟ್ರೀಯ ಯೋಗ ದಿನವನ್ನು ವಿಶೇಷವಾಗಿ ಆಚರಿಸಲಾಯಿತು.

ವಿಹಿಂಪ ಮಾಜಿ ಅಧ್ಯಕ್ಷ ಭರತ್ ಕನ್ನಹಳ್ಳಿ ನಿಧನ

• **ಮೂಡಿಗೆರೆ :** ಹಿಂದುತ್ವದ ಪ್ರಖರವಾದಿ, ಯುವಕರಿಗೆ ಪ್ರೇರಣಾ ಶಕ್ತಿಯಾಗಿ ಸದಾ ನಗುವಿನೊಂದಿಗೆ ಇರುತ್ತಿದ್ದ ವಿಶ್ವ ಹಿಂದೂ ಪರಿಷತ್‌ನ ಮಾಜಿ ಅಧ್ಯಕ್ಷ ಭರತ್ ಕನ್ನಹಳ್ಳಿ (54) ವರ್ಷ ಅನಾರೋಗ್ಯದಿಂದ ಭಾನುವಾರ ನಿಧನರಾದರು.



ಅವರು ಕಳೆದ 30 ವರ್ಷಗಳಿಂದ ಜಿಲ್ಲೆಯಲ್ಲಿ ವಿಶ್ವ ಹಿಂದು ಪರಿಷತ್ ಮೂಲಕ ಹಿಂದೂ ಸಂಘಟನೆಯಲ್ಲಿ ಪಾಲ್ಗೊಂಡು ಅನ್ಯೋನ್ಯ ಜವಾಬ್ದಾರಿಯೊಂದಿಗೆ ಸಕ್ರಿಯವಾಗಿ ಧರ್ಮ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಒಂದು ದಿನವೂ ಸ್ವಂತಕ್ಕಾಗಿ ಯೋಚಿಸದೆ ತಮ್ಮ ಕೊನೆ ಕ್ಷಣದ ವರೆಗೂ ಧರ್ಮ ಕಾರ್ಯಕಾಗಿ ಬದುಕಿದ್ದವರು.

ಪ್ರಾರಂಭದಲ್ಲಿ ಜಿಲ್ಲೆಯಲ್ಲಿನ ದತ್ತ ಪೀಠದ ಹೋರಾಟದ ಮೂಲಕ ಸಂಘಟನೆಗೆ ಧುಮುಕಿದ ಅವರು, ಹಲವಾರು ಕೇಸ್ ಗಳನ್ನು ಎದುರಿಸಿದರು. ಇಷ್ಟಾದರೂ ದೃತಿಗೆಡದೆ ಸಂಘಟನೆ ಕೆಲಸದಲ್ಲಿ ತೊಡಗಿಸಿಕೊಂಡರು. ಅಲ್ಲದೆ ಸದಾ ಯುವಕರೊಂದಿಗೆ ನಗು ನಗುತ ಸ್ನೇಹ ಜೀವಿಯಾಗಿ ನೇರ ನುಡಿಯೊಂದಿಗೆ ಎಲ್ಲರೊಂದಿಗೆ ಮಾತನಾಡುತ್ತಿದ್ದರು. ಅವರು 1996ರಲ್ಲಿ ನಡೆದ ದತ್ತಾಪೀಠ ಹೋರಾಟದ ದತ್ತರಥ ಯಾತ್ರೆಯ ಮೂಲಕ ರಾಜ್ಯಾದ್ಯಂತ ರಥದಲ್ಲಿ ಸಂಚರಿಸಿ ಅಂದಿನ ಸಂಘಟನೆಯ ಹಿರಿಯರ ಜೊತೆ ಉತ್ತಮ ಸಂಬಂಧ ಬೆಳೆಸಿಕೊಂಡಿದರು. ಮೃತರಿಗೆ ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ, ತಾಯಿ, ಇಬ್ಬರು ಸಹೋದರರು ಇದ್ದಾರೆ.

ಇವರ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಪಟ್ಟಣದ ಅದ್ವೈತಾಯ ರಂಗಮಂದಿರದಲ್ಲಿ ಇರಿಸಲಾಗಿತ್ತು. ಸಾವಿರಾರು ಹಿತೈಷಿಗಳು ಪಾರ್ಥಿವ ದರ್ಶನ ಪಡೆದರು. ಕುಟುಂಬದ ಆಕ್ರಂದನ ಮುಗಿಲು ಮುಟ್ಟಿತ್ತು. ಇವರ ನಿಧನಕ್ಕೆ ವಿಧಾನ ಪರಿಷತ್ ಸದಸ್ಯರಾದ ಎಂ. ಕೆ. ಪ್ರಾಣೇಶ್ ಸೇರಿದಂತೆ ಸಂಘ ಪರಿವಾರದ ಮುಖಂಡರು. ವಿಶ್ವ ಹಿಂದೂ ಪರಿಷತ್ ಮೂಡಿಗೆರೆ ಘಟಕ ಸಾರ್ವಜನಿಕ ಹಿಂದೂ ಮಹಾ ಗಣಪತಿ ಸಮಿತಿ, ಕೆಂಪೇಗೌಡ ಒಕ್ಕಲಿಗ ಸಂಘ ಸೇರಿದಂತೆ ತಾಲೂಕಿನ ಅಪಾರ ಜನತೆ ಸಂತಾಪ ಸೂಚಿಸಿದರು.



ಬಿಳೇಕಲ್ಲು ಗಣಿಗಾರಿಕೆ ಪರವಾನಗಿ ನವೀಕರಿಸಬಾರದು: ತಹಶೀಲ್ದಾರರಿಗೆ ಮನವಿ

• **ಚಂದ್ರಗುತ್ತಿ:** ಸುತ್ತಮುತ್ತಲ ಪರಿಸರವನ್ನು ನಾಶಮಾಡಿ, ಸಾರ್ವಜನಿಕರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಸಮೀಪದ ಬಸ್ತಿಕೊಪ್ಪ ಗ್ರಾಮದ ಸರ್ವೆ ನಂಬರ್ 24ರಲ್ಲಿನ ಬಿಳೇಕಲ್ಲು ಗಣಿಗಾರಿಕೆಗೆ ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ಪರವಾನಗಿ ನವೀಕರಿಸಬಾರದು ಎಂದು ವೃಕ್ಷಲಕ್ಷ ಆಂದೋಲನ ಹಾಗೂ ಬಸ್ತಿಕೊಪ್ಪ ಗ್ರಾಮಸ್ಥರು ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.


ಗಣಿಗಾರಿಕೆಯಿಂದಾಗಿ ಗ್ರಾಮದಲ್ಲಿ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ, ದಿನವಿಡೀ ಕೇಳಿಬರುವ ಕರ್ಕಶ ಶಬ್ದ ಹಾಗೂ ಅವ್ಯಾಹತವಾಗಿ ನಡೆಯುತ್ತಿರುವ ಭಾರಿ ಪ್ರಮಾಣದ ಬ್ಲಾಸ್ಟಿಂಗ್ ನಿಂದಾಗಿ ಮನೆಗಳು ಬಿರುಕು ಬಿಡುತ್ತಿವೆ. ಯಾವುದೇ ಕ್ಷಣದಲ್ಲಾದರೂ ಮನೆಗಳು ಕುಸಿದು ಬೀಳುವ ಭೀತಿ ಎದುರಾಗಿದೆ. ಇಡೀ ರಸ್ತೆಗಳು ಧೂಳುಮಯವಾಗಿದ್ದು, ಹಿರಿಯರು ಮತ್ತು ಮಕ್ಕಳ ಆರೋಗ್ಯ ದಿನೇ ದಿನೇ ಹದಗೆಡುತ್ತಿದೆ. ಪರಿಸರ ಸಂಪತ್ತು ಕಣ್ಣೆದುರೇ ನಾಶವಾಗುತ್ತಿದ್ದರೂ ಅಧಿಕಾರಿಗಳು ಮೌನವಾಗಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ತರಾಟೆಗೆ ತೆಗೆದುಕೊಂಡರು.

2026ರ ನಂತರ ಈ ಗಣಿಗಾರಿಕೆಗೆ ಯಾವುದೇ ಕಾರಣಕ್ಕೂ ಅನುಮತಿ ನೀಡುವುದಿಲ್ಲ ಎಂದು ಈ ಹಿಂದೆ ಅಧಿಕಾರಿಗಳೇ ಗ್ರಾಮಸ್ಥರಿಗೆ ಭರವಸೆ ನೀಡಿದ್ದರು. ಈ ನಿಟ್ಟಿನಲ್ಲಿ ಅವಧಿ ಮುಗಿದ ತಕ್ಷಣ ಗಣಿಗಾರಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ಬಸ್ತಿಕೊಪ್ಪ ಗಣಿ ಪ್ರದೇಶದಲ್ಲಿ ಈ ಹಿಂದೆ ಭಾರಿ ಪ್ರಮಾಣದ ಕಾನೂನುಬಾಹಿರ ಸ್ಫೋಟಕ ವಸ್ತುಗಳು (ಜಿಲೆಟಿನ್ ಕಡ್ಡಿಗಳು) ಪತ್ತೆಯಾಗಿದ್ದವು. ಅಧಿಕಾರಿಗಳು ಸಕಾಲದಲ್ಲಿ ಇದನ್ನು ನಿಷ್ಕ್ರಿಯಗೊಳಿಸಿದ್ದರಿಂದ ಭಾರಿ ಪ್ರಮಾಣದ ದುರಂತವೊಂದು ತಪ್ಪಿತ್ತು. ಇಂತಹ ಅಪಾಯಕಾರಿ ಕೃತ್ಯಗಳಿಗೆ ಸ್ಥಳೀಯ ಜನಪ್ರತಿನಿಧಿಗಳೇ ಸಾಥ್ ನೀಡುತ್ತಿದ್ದಾರೆ. ಜನರಿಂದ ಆರಿಸಿ ಬಂದ ಇವರು ಜನರ ಜೀವದ ಜೊತೆ ರಾಜಕೀಯ ದಾಳ ಆಡುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದರು.

ಗ್ರಾಮದಲ್ಲಿ ಕುಡಿಯುವ ನೀರು, ರಸ್ತೆ ಸೇರಿದಂತೆ ಅನೇಕ ಮೂಲಭೂತ ಸೌಕರ್ಯಗಳ ಸಮಸ್ಯೆಗಳಿದ್ದರೂ ಇತ್ತ ಗಮನ ಹರಿಸದ ಜನಪ್ರತಿನಿಧಿಗಳು, ಗಣಿ ಮಾಲೀಕರ ಪರವಾಗಿ ನಿಂತಿರುವುದು ನಾಚಿಕೆಗೇಡು. ಒಂದು ವೇಳೆ ಗ್ರಾಮ ಅಥವಾ ಸಂಬಂಧಪಟ್ಟ ಇಲಾಖೆಗಳು ಗಣಿಗಾರಿಕೆಗೆ ಮತ್ತೆ ಪರವಾನಗಿ ನೀಡಲು ಮುಂದಾದಲ್ಲಿ, ಮುಂದಿನ ದಿನಗಳಲ್ಲಿ ಇಡೀ ತಾಲೂಕಿನಾದ್ಯಂತ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ವೃಕ್ಷಲಕ್ಷ ಆಂದೋಲನದ ಅನಂತ ಹೆಗಡೆ ಆಶೀಸರ, ಸಂಚಾಲಕ ಶ್ರೀಪಾದ ಬಿಚ್ಚುಗತ್ತಿ, ಗ್ರಾಮಸ್ಥರಾದ ಮಂಜು, ರಘುಪತಿ, ಅಜೀಮ್, ಗಂಗಾಧರಗೌಡ ಹೊಳೆಮರೂರು ಮತ್ತಿತರರು ಪಾಲ್ಗೊಂಡಿದ್ದರು.



ಯೋಗದಿಂದ ಸುಸ್ಥಿತಿಯಲ್ಲಿ ಶರೀರ : ಆಗುಂಬೆ ಗಣೇಶ್ ಹೆಗ್ಡೆ

• **ಶೃಂಗೇರಿ:** ಯೋಗ ಎಂಬ ಶಬ್ದಕ್ಕೆ ಹಲವಾರು ಆಯಾಮಗಳಿವೆ. ವಿಶ್ವ ಯೋಗ ದಿನಾಚರಣೆ ದಿನದಂದು ಯೋಗ ಎಂಬುದಕ್ಕೆ ಪಡೆಯುವುದು ಎಂದು ವಿಶ್ಲೇಷಿಸಬಹುದು ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಆಗುಂಬೆ ಗಣೇಶ್ ಹೆಗ್ಡೆ ಹೇಳಿದರು.

ವಿದ್ಯಾನಗರದ ಕನ್ನಡ ಭವನದಲ್ಲಿ ಪತಂಜಲಿ ಯೋಗ ಶಿಕ್ಷಣ ಸಂಸ್ಥೆ ಮತ್ತು ಭಾರತೀಯ ಜನತಾ ಪಕ್ಷ ಜಂಟಿಯಾಗಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿ ದಿನ ಬ್ರಾಹ್ಮಿ ಮುಹೂರ್ತದಲ್ಲಿ ಯೋಗಭ್ಯಾಸ ಮಾಡುವುದರಿಂದ ನಾವು ಆರೋಗ್ಯವನ್ನು ಪಡೆಯುತ್ತೇವೆ. ಪರಮಹಂಸರ ಮಾತನ್ನು ಉಲ್ಲೇಖಿಸುತ್ತಾ 8 ಗೇಟಿನ ದೇಹ 108 ಕೀಲುಗಳು, ಸಾವಿರಾರು ನರ ನಾಡಿಗಳನ್ನು ಹೊಂದಿರುತ್ತಾ ಸಮಯ ಬಂದಾಗ ಎಷ್ಟೇ ಸಿರಿ ಸಂಪತ್ತು ಇದ್ದರೂ ಶರೀರವನ್ನು ಒಂದು ದಿನ ತ್ಯಜಿಸಲೇಬೇಕಾಗುತ್ತದೆ. ಜೀವಿತಾವಧಿಯಲ್ಲಿ ಯೋಗದಂತಹ ಶಾರೀರಿಕ ಕ್ರಿಯೆಯಿಂದ ಈ ಶರೀರವನ್ನು ಸುಸ್ಥಿತಿಯಲ್ಲಿರಿಸಿ ಸುಖಾಂತ್ಯ ಪಡೆಯಬಹುದು ಎಂದರು.



ಯೋಗ ಶಿಕ್ಷಣ ಸಮಿತಿಯ ನಾಗೇಶ್ ಕಾಮತ್ ಮಾತನಾಡಿ, ಸಂಸ್ಥೆಯು 18 ವರ್ಷದಿಂದ ಯೋಗ ತರಬೇತಿ ನೀಡುತ್ತಿದ್ದು, ಅದನ್ನು ಸಾರ್ವಜನಿಕರು ಬಳಸಿಕೊಳ್ಳಬೇಕು. ಜೀವನದಲ್ಲಿ ಪ್ರತಿ ದಿನವೂ ಯೋಗಾಭ್ಯಾಸ ಅಳವಡಿಸಿಕೊಂಡು ಉತ್ತಮ ಸಮಾಜವನ್ನು ನಿರ್ಮಿಸೋಣ ಎಂದರು.

ಕಾರ್ಯಕ್ರಮದಲ್ಲಿ ಯೋಗ ಶಿಕ್ಷಣ ಸಂಸ್ಥೆಯ ಎಚ್.ಎಂ. ಮಂಜುನಾಥಗೌಡರನ್ನು ಅಭಿನಂದಿಸಲಾಯಿತು. ಬಿಜೆಪಿ ಅಧ್ಯಕ್ಷ ಟಿ.ಎಸ್. ಉಮೇಶ್, ಶಿಕ್ಷಕಿ ಪದ್ಮಾ, ಆಶಾ, ಪ್ರೇಮಾ, ಎಂ.ಕೆ. ಕುಮಾರ ಶ್ರೇಷ್ಠಿ ಇತರರು ಇದ್ದರು.

ತೋಟಗಾರಿಕಾ ಬೆಳೆಗಳ ವಿಮೆ ಪಾವತಿಗೆ ಜು.30 ಕೊನೆಯ ದಿನ : ಜಯದೇವಪ್ಪ

• **ಕಡೂರು:** ಸರ್ಕಾರದ ಆದೇಶದಂತೆ ಮರು ವಿನ್ಯಾಸ ಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಅಡಿಯಲ್ಲಿ ತೋಟಗಾರಿಕಾ ಬೆಳೆಗಳಾದ ಅಡಿಕೆ, ದಾಳಿಂಬೆ, ಕಾಳು ಮೆಣಸು ಹಾಗೂ ಹಸಿ ಮೆಣಸಿನಕಾಯಿ ಈ ಬೆಳೆಗಳಿಗೆ ವಿಮೆ ಪಾವತಿಸಲು ಜುಲೈ 30ಕ್ಕೆ ಕೊನೆಯ ದಿನವಾಗಿದೆ. ರೈತರು ಈ ಯೋಜನೆಯ ಸೌಲಭ್ಯವನ್ನು ಪಡೆಯಬೇಕಿದೆ ಎಂದು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರಾದ ಎಚ್.ಕೆ. ಜಯದೇವಪ್ಪ ತಿಳಿಸಿದರು.

ತೋಟಗಾರಿಕಾ ಇಲಾಖೆಯ ಕಚೇರಿಯಲ್ಲಿ ಪತ್ರಿಕೆಗೆ ಮಾಹಿತಿ ನೀಡಿ ಮಾತನಾಡಿದ ಅವರು, ಅಡಿಕೆ ಬೆಳೆಗೆ ಪ್ರತಿ ಹೆಕ್ಟೇರಿಗೆ 6400 ರೂ., ದಾಳಿಂಬೆಗೆ 6350 ರೂ., ಮಾವು ಬೆಳೆಗೆ 4000 ರೂ., ಕರಿ ಮೆಣಸಿಗೆ 2350 ರೂ. ಹಾಗೂ ಹಸಿಮೆಣಸಿನಕಾಯಿ ಬೆಳೆಗೆ 3550 ರೂ.ಗಳ ಸದರಿ ವಿಮಾ ಮೊತ್ತವನ್ನು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಸಾಮಾನ್ಯ ಸೇವಾಕೇಂದ್ರಗಳಲ್ಲಿ ಅಥವಾ ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಣಿ ಮಾಡಿಸಬಹುದಾಗಿದೆ. ರೈತರುಗಳು ಎಫ್ ಐಡಿ ಸಂಖ್ಯೆ, ಆಧಾರ್ ಕಾರ್ಡ್‌ನೊಂದಿಗೆ ಸಂಬಂಧಿಸಿದ ಕೇಂದ್ರಗಳಿಗೆ ತೆರಳಿ ವಿಮೆ ಪಾವತಿಸಬಹುದಾಗಿದೆ ಎಂದರು.

2024-25 ನೇ ಸಾಲಿನ ವಿಮಾ ಪಾಲಿಸಿಗಳಲ್ಲಿ 1916 ರೈತರುಗಳು ವಿಮಾ ಪಾವತಿದಾರರಾಗಿದ್ದಾರೆ. ಇವರಲ್ಲಿ ಎಲ್ಲಾ ಫಲಾನುಭವಿಗಳಿಗೆ 694 ಲಕ್ಷ ರೂ. ಗಳು ಅಡಿಕೆ ಮತ್ತು ದಾಳಿಂಬೆ ಬೆಳೆಗಾರರಿಗೆ ವಿಮೆ ಮೊತ್ತ ಬಂದಿರುತ್ತದೆ. ವಿಮೆ ಸಲ್ಲಿಸಲು ಸಾಲ ಪಡೆದ ರೈತರು, ಸಾಲ ಪಡೆಯದ ರೈತರು ಸಹ ಅರ್ಹತೆ ಪಡೆದಿರುತ್ತಾರೆ. ರೈತರು ಬೆಳೆದ ಪೂರ್ಣ ಪ್ರಮಾಣದ ಪ್ರದೇಶಕ್ಕೂ ನೋಂದಣಿ ಮಾಡಿಸಲು ಅವಕಾಶವಿರಲಿದೆ. ಸರ್ಕಾರ ನೀಡಿರುವ ಯೋಜನೆಯ ಸದುಪಯೋಗವನ್ನು ರೈತರುಗಳು ಪಡೆದುಕೊಳ್ಳಬಹುದಾಗಿದೆ. ಮಾಹಿತಿಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದರು.

ಆರೋಗ್ಯ ಹಾಳು ಮಾಡುತ್ತಿರುವ ಮಾದಕ ದ್ರವ್ಯಗಳು: ಅನೀತ್ ಕುಮಾರ್

• **ಚಿಕ್ಕಮಗಳೂರು:** ಜಗತ್ತಿನಲ್ಲಿ ಮಾದಕ ದ್ರವ್ಯಗಳು ಯುವಜನರನ್ನು ಸೆಳೆಯುವ ಮೂಲಕ ಆರೋಗ್ಯವನ್ನು ಹಾಳು ಮಾಡುತ್ತಿದೆ. ಕೆಲವೇ ಸಂಖ್ಯೆಯಲ್ಲಿದ್ದ ಮದ್ಯ ಮಾರಾಟ ಕೇಂದ್ರಗಳು ಇದೀಗ ಗಲ್ಲಿ ಗಲ್ಲಿಗಳಲ್ಲಿ ತೆರೆದು ಭವಿಷ್ಯದ ಪ್ರಜೆಗಳನ್ನು ವಿನಾಶದತ್ತ ಕೊಂಡೊಯ್ಯುತ್ತಿದೆ ಎಂದು ಐ.ಆರ್.ಸಿ.ಎ. ಯೋಜನಾ ನಿರ್ದೇಶಕ ಅನೀತ್ ಕುಮಾರ್ ಹೇಳಿದರು.

ನಗರದ ಬೈಪಾಸ್ ರಸ್ತೆ ಸಮೀಪದ ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ಶುಕ್ರವಾರ ಶ್ರೀ ಶಕ್ತಿ ಮದ್ಯಪಾನ ಸೇವನೆಗಳ ಸಮಗ್ರ ಪುನರ್ವಸತಿ ಕೇಂದ್ರ, ಶ್ರೀ ಶಕ್ತಿ ಅಸೋಸಿಯೇಷನ್ ಸಹಯೋಗದಲ್ಲಿ ಆಯೋಜಿಸಿದ್ದ ಮಾದಕ ವ್ಯಸನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಆಧುನಿಕತೆ ಮಕ್ಕಳಲ್ಲಿ ಮೊಬೈಲ್‌ವೊಂದು ಬಹುದೊಡ್ಡ ಚಟವಾಗಿ ಅಂಟಿಕೊಂಡಿದೆ. ಉಪಯೋಗಕ್ಕೆ ಬರುವ ಕೆಲಸಕ್ಕಿಂತ ದುರುಪಯೋಗ, ದುಶ್ಚಟಕ್ಕೆ ಬಲಿಯಾಗುವ ದೃಶ್ಯಾವಳಿಗಳನ್ನು ವೀಕ್ಷಿಸುವ ಮುಖೇನಾ ಯುವಸಮೂಹ ದಾರಿತಪ್ಪುತ್ತಿದೆ. ಕೇವಲ ರೀಲ್‌ಗಾಗಿ ಅಮೂಲ್ಯ ಜೀವನ ಮತ್ತು ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದೆ ಎಂದರು.

ಹೆರಾಯಿನ್, ಗಾಂಜಾ, ಮದ್ಯವ್ಯಸನ, ಧೂಮಪಾನ ಬಳಕೆಯಿಂದ ಮನುಷ್ಯನ ಶರೀರ ಕೆಲಕ್ಷಣ ಮೋಜಿ ನಿಂದ ತೇಲಾಡುವ ಜೊತೆಗೆ ಅಪರಾಧ ಕೃತ್ಯಕ್ಕೆ ಒಳಗಾಗುತ್ತಾನೆ. ಹೀಗಾಗಿ ಪ್ರತಿಯೊಬ್ಬರು ದೇಹವನ್ನು ಆರೋಗ್ಯದಿಂದ ಕಾಪಿಡಲು ದುಶ್ಚಟಗಳಿಂದ ದೂರಾಗಿ ವ್ಯಾಯಾಮ, ಪೌಷ್ಠಿಕಾಂಶ ಆಹಾರಗಳ ಸೇವನೆಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು ಎಂದು ಹೇಳಿದರು.

ಬ್ರಹ್ಮಕುಮಾರೀಸ್ ಜಿಲ್ಲಾ ಸಂಚಾಲಕ ಭಾಗ್ಯಕ್ಕ ಮಾತನಾಡಿ, ದುಶ್ಚಟಗಳಿಂದ ಹೊರಬರಲು ಮೊದಲು ಮನಸ್ಸನ್ನು ಹಿಡಿತದಲ್ಲಿಡಬೇಕು. ಕೆಟ್ಟ ಪ್ರಭಾವಕ್ಕೆ ಬೀಳದಿರಲು ಮನಸ್ಸನ್ನು ದೃಢಗೊಳಿಸಲು ಏಕಾಗ್ರತೆ, ಧ್ಯಾನ ಪರಿಪಾಠ ಅಳವಡಿಸಿಕೊಳ್ಳಬೇಕು. ಇಂದಿನ ಯುವಜನಾಂಗ ಕೆಟ್ಟದ್ದಕ್ಕೆ ಸುಲಭವಾಗಿ ಒಳಗಾಗುತ್ತಿದ್ದು ಉತ್ತಮ ಜೀವನಕ್ಕೆ ಅಚ್ಚುಕಟ್ಟಾದ ಕ್ರಮ ಪಾಲಿಸುತ್ತಿಲ್ಲ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಂಬೇಡ್ಕರ್ ವಸತಿ ಶಾಲೆ ಪ್ರಾಂಶುಪಾಲ ಲತಾ ಮಕ್ಕಳು ಬಾಲ್ಯದಿಂದಲೇ ದುಶ್ಚಟಗಳ ಬಗ್ಗೆ ಅರಿತುಕೊಂಡಲ್ಲಿ, ಭವಿಷ್ಯದಲ್ಲಿ ಆ ಚಟ್ಟಕ್ಕೆ ಒಳಗಾಗುವುದಿಲ್ಲ, ಆ ನಿಟ್ಟಿನಲ್ಲಿ ಸಂಘ-ಸಂಸ್ಥೆಗಳು ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ಕೆ ಕೈಗೊಳ್ಳುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ತಿಳಿಸಿದರು.

ಇದೇ ವೇಳೆ ಪತ್ರೋತ್ಸವ ಹೊರತಾಗಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಐ.ಆರ್.ಸಿ.ಎ. ವ್ಯವಸ್ಥಾಪಕ ಮಂಜುನಾಥ್, ವಿವಿಡೋ ದ್ವೈತ ಫೌಂಡರ್ ಕಾರ್ಯದರ್ಶಿ ಮೋಹನ್, ಐಆರ್‌ಸಿಎ ಆಪ್ತ ಸಮಾಲೋಚಕ ಶಶಿಧರ, ಶಿಕ್ಷಕ ವಿಜಯ್ ಕುಮಾರ್, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸೋಮವಾರದ ಪಂದ್ಯಗಳು

ನಾರ್ವೆ-ಸೆನೆಗಲ್ (ಬೆಳಗ್ಗೆ 5:30)
ಜೋರ್ಡಾನ್-ಅಲ್ಜೀರಿಯಾ (ಬೆಳಗ್ಗೆ 8:30)
ಇಂಗ್ಲೆಂಡ್-ಘಾನಾ (ಮಧ್ಯರಾತ್ರಿ 1:30)

ಸ್ವೀಡನ್‌ಗೆ ಡಚ್ಚರ ಡಿಚ್ಚಿ!

• **ಹ್ಯೂಸ್ಟನ್:** ಬ್ರಿಯಾನ್ ಬ್ರಾಬಿ ಹಾಗೂ ಕೋಡಿ ಗಾಕ್‌ಪೋ ತಲಾ ಎರಡು ಗೋಲುಗಳನ್ನು ದಾಖಲಿಸಿದ ಪರಿಣಾಮ ನೆದರ್ಲೆಂಡ್ಸ್ ತಂಡ ಸ್ವೀಡನ್ ವಿರುದ್ಧ 5-1 ಅಂತರದ ಭರ್ಜರಿ ಜಯ ಸಾಧಿಸಿದೆ. ಮೊದಲ ಪಂದ್ಯದಲ್ಲಿ ಜಪಾನ್ ವಿರುದ್ಧ 2-2 ಡ್ರಾ ಸಾಧಿಸಿ ನಿರಾಸೆ ಅನುಭವಿಸಿದ್ದ ಡಚ್ ಪಡೆ, ಈ ಜಯದೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿದೆ. ಪಂದ್ಯದ 5ನೇ ನಿಮಿಷದಲ್ಲೇ ಕೋಡಿ ಗಾಕ್‌ಪೋ ನೀಡಿದ ಕ್ರಾಸ್‌ನ್ನು ಬ್ರಿಯಾನ್ ಬ್ರಾಬಿ ಗೋಲಾಗಿ ಪರಿವರ್ತಿಸಿ ತಂಡಕ್ಕೆ ಮುನ್ನಡೆ ತಂದರು. 17ನೇ ನಿಮಿಷದಲ್ಲಿ ಡೆಂಜೆಲ್ ಡಮ್‌ಫ್ರಿಸ್ ಅವರ ಕ್ರಾಸ್‌ಗೆ ಮತ್ತೊಮ್ಮೆ ಸ್ಪಂದಿಸಿದ ಬ್ರಾಬಿ, ಎರಡನೇ ಗೋಲು ದಾಖಲಿಸಿ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಎರಡನೇ ಅರ್ಧ ಆರಂಭವಾಗುತ್ತಿದ್ದಂತೆಯೇ ಗಾಕ್‌ಪೋ ಮಿಂಚಿದರು. 47ನೇ ನಿಮಿಷದಲ್ಲಿ ಡಮ್‌ಫ್ರಿಸ್ ಕ್ರಾಸ್‌ನಿಂದ ಗೋಲು ಬಾರಿಸಿದ ಅವರು, 54ನೇ ನಿಮಿಷದಲ್ಲಿ ಮತ್ತೊಂದು ಅದ್ಭುತ ಶಾಟ್ ಮೂಲಕ ಸ್ಕೋರ್ ಅನ್ನು 4-0ಕ್ಕೆ ಏರಿಸಿದರು. 59ನೇ ನಿಮಿಷದಲ್ಲಿ ಆಂಥನಿ ಎಲಾಂಗಾ ಸ್ವೀಡನ್ ಪರ ಏಕೈಕ ಗೋಲು ದಾಖಲಿಸಿ ಅಂತರ ಕಡಿಮೆ ಮಾಡಿದರೂ, ಅದು ಕೇವಲ ಸಮಾಧಾನದ ಗೋಲಾಗಿ ಉಳಿಯಿತು. ಪಂದ್ಯದ ಕೊನೆಯ ಕ್ಷಣದಲ್ಲಿ ಕ್ರಿಸೆನ್ಸಿಯೊ ಸಮ್ಮರ್‌ವಿಲ್ ಮತ್ತೊಂದು ಗೋಲು ದಾಖಲಿಸಿ ನೆದರ್ಲೆಂಡ್ಸ್ ಗೆಲುವಿಗೆ ಮೆರುಗು ತಂದರು.

ಗೋಲುಗಳ ವಿವರ

- 5ನೇ ನಿಮಿಷ: ಬ್ರಿಯಾನ್ ಬ್ರಾಬಿ (ನೆದರ್ಲೆಂಡ್ಸ್)
- 17ನೇ ನಿಮಿಷ: ಬ್ರಿಯಾನ್ ಬ್ರಾಬಿ (ನೆದರ್ಲೆಂಡ್ಸ್)
- 47ನೇ ನಿಮಿಷ: ಕೋಡಿ ಗಾಕ್‌ಪೋ (ನೆದರ್ಲೆಂಡ್ಸ್)
- 54ನೇ ನಿಮಿಷ: ಕೋಡಿ ಗಾಕ್‌ಪೋ (ನೆದರ್ಲೆಂಡ್ಸ್)
- 59ನೇ ನಿಮಿಷ: ಆಂಥನಿ ಎಲಾಂಗಾ (ಸ್ವೀಡನ್)
- 89ನೇ ನಿ : ಕ್ರಿಸೆನ್ಸಿಯೊ ಸಮ್ಮರ್‌ವಿಲ್ (ನೆದರ್ಲೆಂಡ್ಸ್)



ಜಪಾನ್‌ಗೆ ಜಯ

• **ಮಾಂಟೆರ್ರಿ (ಮೆಕ್ಸಿಕೊ):** ಅಯಾಸಾ ಉಯೆಡಾ ಅವರ ಎರಡು ಗೋಲುಗಳ ನೆರವಿನಿಂದ ಜಪಾನ್ ತಂಡ ಟುನೀಶಿಯಾವನ್ನು 4-0 ಅಂತರದಿಂದ ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತದತ್ತ ಮತ್ತೊಂದು ಬಲಿಷ್ಠ ಹೆಜ್ಜೆ ಇಟ್ಟಿದೆ. ಈ ಗೆಲುವಿನೊಂದಿಗೆ ಜಪಾನ್ ನಾಲ್ಕು ಅಂಕಗಳೊಂದಿಗೆ ಗ್ರೂಪ್ ಎಫ್‌ನಲ್ಲಿ ನೆದರ್ಲ್ಯಾಂಡ್ಸ್‌ಗೆ ಸಮವಾಗಿದೆ. ಆದರೆ ಗೋಲುಗಳ ಅಂತರದಲ್ಲಿ ಡಚ್ ಪಡೆ ಅಗ್ರಸ್ಥಾನದಲ್ಲಿದೆ. ಇನ್ನೊಂದೆಡೆ ಸತತ ಎರಡನೇ ಸೋಲು ಕಂಡ ಟುನೀಶಿಯಾ ಟೂರ್ನಿಯಿಂದ ಅಧಿಕೃತವಾಗಿ ಹೊರಬಿದ್ದಿದೆ. ಜಪಾನ್ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಪಂದ್ಯ ಆರಂಭವಾಗಿ ಕೇವಲ ನಾಲ್ಕು ನಿಮಿಷಗಳಲ್ಲೇ ಡೈಚಿ ಕಾಮಡಾ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ತಂದರು. ಕೈಟೋ ನಕಮುರಾ ನೀಡಿದ ಅದ್ಭುತ ಕ್ರಾಸ್ ಅನ್ನು ಕಾಮಡಾ ಸುಲಭವಾಗಿ ಗೋಲಾಗಿ ಪರಿವರ್ತಿಸಿದರು.

ಗೋಲುಗಳ ವಿವರ

- 4ನೇ ನಿಮಿಷ: ಡೈಚಿ ಕಾಮಡಾ (ಜಪಾನ್)
- 1ನೇ ನಿಮಿಷ: ಉಯೆಡಾ (ಜಪಾನ್)
- 69ನೇ ನಿಮಿಷ: ಜುನ್ಯಾ ಇಟೋ (ಜಪಾನ್)
- 83ನೇ ನಿಮಿಷ: ಉಯೆಡಾ (ಜಪಾನ್)


31ನೇ ನಿಮಿಷದಲ್ಲಿ ಅಯಾಸೆ ಉಯೆಡಾ ಮಧ್ಯಭಾಗದಿಂದ ಚೆಂಡನ್ನು ಮುನ್ನಡೆಸಿಕೊಂಡು ಬಂದು ಬಾಕ್ಸ್ ಹೊರಗಿನಿಂದ ಸಿಡಿಸಿದ ಅದ್ಭುತ ಶಾಟ್ ನೇರವಾಗಿ ಗೋಲಿನ ಎಡ ಮೂಲೆಗೆ ಸೇರಿತು. ಇದರಿಂದ ಜಪಾನ್ 2-0 ಮುನ್ನಡೆ ಪಡೆಯಿತು. 69ನೇ ನಿಮಿಷದಲ್ಲಿ ಉಯೆಡಾ ನೀಡಿದ ಥ್ರೂ ಪಾಸ್‌ನ್ನು ಜುನ್ಯಾ ಇಟೋ ಗೋಲಾಗಿ ಪರಿವರ್ತಿಸಿ ಸ್ಕೋರ್ 3-0ಕ್ಕೆ ಏರಿಸಿದರು. 83ನೇ ನಿಮಿಷದಲ್ಲಿ ಉಯೆಡಾ ಅದ್ಭುತ ಹೆಡರ್ ಮೂಲಕ ತಮ್ಮ ಎರಡನೇ, ತಂಡದ ನಾಲ್ಕನೇ ಗೋಲು ದಾಖಲಿಸಿ ಜಪಾನ್‌ನ ಭರ್ಜರಿ ಗೆಲುವು ಖಚಿತ ಪಡಿಸಿದರು.

- ಕುರಕಾವೊ 0-0 ಇಕ್ವೆಡಾರ್
- ಎಲೋಯ್ ರೂಮ್‌ನಿಂದ 15 ಸೇವ್‌ಗಳು
- ಕುರಕಾವೊಗೆ ಮೊದಲ ವಿಶ್ವಕಪ್ ಅಂಕ

ಇಕ್ವೆಡಾರ್ ವಿರುದ್ಧ ಡ್ರಾ, ಗೋಲ್‌ಕೀಪರ್ ರೂಮ್ ಮಿಂಚು

ಕುರಕಾವೊ ಐತಿಹಾಸಿಕ ಸಾಧನೆ

• **ಕ್ಯಾನ್ಸಾಸ್ ಸಿಟಿ:** ಮೊದಲ ಬಾರಿಗೆ ಆಡುತ್ತಿರುವ ಕುರಕಾವೊ ತಂಡ ತನ್ನ ಇತಿಹಾಸದ ಮೊದಲ ವಿಶ್ವಕಪ್ ಅಂಕವನ್ನು ಸಂಪಾದಿಸಿದೆ. ಗೋಲ್ ಕೀಪರ್ ಎಲೋಯ್ ರೂಮ್ ಅವರ ಅಸಾಧಾರಣ ಪ್ರದರ್ಶನದ ನೆರವಿನಿಂದ ಬಲಿಷ್ಠ ಇಕ್ವೆಡಾರ್ ವಿರುದ್ಧ 0-0 ಗೋಲುರಹಿತ ಡ್ರಾ ಸಾಧಿಸಿತು. 37 ವರ್ಷದ ರೂಮ್ ಇಡೀ ಪಂದ್ಯದಲ್ಲಿ ಇಕ್ವೆಡಾರ್‌ನ ನಿರಂತರ ದಾಳಿಗಳನ್ನು ತಡೆಯುತ್ತಾ ಒಟ್ಟು 15 ಸೇವ್‌ಗಳನ್ನು ಮಾಡಿ ವಿಶ್ವಕಪ್ ಇತಿಹಾಸದ ಶ್ರೇಷ್ಠ ಗೋಲ್‌ಕೀಪಿಂಗ್ ಪ್ರದರ್ಶನಗಳಲ್ಲಿ ಒಂದನ್ನು ದಾಖಲಿಸಿದರು. 2014ರಲ್ಲಿ ಅಮೆರಿಕದ ಟಿಮ್ ಹೋವರ್ಡ್ ಮಾಡಿದ್ದ 16 ಸೇವ್‌ಗಳ ದಾಖಲೆಗೆ ಕೇವಲ ಒಂದು ಸೇವ್ ಕಡಿಮೆಯಾಯಿತು.



ಐವರಿ ಕೋಸ್ಟ್‌ಗೆ ಆಘಾತ, ನಾಕೌಟ್‌ಗೆ ಜರ್ಮನಿ

• **ಟೊರೊಂಟೊ:** ಬದಲಿ ಆಟಗಾರ ಡೆನಿಸ್ ಉಂಡಾವ್ ಅವರ ಎರಡು ಗೋಲುಗಳ ನೆರವಿನಿಂದ ಜರ್ಮನಿ ತಂಡ ಐವರಿ ಕೋಸ್ಟ್ ವಿರುದ್ಧ 2-1 ಅಂತರದ ರೋಚಕ ಗೆಲುವು ದಾಖಲಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ.

ಮೊದಲಾರ್ಧದಲ್ಲಿ ಐವರಿ ಕೋಸ್ಟ್ ಮೇಲುಗೈ ಸಾಧಿಸಿತು. 30ನೇ ನಿಮಿಷದಲ್ಲಿ ನಾಯಕ ಫ್ರಾಂಕ್ ಕೆಸ್ಸಿಯೆ ಗೋಲು ಬಾರಿಸಿ ತಂಡಕ್ಕೆ 1-0 ಮುನ್ನಡೆ ತಂದುಕೊಟ್ಟರು. ಅಮಾದ್ ಡಿಯಾಲೊ ಅವರ ಪ್ರಯತ್ನವನ್ನು ಜರ್ಮನಿಯ ರಕ್ಷಣಾಪಡೆ ತಡೆದರೂ, ರೀಬೌಂಡ್ ಆದ ಚೆಂಡನ್ನು ಕೆಸ್ಸಿಯೆ ಖಾಲಿ ಗೋಲಿನೊಳಗೆ ತಳ್ಳಿದರು. ಜರ್ಮನಿಗೆ ಮೊದಲಾರ್ಧದಲ್ಲಿ ಎರಡು ಬಾರಿ ಗೋಲು ಸಿಕ್ಕರೂ ಎರಡನ್ನೂ ರೆಫರಿ ಅಮಾನ್ಯಗೊಳಿಸಿದರು. ಇದರಿಂದ ತಂಡ ಒತ್ತಡಕ್ಕೆ ಸಿಲುಕಿತು. ದ್ವಿತೀಯಾರ್ಧದಲ್ಲಿ ಕೋಚ್ ಮಾಡಿದ ಬದಲಾವಣೆ ಫಲ ನೀಡಿತು. 60ನೇ ನಿಮಿಷದಲ್ಲಿ ಮೈದಾನಕ್ಕಿಳಿದ ಡೆನಿಸ್ ಉಂಡಾವ್ 68ನೇ ನಿಮಿಷದಲ್ಲಿ ನಾಡಿಯಂ ಅಮಿರಿ ಅವರ ದೀರ್ಘ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ಸಮಬಲ ಸಾಧಿಸಿದರು. ಪಂದ್ಯ ಡ್ರಾಗೆ ಸಾಗುತ್ತಿದೆ ಎನ್ನುವಾಗ, ಹೆಚ್ಚುವರಿ ಸಮಯದ ನಾಲ್ಕನೇ ನಿಮಿಷದಲ್ಲಿ ಫೆಲಿಕ್ಸ್ ನ್ಮೆಚಾ ಅವರ ಪಾಸ್ ಸ್ವೀಕರಿಸಿದ ಉಂಡಾವ್ ಅದ್ಭುತ ಶಾಟ್ ಮೂಲಕ ಗೋಲು ಬಾರಿಸಿ ಜರ್ಮನಿಗೆ 2-1ರ ಗೆಲುವು ತಂದುಕೊಟ್ಟರು.

- ಜರ್ಮನಿ 2-1 ಐವರಿ ಕೋಸ್ಟ್
- ಡೆನಿಸ್ ಉಂಡಾವ್: 2 ಗೋಲು (68ನೇ ನಿ., 90+4ನೇ ನಿ.)
- ಫ್ರಾಂಕ್ ಕೆಸ್ಸಿಯೆ: (30ನೇ ನಿ.)

ಕಿರು ಸುದ್ದಿ

ಅಭಯ್-ವೇಲವನ್‌ಗೆ ಪ್ರಶಸ್ತಿ

• **ಹೊಸದಿಲ್ಲಿ:** ಭಾರತದ ಅಗ್ರ ಶ್ರೇಯಾಂಕಿತ ಜೋಡಿ ಅಭಯ್ ಸಿಂಗ್ ಮತ್ತು ವೇಲವನ್ ಸೆಂಥಿಲ್‌ಕುಮಾರ್, ಭಾನುವಾರ ಮಲೇಷ್ಯಾದ ಸರವಾಕ್‌ನಲ್ಲಿ ನಡೆದ ಏಷ್ಯನ್ ಡಬಲ್ಸ್ ಸ್ಕ್ವ್ಯಾಷ್ ಚಾಂಪಿಯನ್‌ಶಿಪ್‌ನಲ್ಲಿ ಸತತ ಮೂರನೇ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಕಾಂಟಿನೆಂಟಲ್ ಗೇಮ್ಸ್‌ನಲ್ಲಿ ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿದರು. ಒಂದು ಪಂದ್ಯದಲ್ಲಿ ಹಿನ್ನಡೆ ಅನುಭವಿಸಿದ ಭಾರತೀಯ ಜೋಡಿ, ಪಾಕಿಸ್ತಾನದ ಎರಡನೇ ಶ್ರೇಯಾಂಕದ ನಾಸಿರ್ ಇಕ್ಬಾಲ್ ಮತ್ತು ನೂರ್ ಜಮಾನ್ ಜೋಡಿಯನ್ನು 47 ನಿಮಿಷಗಳಲ್ಲಿ 7-11, 11-7, 11-2 ಸೆಟ್‌ಗಳಿಂದ ಸೋಲಿಸಿ ಪರಾಕ್ರಮ ಮೆರೆಯಿತು. ಈ ಗೆಲುವು ಅಭಯ್ ಮತ್ತು ವೇಲವನ್ ಅವರ ಪುರುಷರ ಡಬಲ್ಸ್ ಪ್ರಶಸ್ತಿಗಳ ಹ್ಯಾಟ್ರಿಕ್ ಅನ್ನು ಪೂರ್ಣಗೊಳಿಸಿತು.

300 ಮಂದಿಯಿಂದ 21 ಆಸನ: ಗಿನ್ನಿಸ್ ದಾಖಲೆ



• **ಬೆಂಗಳೂರು:** 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ದ್ರಾವಿಡ್-ಪಡುಕೋಣೆ ಅಕಾಡೆಮಿಯಲ್ಲಿ ಅಕ್ಷರ್ ಯೋಗ ಕೇಂದ್ರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗಿನ್ನಿಸ್ ದಾಖಲೆಯೊಂದು ಆಯಿತು. ಒಟ್ಟು 21 ಆಸನಗಳನ್ನು ಸುಮಾರು 300 ಮಂದಿ ಸ್ಪರ್ಧಾಳುಗಳು ನಿರ್ವಹಿಸಿದ್ದು, ಒಂದೇ ದಿನ 21 ಆಸನಗಳು ಕೂಡ ಗಿನ್ನಿಸ್ ದಾಖಲೆಗೆ ಒಳಗಾಗಿವೆ. ಹಿಮಾಲಯನ್ ಸಿದ್ಧ ಅಕ್ಷರ್ ಗುರೂಜಿ ಸಾರಥ್ಯದಲ್ಲಿ ಯೋಗಾಸನ ಹಾಗೂ ತಾರಕ್ ಮೆಡಿಟೇಷನ್ ಮಾಡಲಾಗಿದ್ದು, ಅಧಿಕೃತ ಗಿನ್ನಿಸ್ ಸಂಸ್ಥೆಯ ಅಧಿಕಾರಿಗಳು ಈ ದಾಖಲೆಯನ್ನು ಅಧಿಕೃತವಾಗಿ ಪುಸ್ತಕದಲ್ಲಿ ಸೇರ್ಪಡೆಗೊಳಿಸಿದ್ದಾರೆ.

ಜೂ. ಜಿಮ್ನಾಸ್ಟಿಕ್: ಭಾರತಕ್ಕೆ 2 ಪದಕ

• **ಹೊಸದಿಲ್ಲಿ:** ಚೀನಾದ ಜುನಿಯಲ್ಲಿ ಭಾನುವಾರ ನಡೆದ ಏಷ್ಯನ್ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ ಚಾಂಪಿಯನ್‌ಶಿಪ್‌ನ ಜೂನಿಯರ್ ಪುರುಷರ ವಾಲ್ಟ್ ಸ್ಪರ್ಧೆಯಲ್ಲಿ ಭಾರತೀಯ ಜಿಮ್ನಾಸ್ಟ್‌ಗಳಾದ ಹರ್ಷಿತ್ ದಾಮೋದರನ್ ಮತ್ತು ಅಕ್ಷತ್ ಬಿಜಾಲ್ ಚಿನ್ನ-ಬೆಳ್ಳಿ ಪದಕ ಗಳಿಸುವ ಮೂಲಕ ಇತಿಹಾಸ ಬರೆದರು. ಹರ್ಷಿತ್ 13.649 ಅಂಕಗಳೊಂದಿಗೆ ವೇದಿಕೆಯನ್ನು ಅಗ್ರಸ್ಥಾನದಲ್ಲಿಟ್ಟರೆ, ಅಕ್ಷತ್ 13.433 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ಹರ್ಷಿತ್ ಎರಡು ಸ್ಥಿರ ವಾಲ್ಟ್‌ಗಳನ್ನು ಪ್ರದರ್ಶಿಸಿದರು, ಅವರ ಮೊದಲ ಪ್ರಯತ್ನದಲ್ಲಿ 13.866 ಅಂಕಗಳನ್ನು ಗಳಿಸಿದರು, ಇದು 4.8 ರ ಕಷ್ಟದ (ಡಿ) ಸ್ಕೋರ್ ಮತ್ತು ಅವರ ಎರಡನೇ ವಾಲ್ಟ್‌ನಲ್ಲಿ 13.433 ಅಂಕಗಳನ್ನು ಗಳಿಸಿತು. ಅವರ ಪ್ರಯತ್ನವು ದೇಶವಾಸಿ ಅಕ್ಷತ್‌ಗಿಂತ ಮೊದಲು ಅಗ್ರ ಸ್ಥಾನವನ್ನು ಗಳಿಸಿತು.

ಬಾಕ್ಸಿಂಗ್: ಭಾರತಕ್ಕೆ 12 ಪದಕ

• **ಹೊಸದಿಲ್ಲಿ:** ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವ ಭಾರತದ ಬಾಕ್ಸರ್‌ಗಳು ಎಂಟು ಚಿನ್ನ ಸೇರಿದಂತೆ 12 ಪದಕಗಳನ್ನು ಗೆದ್ದು, ಚೀನಾದಲ್ಲಿ ನಡೆದ ಅಸ್ತಾನಾ 56 ನೇ ಗ್ರ್ಯಾಂಡ್ ಪ್ರಿಕ್ಸ್ ಉಸ್ತಿ ನಾಡ್ ಲ್ಯಾಬೆಮ್‌ನಲ್ಲಿ ವಿಶ್ವಾಸ ಹೆಚ್ಚಿಸಿಕೊಂಡರು. ಐದು ಸದಸ್ಯರ ಮಹಿಳಾ ತಂಡವು ನಾಲ್ಕು ಚಿನ್ನದ ಪದಕಗಳು ಮತ್ತು ಒಂದು ಬೆಳ್ಳಿಯನ್ನು ಗೆಲ್ಲುವ ಮೂಲಕ ಮುನ್ನಡೆ ಸಾಧಿಸಿತು. ಒಲಿಂಪಿಕ್ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ (75 ಕೆಜಿ), ಹಾಲಿ ವಿಶ್ವ ಚಾಂಪಿಯನ್ ಪ್ರೀತಿ ಪವಾರ್ (54 ಕೆಜಿ), ಸಾಕ್ಷಿ ಚೌಧರಿ (51 ಕೆಜಿ) ಮತ್ತು ಪ್ರಿಯಾ ಘಂಘಾಸ್ (60 ಕೆಜಿ) ಎಲ್ಲರೂ ತಮ್ಮ ಫೈನಲ್‌ಗಳಲ್ಲಿ ಸರ್ವಾನುಮತದ ಗೆಲುವು ಸಾಧಿಸುವ ಮೂಲಕ ಚಿನ್ನ ಗೆದ್ದರು. ಪರ್ವೀನ್ ಹೂಡಾ (65 ಕೆಜಿ) ಬೆಳ್ಳಿ ಪದಕವನ್ನು ಸೇರಿಸಿ ಮಹಿಳಾ ತಂಡದ ಪ್ರಭಾವಶಾಲಿ ಪ್ರದರ್ಶನವನ್ನು ಪೂರ್ಣಗೊಳಿಸಿದರು. ಪುರುಷರ ತಂಡವು ನಾಲ್ಕು ಚಿನ್ನದ ಪದಕಗಳೊಂದಿಗೆ ಮಹಿಳೆಯರ ಯಶಸ್ಸನ್ನು ಸರಿಗಟ್ಟಿತು. ಜಾದುಮಣಿ ಸಿಂಗ್ (55 ಕೆಜಿ), ಸಚಿನ್ (60 ಕೆಜಿ), ಅಂಕುಶ್ (80 ಕೆಜಿ) ಮತ್ತು ನರೇಂದರ್ (+90 ಕೆಜಿ) ಅವರು ವಿಭಾಗಗಳಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.

ಮಹಿಳೆಯರ ಎಫ್‌ಐಎಚ್ ನೇಷನ್ಸ್ ಕಪ್!
ಭಾರತ ಚಾಂಪಿಯನ್



• **ಆಕ್ಲೆಂಡ್:** ಹಾಕಿ ಕ್ಷೇತ್ರದಲ್ಲಿ ಭಾರತ ಮತ್ತೊಮ್ಮೆ ಇತಿಹಾಸ ಬರೆಯಿತು. ವಿಶ್ವ ಹಾಕಿ ಸಂಸ್ಥೆ(ಎಫ್‌ಐಎಚ್) ನಡೆಸುವ ಪ್ರೊ. ಲೀಗ್ ನೇಷನ್ಸ್ ಕಪ್ ಪಂದ್ಯಾವಳಿಯನ್ನು ಬಾಚಿಕೊಂಡ ಭಾರತ ಮಹಿಳಾ ಹಾಕಿ ತಂಡವು ದೇಶದೇ ಸಂಭ್ರಮ ಪಡುವಂತೆ ಮಾಡಿದೆ.

ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಭಾರತ ಭರ್ಜರಿ ಪ್ರದರ್ಶನ ನೀಡಿತು. ಆತಿಥೇಯರ ವಿರುದ್ಧವೇ ನಡೆದ ಪಂದ್ಯದಲ್ಲಿ 2-0ರಿಂದ ಪ್ರಾಬಲ್ಯ ಸಾಧಿಸಿತು. ನವನೀತ್ ಕೌರ್ 4ನೇ ನಿಮಿಷ, ಸುನೇಲಿತಾ 15ನೇ ನಿಮಿಷದ ವೇಳೆ ಗೋಲು ಮಾಡಿದರು.

ಪಂದ್ಯದಲ್ಲಿ ಮೊದಲಿನಿಂದಲೂ ಎದುರಾಳಿಗಳು ಬಾಲ್ ಮೇಲೆ ಹಿಡಿತ ಸಾಧಿಸಿದ್ದರು. ಆದರೆ ಮೊದಲ ಗೋಲು ಗಳಿಸಲು ಭಾರತಕ್ಕೆ ಕೇವಲ ಒಂದು ಅವಕಾಶ ಸಾಕಿತ್ತು. ಅದು ನಾಲ್ಕನೇ ನಿಮಿಷದ ವೇಳೆ ನವನೀತ್ ಕೌರ್‌ಗೆ ಸಿಕ್ಕಿತ್ತು. ಮುಂದುವರಿಸುತ್ತಾ ಭಾರತ 15ನೇ ನಿಮಿಷದಲ್ಲಿ ಮುನ್ನಡೆಯನ್ನು ವಿಸ್ತರಿಸಿತು. ಪಂದ್ಯವಿಡೀ ಗೋಲು ಬಿಟ್ಟುಕೊಡದ ರಕ್ಷಣಾ ವಿಭಾಗ ಪಂದ್ಯದ ಗೆಲುವನ್ನು ಖಚಿತಪಡಿಸಿತು. ಲಾಲ್ರೆಮ್‌ಸಿಯಾಮಿ ಪಂದ್ಯಶ್ರೇಷ್ಠ ಆಟಗಾರ್ತಿ ಗೌರವ ಗೆದ್ದುಕೊಂಡರು. ದೀಪಿಕಾ ಪಂದ್ಯಾವಳಿಯ ಬೆಸ್ಟ್ ಸ್ಕೋರರ್‌ಗಳಲ್ಲಿ ಒಬ್ಬರಾದರು. 6 ಗೋಲುಗಳೊಂದಿಗೆ ಗಮನ ಸೆಳೆದರು. 2022ರಲ್ಲೇ ಶುರುವಾಗಿರುವ ಈ ನೇಷನ್ಸ್ ಕಪ್ ಪಂದ್ಯಾವಳಿಯಲ್ಲಿ ಭಾರತ ಎರಡನೇ ಬಾರಿ ಗೆದ್ದುಕೊಂಡಿದೆ. ಪಂದ್ಯಾವಳಿಯುದ್ದಕ್ಕೂ ಭಾರತ ಮಿಂಚುತ್ತಲೇ ಪ್ರದರ್ಶನ ನೀಡಿತು. ಮೊದಲಿಗೆ ಅಮೆರಿಕ ವಿರುದ್ಧ ಆಡಿದ್ದ ಸಲೀಮಾ ಬಳಗ, 3-2ರಿಂದ ಗೆದ್ದುಕೊಂಡಿತು. ನಂತರ ಜಪಾನ್ ತಂಡವನ್ನು ಎದುರಿಸಿತ್ತು. 2-1ರಿಂದ ಅವರನ್ನೂ ಮಣಿಸಿದ ಭಾರತ ನಂತರ ಉರುಗ್ವೆ 3-2ರಿಂದ ಗೆದ್ದುಕೊಂಡಿತ್ತು. ಎಲ್ಲದಕ್ಕೂ ಹೆಚ್ಚಾಗಿ ಭಾರತ ಸೆಮಿಫೈನಲ್ ಪಂದ್ಯದಲ್ಲಿ ಚಿಲಿ ತಂಡವನ್ನು 6-0ರಿಂದ ಸೋಲಿಸಿ ಆತ್ಮವಿಶ್ವಾಸ ಗಳಿಸಿತ್ತು. ಈ ಗೆಲುವಿನ ಬಳಿಕ ಭಾರತ ಹಾಕಿ ಸಂಸ್ಥೆಯು ತಂಡದ ಪ್ರತಿಯೊಬ್ಬರಿಗೂ ತಲಾ 3 ಲಕ್ಷ ರೂ. ಬಹುಮಾನ ಘೋಷಿಸಿದೆ. ಅಲ್ಲದೆ ಸಪೋರ್ಟಿಂಗ್ ಸ್ಟಾಫ್‌ಗೆ 1.5 ಲಕ್ಷ ರೂ. ನೀಡಲಿದೆ.

ಪ್ರಧಾನಿ ಮೋದಿ ಶ್ಲಾಘನೆ

ಗೆಲುವಿನ ಬಗ್ಗೆ ಖುಷಿ ವ್ಯಕ್ತ ಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ತಮ್ಮ ಎಕ್ಸ್ ಖಾತೆಯಲ್ಲಿ, ನೇಷನ್ಸ್ ಕಪ್ ಗೆದ್ದ ಭಾರತ ತಂಡಕ್ಕೆ ಅಭಿನಂದನೆಗಳು. ಪಂದ್ಯಾವಳಿಯುದ್ದಕ್ಕೂ ನೀಡಿದ ಅತ್ಯುತ್ತಮ ಪ್ರದರ್ಶನವೇ ಗೆಲುವಿಗೆ ಕಾರಣ. ತಂಡಕ್ಕೆ ಶುಭಹಾರೈಸುತ್ತೇನೆ. ಈ ಗೆಲುವು ಭಾರತದ ಹಾಕಿ ಆಟಗಾರರಿಗೆ ಪ್ರೇರಣೆ ನೀಡಲಿ ಎಂದು ಬರೆದುಕೊಂಡಿದ್ದಾರೆ.

ಕಾಪ್ ಅಬ್ಬರ, ಭಾರತಕ್ಕೆ ಸೋಲು

• **ಮ್ಯಾಂಚೆಸ್ಟರ್:** ಮಹಿಳೆಯರ ಟಿ20 ವಿಶ್ವಕಪ್‌ನಲ್ಲಿನ ಭಾರತ ಗೆಲುವಿನ ಅಭಿಯಾನಕ್ಕೆ ದಕ್ಷಿಣ ಆಫ್ರಿಕಾ ತಡೆಯೊಡ್ಡಿದೆ. ಮಾರಿಜಾನ್ ಕಾಪ್ ಅವರ 81★ ರನ್‌ಗಳ ಬ್ಯಾಟಿಂಗ್‌ನೊಂದಿಗೆ ಹರಿಣರು ಹ್ಯಾಟ್ರಿಕ್ ಗೆಲುವಿನ ಗುರಿಯೊಂದಿಗೆ ಆಡಿದ ಭಾರತವನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ಬೌಲಿಂಗ್ ಪಿಚ್‌ನಲ್ಲಿ ಹರಿಣರೇ ಪ್ರಾಬಲ್ಯ ಸಾಧಿಸಿದರು. ಬ್ಯಾಟಿಂಗ್ ಆಹ್ವಾನ ಕೊಟ್ಟು 158 ರನ್‌ಗಳಿಗೆ ತಡೆಯೊಡ್ಡಿತು. ಶೆಫಾಲಿ ವರ್ಮಾ 31, ದೀಪ್ತಿ ಶರ್ಮ 27 ಮತ್ತು ಕೌರ್ 24 ರನ್ ಗಳಿಸಿದರು. ರಿಚಾ ಘೋಷ್ 15, ಸ್ಮೃತಿ ಮಂಧಾನ 17 ಗಳಿಸಿಯ ಕೊಡುಗೆ ನೀಡಿ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ದ.ಆಫ್ರಿಕಾ ಆರಂಭಿಕ ಆಘಾತ ಎದುರಿಸಿತು. ಶ್ರೀ ಚರಣಿ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದರೂ, ಮಾರಿಜಾನ್ ಕಾಪ್, ಟ್ರಿಟ್ಸ್ ಅವರ ಸಮಯೋಚಿತ ಬ್ಯಾಟಿಂಗ್‌ನೊಂದಿಗೆ ಮಿಂಚಿತು. ಗುರಿ ಬೆನ್ನತ್ತಿದ ದ.ಆಫ್ರಿಕಾ ಪಡೆಗೆ ಆರಂಭಿಕ ಆಘಾತವಾದರೂ ಮಾರಿಜಾನ್ ಕಾಪ್ ತಾಳ್ಮೆಯುತ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಟ್ರಿಟ್ಸ್ ಸಾಥ್ ಪಡೆದು ಕೊನೆಯವರೆಗೂ ಕ್ರೀಸ್‌ನಲ್ಲಿದ್ದ ಅವರು, ಅಜೇಯ 81 ರನ್‌ನೊಂದಿಗೆ ಪಂದ್ಯ ಗೆಲ್ಲಿಸಿದರು. ದ.ಆಫ್ರಿಕಾ 19.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಪಂದ್ಯ ಗೆದ್ದಿದೆ.

ಸಂಕ್ಷಿಪ್ತ ಸ್ಕೋರ್

ಭಾರತ 20 ಓವರ್‌ಗಳಲ್ಲಿ 158/7: ಶೆಫಾಲಿ 31, ದೀಪ್ತಿ 29; ಕಾಪ್ 27/2, ಇಸ್ಮೈಲ್ 28/2
ದ.ಆಫ್ರಿಕಾ 19.1 ಓವರ್‌ಗಳಲ್ಲಿ 161/4: ಕಾಪ್ 81★, ಟ್ರಿಟ್ಸ್ 40; ಚರಣಿ 24/3

ಮಳೆಯಿಂದ ಹುಬ್ಬಳ್ಳಿ-ಮಂಗಳೂರು ಪಂದ್ಯ ರದ್ದು

• **ಮೈಸೂರು:** ಭಾನುವಾರ ಮಧ್ಯಾಹ್ನ ನಡೆಯಬೇಕಿದ್ದ ಹುಬ್ಬಳ್ಳಿ ಟೈಗರ್ಸ್ ಮತ್ತು ಕೋಸ್ಟಲ್ ಕಿಂಗ್ಸ್ ಮಂಗಳೂರು ನಡುವಿನ ಪಂದ್ಯವು ಒಂದೂ ಬಾಲ್ ಆಗದೇ ರದ್ದಾಯಿತು. ಮೈಸೂರಿನ ಶ್ರೀಕಂಠದತ್ತ ಒಡೆಯರ್ ಕ್ರೀಡಾಂಗಣದಲ್ಲಿ ಬಿಟ್ಟೂ ಬಿಡದೆ ಸುರಿದ ಮಳೆಯಿಂದಾಗಿ ಪಂದ್ಯ ರದ್ದಾಗಿದೆ. ಅಲ್ಲದೆ, ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಶಿವಮೊಗ್ಗ ನಡುವೆ ನಡೆಬೇಕಿದ್ದ ಪಂದ್ಯವೂ 14 ಓವರ್‌ಗೆ ಇಳಿಸಲಾಗಿತ್ತು. ಮತ್ತೊಂದೆಡೆ ಮೈಸೂರು ವಾರಿಯರ್ಸ್ ತಂಡವನ್ನು 100 ರನ್ ಮಾತ್ರಕ್ಕೆ ಆಲೌಟ್ ಮಾಡಿದ ಶಿವಮೊಗ್ಗ ತಂಡವು ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿತು. ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಅವನೀಶ್ ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 190 ರನ್ ಗಳಿಸಿದ್ದ ಯೋಧಾಸ್ 14.5 ಓವರ್‌ಗಳಲ್ಲಿ 100 ರನ್‌ಗೆ ಮೈಸೂರು ವಾರಿಯರ್ಸ್ ಅನ್ನು ಆಲೌಟ್ ಮಾಡಿದೆ. ಯಶ್ ರಾಜ್ ಪೂಂಜಾ 30 ರನ್ ನೀಡಿ 4 ವಿಕೆಟ್ ಕಿತ್ತು ಪಂದ್ಯದ ಹೀರೋ ಅನಿಸಿಕೊಂಡರು.

ವೈಭವ್ ವಿಕ್ರಮ, ಭಾರತ ತ್ರಿವಿಕ್ರಮ!

• **ದಂಬುಲ್ಲಾ:** ವೈಭವ್ ಸೂರ್ಯವಂಶಿ ಅವರ ಬಗ್ಗೆ ನಡೆಯುವ ಚರ್ಚೆಗೆ ಇನ್ನಷ್ಟು ವಿಷಯ ಸಿಕ್ಕಿದೆ. ಭಾರತ ತಂಡಕ್ಕೆ ಆಯ್ಕೆಯಾಗಿದ್ದ 15 ವರ್ಷದ ವೈಭವ್ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಹೊಸ ಕಿಚ್ಚು ಬರೆದರು. ಇದರೊಂದಿಗೆ ಭಾರತವು ಅಫ್ಘಾನಿಸ್ತಾನ ಮತ್ತು ಶ್ರೀಲಂಕಾ ಜತೆಗೆ ಆಡಿದ ಏಕದಿನ ತ್ರಿಕೋನ ಸರಣಿ ಬಾಚಿಕೊಂಡಿತು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ಎ ತಂಡವನ್ನು 66 ರನ್‌ಗಳಿಂದ ಮಣಿಸಿದ ಯುವ ಭಾರತ, ಭವಿಷ್ಯದ ಭರವಸೆ ಮೂಡಿಸಿತು. ಮೊದಲು ಬ್ಯಾಟಿಂಗ್ ಮಾಡಿ 377 ರನ್ ಗಳಿಸಿದ ಭಾರತ ಎ ಶ್ರೀಲಂಕಾ ತಂಡವನ್ನು 311 ರನ್‌ಗಳಿಗೆ ಆಲೌಟ್ ಮಾಡಿ ಮೆರೆದಾಡಿತು.

ಪ್ರಮುಖ ಸುದ್ದಿಯಾದವರೆ ವೈಭವ್. ಆಡಿದ ಕೇವಲ 29 ಎಸೆತದಲ್ಲಿ 94 ರನ್ ಬಾರಿಸಿ ಕ್ರಿಕೆಟ್ ಅಭಿಮಾನಿಗಳ ಹುಬ್ಬೇರುವಂತೆ ಮಾಡಿದರು. ಉತ್ತಮ ಬ್ಯಾಟಿಂಗ್ ಮಾಡಿದ ತಿಲಕ್(67), ರುತುರಾಜ್(40), ಕುಮಾರ್ (36) ಸ್ಕೋರ್ ಹಿಗ್ಗಿಸಿದರೆ, 15 ಬಾಲ್‌ಗಳಲ್ಲೇ 39 ರನ್ ದಂಡಿಸಿದ ಅನುಕುಲ್ ರಾಯ್ ಕಟ್ಟಿದ್ದ ಇನ್ನಿಂಗ್ಸ್ ಕಳೆ ಇಟ್ಟರು. ಶ್ರೀಲಂಕಾ ಪರ ಪವನ್ ರತ್ನಾಯಕೆ 62 ರನ್ ಗಳಿಸಿ ಹೋರಾಡಿದರು.

ವೈಭವ್ ವಿಸ್ಮಯ: ಸೂರ್ಯವಂಶಿಯ ಹವಾ ವಿಶ್ವದಲ್ಲೆಡೆ ಹರಡುತ್ತಿರುವಾಗಲೇ ಮತ್ತೊಂದು ಮಾಸ್ಟರ್‌ಕ್ಲಾಸ್ ಪ್ರದರ್ಶಿಸಿದ ವೈಭವ್ ಅಭಿಮಾನಿಗಳ ಮಧ್ಯೆ ಮತ್ತೆ ಮಿಂಚಿದರು. ಭಾರತ ಬ್ಯಾಟಿಂಗ್ ಆಯ್ದುಕೊಂಡರೆ ವೈಭವ್ ದಂಡಿಸುವ ತಂತ್ರ ಅರಿಸಿಕೊಂಡರು. ಮೊದಲನೇ ಬಾಲ್‌ನಿಂದಲೂ ದಂಡಿಸಲಾರಂಭಿಸಿ 10 ಬೌಂಡರಿ, 8 ಸಿಕ್ಸರ್ ಬಾರಿಸಿಟ್ಟರು. ಮುಖ್ಯವಾಗಿ 11 ಎಸೆತದಲ್ಲೇ ಅರ್ಧಶತಕ ಬಾರಿಸಿದರು. 29 ಬಾಲ್‌ಗಳಲ್ಲಿ 94 ರನ್ ಗಳಿಸಿ, ಎ ತಂಡಗಳ ಮಧ್ಯೆ ನಡೆಯುವ ಕ್ರಿಕೆಟ್‌ನ ಸರದಾರ ಅನಿಸಿದ್ದಲ್ಲದೆ ವಿಶ್ವ ದಾಖಲೆಗಳನ್ನೂ ಮಾಡಿದರು.

ಸಂಕ್ಷಿಪ್ತ ಸ್ಕೋರ್

ಭಾರತ ಎ 50 ಓವರ್‌ಗಳಲ್ಲಿ 377/9: ವೈಭವ್ 94, ತಿಲಕ್ 67, ಗಾಯಕ್ವಾಡ್ 40; ದವಿಂದು ಫರ್ನಾಂಡೊ 72/2
ಶ್ರೀಲಂಕಾ ಎ 47.1 ಓವರ್‌ಗಳಲ್ಲಿ 311/10: ಪವನ್ 62, ಸದೀರ 52; ಯಶ್ 45/3, ವಿಪ್ರಾಜ್ 60/3

ಏಕದಿನ ತಂಡಕ್ಕೆ ಮರಳಿದ ಕಿಂಗ್ ಕೊಹ್ಲಿ

• **ಮುಂಬೈ:** ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಏಕದಿನ ಸರಣಿಗೆ ತಂಡದ ಪ್ರಮುಖ ಆಟಗಾರ ಕಿಂಗ್ ವಿರಾಟ್ ಕೊಹ್ಲಿ ಮರಳಿದ್ದು, ಶನಿವಾರವಷ್ಟೇ ಅಫ್ಘಾನಿಸ್ತಾನ ವಿರುದ್ಧ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಶತಕ ಬಾರಿಸಿದ್ದ ಯಶಸ್ವಿ ಜೈಸ್ವಾಲ್ ಅವರಿಗೆ ಗೇಟ್‌ಪಾಸ್ ನೀಡಲಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಏಕದಿನ ಸರಣಿ, ಏಕದಿನ ವಿಶ್ವಕಪ್ ತಯಾರಿಗಾಗಿ ತಂಡವನ್ನು ಪ್ರಕಟ ಸಲಾಗಿದ್ದು, ಅಭಿಮಾನಿಗಳ ಕಾಯುವಿಕೆಗೆ ತೆರೆ ಬಿದ್ದಿದೆ. ಯುವ ಜನರನ್ನು ಮೈದಾನಕ್ಕೆ ತರುವ ವಿರಾಟ್ ಕೊಹ್ಲಿ ಅವರು ಫಿಟ್ ಆಗಿದ್ದು ತಂಡಕ್ಕೆ ಮರಳಿದ್ದಾರೆ. ಆದರೆ ಮತ್ತೊಂದು ಪ್ರಮುಖ ಸುದ್ದಿಯಲ್ಲಿ ಆರಂಭಿಕ ಜೈಸ್ವಾಲ್ ತಂಡದಿಂದ ಹೊರಬಿದ್ದಿದ್ದಾರೆ.

ವಿರಾಟ್ ಕೊಹ್ಲಿ ಅವರ ಆಗಮನದೊಂದಿಗೆ ಅಭಿಮಾನಿಗಳು ಹುಮ್ಮಸ್ಸಿನಲ್ಲಿದ್ದರೂ ತಂಡದಲ್ಲಿ ಆಶ್ಚರ್ಯ ಆಯ್ಕೆಗಳ ಗಂಟುಗಳೇ ಹೆಚ್ಚಿವೆ. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಮೊಹಮ್ಮದ್ ಶಮಿ ಅವರಿಗೆ ಕೊಕ್ ನೀಡಲಾಗಿದೆ. ಏಕದಿನ ತಂಡದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದ ಮೊಹಮ್ಮದ್ ಸಿರಾಜ್ ಅವರನ್ನೂ ಹೊರಗಿಡಲಾಗಿದೆ. ಅಫ್ಘಾನಿಸ್ತಾನ ವಿರುದ್ಧದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಗುರ್ನೂರ್ ಬ್ರಾರ್ ಅವರಿಗೆ ಮತ್ತೊಂದು ಅವಕಾಶ ನೀಡಲಾಗಿದ್ದು, ತಂಡಕ್ಕೆ ಹರ್ಷಿತ್ ರಾಣಾ ಕಂಬ್ಯಾಕ್ ಮಾಡಿದ್ದಾರೆ.



ತಂಡದಿಂದಲೇ ಹೊರಬಿದ್ದ ಜಡ್ಡು?: ಕಳೆದ ಕೆಲವು ಸರಣಿಗಳಲ್ಲಿ ಭಾರತ ತಂಡದಿಂದಲೇ ಹೊರಬಿದ್ದಿರುವ ಹಿರಿಯ ಆಲ್‌ರೌಂಡರ್ ರವೀಂದ್ರ ಜಡೇಜಾಗೆ ಮತ್ತೆ ಕೊಕ್ ಕೊಡಲಾಗಿದ್ದು, ಆಯ್ಕೆಯಲ್ಲಿ ಪರಿಗಣಿಸಲಾಗಿಲ್ಲ. ಟೆಸ್ಟ್ ತಂಡದಿಂದಲೂ ಅವರನ್ನು ಹೊರಗಿಡಲಾಗಿದೆ. ಹಿಂದೆ ನಡೆದಿರುವ ಏಕದಿನ ಪಂದ್ಯಗಳಲ್ಲಿ ಕೊನೆಯ ಬಾರಿ ಕಾಣಿಸಿಕೊಂಡಿದ್ದು ಜನವರಿಯಲ್ಲಿ, ನಂತರ ಐಪಿಎಲ್ ಶುರುವಾದರೂ ಅಫ್ಘಾನಿಸ್ತಾನ ವಿರುದ್ಧದ ಪಂದ್ಯಕ್ಕೆ ಅವರನ್ನು ಆಯ್ಕೆ ಮಾಡಿರಲೇ ಇಲ್ಲ. ಇಂಗ್ಲೆಂಡ್ ಪಂದ್ಯಗಳಿಗೂ ಅವರನ್ನು ಆಯ್ಕೆಯಲ್ಲಿ ಪರಿಗಣಿಸಲಾಗಿಲ್ಲ. ಪರಿಣಾಮ ಅವರನ್ನು ತಂಡದಿಂದಲೇ ಹೊರಗಿಟ್ಟರೆ ಎಂಬ ಪ್ರಶ್ನೆ ಸಹಜವಾಗಿ ಬರುತ್ತಿದೆ.


ಭಾರತ ತಂಡ

ಶುಭಮನ್ ಗಿಲ್(ನಾಯಕ), ಶ್ರೇಯಸ್ ಅಯ್ಯರ್(ಉಪನಾಯಕ), ರೋಹಿತ್ ಶರ್ಮ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ಇಶಾನ್ ಕಿಶನ್(ವಿ.ಕೀ), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ನಿತೀಶ್‌ಕುಮಾರ್ ರೆಡ್ಡಿ, ಕುಲ್ದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಪ್ರಸಿದ್ಧ ಕೃಷ್ಣ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಗುರ್ನೂರ್ ಬ್ರಾರ್.

- ಸಿರಾಜ್‌ಗೆ ಕೊಕ್
- ಹೊರಬಿದ್ದ ಪಂತ್
- ಅಕ್ಷರ್ ಪಟೇಲ್‌ಗೆ ಅವಕಾಶ
- ಬೂಮ್ರಾ ಕಂಬ್ಯಾಕ್

ಪದಬಂಧ

ರಾಜಾ ಸಂಗಮೇಶ ಹಿರೇಮಠ



6022

ಎಡದಿಂದ ಬಲಕ್ಕೆ
1.ಕೈ-ಕಾಲಿಗೆ ಧರಿಸುವ ಗಟ್ಟಿಮುಟ್ಟಾದ ಆಭರಣ (3)
6.ದ್ವಾರಕೇಶ್-ವಿಷ್ಣುವರ್ಧನ್-ಮಂಜುಳಾ ಅಭಿನಯದ ಹಾಸ್ಯಚಿತ್ರ (5)
7.ತೇಗೆ ಜಾತಿಯ ಬೇಟೆಯಾಡುವ ಹಕ್ಕಿ (3)
8.ಕರುಳಿನ ನಡುವೆ ಒಪ್ಪಂದದ ಪತ್ರವ್ಯಗಳವ (3)
9.ಕಿರು-ಒಗೆದು ರುಚಿಯುಳ್ಳದ್ದು (2)
10.ಒಳ್ಳೆಯ ಬಣ್ಣದ ಬಂಗಾರ (2)
11.ಮೂರು ಮೈ ಯುಳ್ಳ ಪಾರದರ್ಶಕ ಘನಾಕೃತಿ (3)
12.ಭರಣಿಯನ್ನು ಉಲ್ಟಾ ಇಟ್ಟಿದ್ದಾರೆ (3)
15. ಒಂದೇ ಕಾಲಘಟ್ಟಕ್ಕೆ ಸೇರಿದ ವ್ಯಕ್ತಿ (5)
17. ಬಣ್ಣದ ತಗಡು ಉಲ್ಟಾ ಕಾಣುತ್ತಿದೆ (3)

ಮೇಲಿನಿಂದ ಕೆಳಕ್ಕೆ
1.ಚಿನ್ನದ ಮೈ ಬಣ್ಣವುಳ್ಳವನು (4)
2.ಹಿಂದಿನಂತೆ ನಡೆಯುವುದು-ಸಂಪ್ರದಾಯ ಪಾಲನೆ (6)
3.ಒಂದು ಇಂಚು ಅಳತೆಯ ಬೆರಳು (3)
4.ವಾರಣಾಸಿಯ ಮತ್ತೊಂದು ಹೆಸರು (2)
5.ಗಡಿಮೂಲೆಕೆಯನ್ನು ಹೀಗೂ ಹೇಳಬಹುದು (4)
8.ನಮ್ಮ ಭಾಷೆಯ ಘಮವನ್ನು ಸೂಚಿಸುವ ಪದ್ಯ (6)
11.ನಮ್ಮ ಊರಿನದ ನಮ್ಮ ಸುತ್ತಲಿನ ವಾತಾವರಣ (4)
13. ಕರುಳಿನ ನಡುವೆ ತುಂಡು ಮಾಡುವಿಕೆಯದೆ (4)
14. ಮಿಥಿಲೆಯ ರಾಜ-ಸೀತೆಯ ತಂದೆ (3)
16. ಕಪ್ಪು ಮತ್ತು ಅರ್ಥಗಳ ಸುಂದರ ಜೋಡಣೆಯ ಸಾಹಿತ್ಯ (2)

6021 ಉತ್ತರ

ಎಡದಿಂದ ಬಲಕ್ಕೆ:
1.ಮಣಿಗಾರ
3.ಸಮುದರ್ಶಿ 5.ಹಿಮ್ಮುಖ
6.ನವಜಾತ 8.ಸರದಿ
9.ಕಾಂತಾರ 11.ಗಣಪತಿ
13.ಸುಂದರ 14.ನಳಪಾಕ
15.ಗತಿಗೇಡು

ಮೇಲಿನಿಂದ ಕೆಳಕ್ಕೆ :
1.ಮಣ್ಣಾಸ 2.ರಜತ 3.ಸಮ
4.ದಶಕ್ಷರ 7.ಜಾಲಗಾರ
8.ಸಮಾಧಾನ
10.ತಾಳಮೇಳ 11.ಗರಗ
12.ತಿರಡಿ 13.ಸುಂಕ

ಕಿರುಸುದ್ದಿ

ಪಿಎಂ-ಕಿಸಾನ್‌ನ 23ನೇ ಕಂತಿನ ಆರ್ಥಿಕ ನೆರವನ್ನು ಬಿಡುಗಡೆ ಮಾಡಲು ದಿನಾಂಕ ನಿಗದಿ

• ಚಿಕ್ಕಮಗಳೂರು: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ-ಕಿಸಾನ್) ಯೋಜನೆಯ 23ನೇ ಕಂತಿನ ಆರ್ಥಿಕ ನೆರವನ್ನು ಬಿಡುಗಡೆ ಮಾಡಲು ದಿನಾಂಕ ನಿಗದಿಯಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜೂನ್ 20 ರಂದು ಪಶ್ಚಿಮ ಬಂಗಾಳ ರಾಜ್ಯದ ಹಾರಕೇಶ್ವರ್, ಹೂಗ್ಲಿಯಲ್ಲಿ ಸಂಜೆ 4 ಗಂಟೆಗೆ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ದೇಶದ ರೈತರ ಖಾತೆಗಳಿಗೆ ಅಧಿಕೃತವಾಗಿ ಹಣ ವರ್ಗಾವಣೆ ಮಾಡಲಿದ್ದಾರೆ. ಈ ವಿಶೇಷ ದಿನವನ್ನು ಪಿ.ಎಂ. ಕಿಸಾನ್ ಉತ್ಸವ ದಿವಸ್ ಎಂದು ಆಚರಿಸಲಾಗುತ್ತಿದೆ.

ಈ ಯೋಜನೆಯಡಿ ಕರ್ನಾಟಕ ರಾಜ್ಯದ ಒಟ್ಟು 41,54,160 ಫಲಾನುಭವಿ ರೈತರಿಗೆ ಕೇಂದ್ರ ಸರ್ಕಾರದಿಂದ ಒಟ್ಟಾರೆ ರೂ. 830.832 ಕೋಟಿಗಳ ಆರ್ಥಿಕ ನೆರವು ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಜಮೆಯಾಗಲಿದೆ.

ಅರ್ಹ ರೈತ ಕುಟುಂಬಗಳಿಗೆ ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ಉತ್ತಮ ಇಳುವರಿ ಪಡೆಯಲು ನೆರವಾಗುವಂತೆ ವಾರ್ಷಿಕವಾಗಿ ಒಟ್ಟು 6,000 ರೂ. ಗಳ ಆರ್ಥಿಕ ಸಹಾಯ ನೀಡಲಾಗುತ್ತದೆ.

ಈ ಮೊತ್ತವನ್ನು ತಲಾ 2,000 ರೂ.ಗಳಂತೆ ಮೂರು ಸಮಾನ ಕಂತುಗಳಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ರೈತರ ಖಾತೆಗೆ ಜಮೆ ಮಾಡಲಾಗುತ್ತದೆ.

ಕರ್ನಾಟಕದಲ್ಲಿ ಫೆಬ್ರವರಿ 2019ರಿಂದ ಈ ಯೋಜನೆ ಜಾರಿಯಲ್ಲಿದ್ದು, 1.2.2019ರ ಅನ್ವಯ ಸಾಗುವಳಿ ಭೂಮಿ ಹೊಂದಿರುವ ಅರ್ಹ ರೈತ ಕುಟುಂಬಗಳು (ಗಂಡ, ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳು) ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಪ್ರಧಾನ ಮಂತ್ರಿಗಳ ಈ ನೇರ ನಗದು ವರ್ಗಾವಣೆ ಪ್ರಕ್ರಿಯೆಯಿಂದಾಗಿ ರಾಜ್ಯದ ಲಕ್ಷಾಂತರ ರೈತ ಕುಟುಂಬಗಳ ಕೃಷಿ ವೆಚ್ಚಕ್ಕೆ ಸಕಾಲದಲ್ಲಿ ಆರ್ಥಿಕ ಆಸರೆ ಸಿಕ್ಕಂತಾಗಲಿದೆ.

ಬೀದಿಬದಿ ವ್ಯಾಪಾರಿಗಳಿಗೆ ಅದಾಲತ್ ಮೂಲಕ ಮಾಹಿತಿ



• ಅಜ್ಜಂಪುರ : ಅಜ್ಜಂಪುರ ಪಟ್ಟಣ ಪಂಚಾಯ್ತಿ ವತಿಯಿಂದ ಒಂದು ವಿಶೇಷ ಅದಾಲತ್ ಏರ್ಪಡಿಸಿ ಬೀದಿಬದಿ ವ್ಯಾಪಾರಿಗಳಿಗೆ ಮಾಹಿತಿ ನೀಡಲಾಗುವುದು ಎಂದು ಪಟ್ಟಣ ಪಂಚಾಯಿತಿ ಸದಸ್ಯರಾದ ಬಿ. ರಂಗಸ್ವಾಮಿ ಅಜ್ಜಂಪುರ ಪಟ್ಟಣ ಪಂಚಾಯಿತಿ ಸಭಾಂಗಣದಲ್ಲಿ ತಿಳಿಸಿದರು.

ಅವರು ಪ್ರಧಾನಮಂತ್ರಿ, ಬೀದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿ ಯೋಜನೆ ಮೇಳದ ವಿಶೇಷ ಅಭಿಯಾನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ನಿಮ್ಮ ಸಮಸ್ಯೆಗಳು ಏನೇ ಇದ್ದರೂ ಪರಿಹರಿಸಿಕೊಡುತ್ತೇವೆ ಎಂದು ತಿಳಿಸಿದರು.

ಈ ಸಮಾರಂಭವನ್ನು ಪಂಚಾಯಿತಿ ಉಪಾಧ್ಯಕ್ಷೆ ಕವಿತಾ ಕೇಶವ್ ಮೂರ್ತಿ ಉದ್ಘಾಟಿಸಿದರು.

ಯೋಜನಾಧಿಕಾರಿ ಹರ್ಷ, ಪ್ರಾಸ್ತಾವಿಕ ನುಡಿಯಲ್ಲಿ ಬೀದಿ ಬದಿಯ ವ್ಯಾಪಾರಿಗಳಿಗೆ ಪಟ್ಟಣ ಪಂಚಾಯಿತಿಯಲ್ಲಿ ಒದಲಾವಣೆಗಳನ್ನು ಗುರುತಿಸಿ ಪ್ರಮಾಣಪತ್ರ ನೀಡಿ ಅರ್ಹರಿಗೆ ಬ್ಯಾಂಕಿನಲ್ಲಿ ಪಿಎಂ ನಿಧಿಯಲ್ಲಿ ಸಾಲ ಸೌಲಭ್ಯ ನೀಡಲಾಗುವುದು. ಸಾಲ ಮರು ಪಾವತಿಸಿದ ಫಲಾನುಭವಿಗಳಿಗೆ ಸರ್ಕಾರ ವಾರ್ಷಿಕ 7% ಬಡ್ಡಿ ಸಹಾಯಧನವನ್ನು ನೀಡಲಾಗುತ್ತದೆ.

ಈ ತರಬೇತಿ ಕಾರ್ಯವನ್ನು ಪಟ್ಟಣ ಪಂಚಾಯಿತಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರಾದ ಸುಮಲತಾ, ಜೋಗಿ ಪ್ರಕಾಶ್, ಮಂಜುನಾಥ್, ರಿಯಾಜ್ ಅಹಮ್ಮದ್, ಅಣ್ಣಪ್ಪನವರು, ಕರ್ನಾಟಕ ಬ್ಯಾಂಕ್ ಅಧಿಕಾರಿ ಭಾಗವಹಿಸಿದ್ದರು. ಸಮಾರಂಭವನ್ನು ಸಮುದಾಯ ಅಧಿಕಾರಿ ಅಣಂದಪ್ಪ ಸ್ವಾಗತಿಸಿದರು.



ಶೃಂಗೇರಿಯಿಂದ ಹೊಸದುರ್ಗಕ್ಕೆ ಬರುವ ಬಸ್ಸಿನಲ್ಲಿ ರಂಗೇನಹಳ್ಳಿಯ ಪದ್ಮಾಬಾಯಿ ಕೊಂ ವಿಠ್ಠಲ್ ರಾವ್ ಅವರ 40ರಿಂದ 50 ಗ್ರಾಂ ಚಿನ್ನದ ಸರ ಇರುವ ಬ್ಯಾಗ್ ಕಳೆದುಹೋಗಿತ್ತು. ಇವರು ಈ ಸಂಬಂಧ ಅಜ್ಜಂಪುರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರು ದಾಖಲಿಸಿದ 1 ಗಂಟೆಯೊಳಗಾಗಿ ಒಡವೆ ಇರುವ ಬ್ಯಾಗ್ ಅನ್ನು ಪತ್ತೆ ಹಚ್ಚಿ ಪದ್ಮಾಬಾಯಿ ಅವರಿಗೆ ಹಿಂದಿರುಗಿಸಲಾಯಿತು. ಕಾರ್ಯಾಚರಣೆಯಲ್ಲಿ ಅಜ್ಜಂಪುರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಧರ್, ಪಿಎಸ್‌ಐ ಗಜೇಂದ್ರ, ಎಎಸ್‌ಐ ಸುಬ್ಬರಾಜು ಇದ್ದರು.



ಶೃಂಗೇರಿ ಕನ್ನಡ ಭವನದಲ್ಲಿ ಅಂತರರಾಷ್ಟ್ರೀಯ ಯೋಗ ಶಿಕ್ಷಣ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿವೃತ್ತ ಶಿಕ್ಷಕ ಎಚ್.ಎಂ. ಮಂಜುನಾಥಗೌಡರನ್ನು ಕನ್ನಡ ಭವನದಲ್ಲಿ ಸನ್ಮಾನಿಸಲಾಯಿತು. ಸಮಿತಿ ಅಧ್ಯಕ್ಷ ನಾಗೇಶ್ ಕಾಮತ್ ಇತರರು ಇದ್ದಾರೆ.

ಬ್ರಹ್ಮ ಚೌಡಿ ಜಟಿಗೆಗೆ ಸಾಮೂಹಿಕ ಪೂಜೆ

• ಶೃಂಗೇರಿ: ಜ್ಯೇಷ್ಠ ಮಾಸ ಬಂತೆಂದರೆ ಸಾಕು ತಾಲೂಕಿನಲ್ಲಿ ಗ್ರಾಮ ದೇವತೆಗಳಿಗೆ ಹರಕೆ ಸಲ್ಲಿಸುವುದು ಸಂಪ್ರದಾಯವಾಗಿದೆ. ತಾಲೂಕಿನ ಬೇಗಂದೂರು ಗ್ರಾಮದ ಕರ್ವಾನೆ ಗ್ರಾಮಸ್ಥರು ಗ್ರಾಮ ದೇವತೆ ಬ್ರಹ್ಮ ಚೌಡಿ ಜಟಿಗ ಮುಂತಾದ ದೇವರಿಗೆ ಸಾಮೂಹಿಕವಾಗಿ ಪೂಜೆ ಸಲ್ಲಿಸಿದರು.

ಬೆಳಗ್ಗೆ ಗ್ರಾಮಸ್ಥರು ಗ್ರಾಮ ದೇವತೆಗಳಿಗೆ ಪೂಜೆ ಸಲ್ಲಿಸಲು ಫಲ ಪುಷ್ಪ, ಹಣ್ಣು, ಕಾಯಿ ನೈವೇದ್ಯ ಸಮರ್ಪಿಸಲು ದೇವರ ಸನ್ನಿಧಿಗೆ ತೆರಳಿದರು. ವೆಟ್ಟಂ ಸುಬ್ರಮಣ್ಯ ಭಟ್ ನೇತೃತ್ವದಲ್ಲಿ ಗ್ರಾಮ ದೇವತೆಗಳಿಗೆ ಪೂಜೆ ಸಲ್ಲಿಸಲಾಯಿತು. ನಂತರ ಗ್ರಾಮದ ಒಳಿತಿಗಾಗಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕರುವಾನೆ ಪ್ರಕಾಶ್ ರವರು ಮಲೆನಾಡು ಭಾಗದಲ್ಲಿ ಜಟಿಗ ಮತ್ತು ಚೌಡಿ ದೈವವನ್ನು ರಕ್ಷಣಾ ದೈವಗಳಾಗಿ ಆರಾಧಿಸಲಾಗುತ್ತದೆ. ಊರಿನ ಗಡಿ ಕಾಯುವ ದುಷ್ಟ ಶಕ್ತಿಗಳಿಂದ ರಕ್ಷಿಸುವ ದೈವವೆಂದು ನಂಬಲಾಗುತ್ತದೆ. ಗ್ರಾಮಗಳಲ್ಲಿ ದೇವಸ್ಥಾನವಿಲ್ಲದ ಕಾಡು ಪ್ರದೇಶಗಳಲ್ಲಿ ಬ್ರಹ್ಮನ ಬನ ಜಟಿಗನ ಬನ ಇರುತ್ತದೆ. ಚೌಡಿ ದೇವತೆಯು ಅತ್ಯಂತ ಶಕ್ತಿಶಾಲಿ ಹಾಗೂ ಉಗ್ರ ಸ್ವರೂಪದ ಹೆಣ್ಣು ದೈವ. ಕೆಲವು ಕಡೆಗಳಲ್ಲಿ ಈ ದೈವವನ್ನು ತಾಂತ್ರಿಕ ಶಕ್ತಿಯಾಗಿ ಕಷ್ಟಕಾಲದಲ್ಲಿ ನ್ಯಾಯ ತೀರ್ಮಾನಿಸುವ ದೈವವಾಗಿ ನಂಬಲಾಗುತ್ತದೆ ಎಂದು ಮಾಹಿತಿ ನೀಡಿದರು.



ಅರ್ಜಿಗಳನ್ನು ನೀಡಿದ್ದರೂ ಕಣ್ಣುಮುಚ್ಚಿ ಕುಳಿತ ಕಂದಾಯ ಇಲಾಖೆ

ಪಕ್ಕ ಪೋಡಿ ದುರಸ್ತಿಯಾಗದೆ ರೈತರ ಪರದಾಟ

▸ ರಮೇಶ್, ಕರುವಾನೆ

• ಶೃಂಗೇರಿ: ತಾಲೂಕಿನಲ್ಲಿ ಜಮೀನು ಪಕ್ಕ ಪೋಡಿ ದುರಸ್ತಿಯಾಗದೆ ರೈತರು ಅಧಿಕೃತ ಜಮೀನು ಹೊಂದಿದ್ದರೂ ಹಕ್ಕಿಲ್ಲದ ರೀತಿ ಕಾಲ ಕಳೆಯುವ ಸ್ಥಿತಿ ಬಂದೊದಗಿದೆ. ಹಲವಾರು ವರ್ಷಗಳಿಂದ ರೈತರು ಪಕ್ಕ ಪೋಡಿಗೆ ಅರ್ಜಿಗಳನ್ನು ನೀಡಿದ್ದರೂ ಕಂದಾಯ ಇಲಾಖೆ ಮಾತ್ರ ತಮ್ಮದಲ್ಲದ ಕಾರ್ಯವೆಂದು ಕಣ್ಣುಮುಚ್ಚಿ ಕುಳಿತುಕೊಳ್ಳಲಾಗಿದೆ.

ಅಣ್ಣ ತಮ್ಮಂದಿರು ತಮ್ಮ ಭೂಮಿ ಹಿಸ್ಸೆಯ ಮೂಲಕ ವಿಭಾಗ ಮಾಡಿಕೊಳ್ಳಲು ಸಾಧ್ಯವಾಗದೆ ಪರದಾಡುವಂತೆ ಆಗಿದೆ. ತಮ್ಮ ಜಮೀನುಗಳ ಪಕ್ಕ ಗಡಿ ದುರಸ್ತಿ ಎಲ್ಲಿ ಎಂದು ಹುಡುಕುವಂತಾಗಿದೆ. ಆದರೆ ಇದು ಯಾವುದೋ ಅನಧಿಕೃತ ಭೂಮಿ ಎಂದು ಭಾವಿಸುವ ಹಾಗಿಲ್ಲ, ಪ್ರತಿಯೊಂದು ಕುಟುಂಬಗಳು ಅನಾದಿ ಕಾಲದಿಂದಲೂ ಜಮೀನಿನ ಕೃಷಿಯಲ್ಲಿ ಅಧಿಕೃತವಾಗಿ ತೊಡಗಿಕೊಂಡು ಬಂದಿದೆ. ಹಾಗಂತ ಇಂತಹ ವ್ಯಕ್ತಿಗೆ ಸೇರಿದ ಭೂಮಿ ಎಂದು ಊರಿನವರಿಗೆಲ್ಲ ಗೊತ್ತು. ಆದರೆ ಪಕ್ಕ ಗಡಿ ಗುರುತಿಸುವ ಪಕ್ಕ ಪೋಡಿ ಆಗಲಿ, ಅಧಿಕೃತ ಹಕ್ಕು ನಿರ್ಧರಿಸುವ ದಾಖಲೆಗಳಿಲ್ಲ. ಹಿಡುವಳಿ ಇದ್ದೂ ಹಕ್ಕಿಲ್ಲದೆ ಪರದಾಡುವ ಸ್ಥಿತಿಯಿದೆ.



ಭೂಮಿಯ ಪೂರ್ಣ ಮಾಲೀಕತ್ವಕ್ಕೆ ಅದರ ಮೂಲ ದಾಖಲೆ ಅತಿ ಮುಖ್ಯ. ಹಿಂದೆ ಯಾರಿಂದ ಯಾರಿಗೆ ಯಾವ ಕಾರಣಕ್ಕೆ ಬಂದಿದೆ. ಅದರ ವಿಸ್ತೀರ್ಣ ಎಷ್ಟು? ಪಕ್ಕ ಪೋಡಿಯಲ್ಲಿ ಗಡಿ ಗುರುತಿಸಲಾಗಿದಿಯೇ ಚೆಕ್ ಬಂಧಿಯಲ್ಲಿ ಯಾರ್ಯಾರ ಭೂಮಿ ಇದೆ, ಎಂಬಿತ್ಯಾದಿ ಮೂಲ ಮ್ಯುಟೇಷನ್ ನಲ್ಲಿರಬೇಕಿದೆ. ಆದರೆ ಇದುವರೆಗೂ ಕಂದಾಯ ಇಲಾಖೆ ಪಕ್ಕ ಪೋಡಿ ದುರಸ್ತಿ ಮಾಡದೆ ಗಡಿ ಗುರುತಿಸಿಲ್ಲ.

ಕಂದಾಯ ಇಲಾಖೆ ಮೊದಲು ಪಕ್ಕ ಪೋಡಿ ಮಾಡಿಸಿ ರೈತರ ಜಮೀನಿನ ಸರ್ವೆ ನಂಬರ್‌ನಲ್ಲಿ ಒಟ್ಟು ವಿಸ್ತೀರ್ಣ ಗುರುತಿಸಿರಬೇಕು. ಇಲ್ಲದಿದ್ದರೆ ನೋಂದಣಿ ಕಚೇರಿಯಲ್ಲಿ ರೈತರ ಹೆಸರಿಗೆ ಯಾರದ್ದು ತಕರಾರು ಇಲ್ಲದೆ ಇದ್ದ ಸಂದರ್ಭದಲ್ಲಿ ಜಮೀನಿನ ಸ್ಪಷ್ಟವಾದ ದಾಖಲೆಯಾಗದೆ ತೊಂದರೆ ಉಂಟಾಗುತ್ತದೆ.

ಕಂದಾಯ ಇಲಾಖೆ ಈ ಬಗ್ಗೆ ಗಮನಹರಿಸಿ ತಾಲೂಕಿನಲ್ಲಿರುವ ರೈತರ ಜಮೀನುಗಳ ಪಕ್ಕ ದುರಸ್ತಿ ಕಾರ್ಯ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

> ತಾಲೂಕಿನಲ್ಲಿ ರೈತರು ಪಕ್ಕ ಪೋಡಿಗೆ ನೀಡಿರುವ ಅರ್ಜಿಗಳನ್ನು ಇತ್ಯರ್ಥ ಪಡಿಸದೆ ಬಾಕಿ ಉಳಿಸಿಕೊಳ್ಳಲಾಗಿದೆ. ಜಂಟಿ ಸರ್ವೆ ಕಾರ್ಯ ಪೂರ್ಣಗೊಳ್ಳುವವರೆಗೆ ಮಾಡಲಾಗುವುದಿಲ್ಲ ಎಂದು ಇಲಾಖೆ ಹೇಳುತ್ತಿದೆ. ಆದರೆ ಯಾವ ಗ್ರಾಮಗಳಲ್ಲಿ ಈಗಾಗಲೇ ಜಂಟಿ ಸರ್ವೆ ಮುಗಿದಿದೆ. ಆ ಗ್ರಾಮಗಳಲ್ಲಿರುವ ಅರ್ಜಿಗಳಿಗೆ ಅರಣ್ಯ ಇಲಾಖೆ ಅಭಿಪ್ರಾಯ ಪಡೆದು ಪೋಡಿ ಕಾರ್ಯ ಮಾಡಬೇಕು. ಅನಾವಶ್ಯಕವಾಗಿ ವಿಳಂಬ ಮಾಡದೆ ರೈತರಿಗೆ ಅನುಕೂಲ ಕಲ್ಪಿಸಬೇಕು.
>
> ■ ಅಂಬಳೂರು ರಾಮಕೃಷ್ಣರಾವ್, ಅಧ್ಯಕ್ಷರು ಮಲೆನಾಡು ನಾಗರಿಕ ಹಕ್ಕುಗಳ ಹೋರಾಟ ಸಮಿತಿ ಶೃಂಗೇರಿ.

ದಿಗಂತ ವಿಶೇಷ

ಯೋಗ ದಿನಾಚರಣೆಯಲ್ಲಿ ಶಾಸಕ ಹೆಚ್.ಡಿ. ತಮ್ಮಯ್ಯ

ಆರೋಗ್ಯವಿಲ್ಲದೆ ಜೀವನದಲ್ಲಿ ಸಾಧನೆ ಅಸಾಧ್ಯ

• ಚಿಕ್ಕಮಗಳೂರು: ಇಂದಿನ ಬದಲಾದ ಪರಿಸ್ಥಿತಿಯಲ್ಲಿ ನಮ್ಮ ಆರೋಗ್ಯ ನಾವು ಕಾಪಾಡಿಕೊಳ್ಳುವುದು ಅತ್ಯಂತ ಅನಿವಾರ್ಯವಾಗಿದೆ. ಆರೋಗ್ಯವಿಲ್ಲದಿದ್ದರೆ ಜೀವನದಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ, ಆದ್ದರಿಂದ ಪ್ರತಿಯೊಬ್ಬರೂ ಯೋಗವನ್ನು ದಿನನಿತ್ಯದ ಜೀವನದ ಭಾಗವಾಗಿಸಿಕೊಳ್ಳಬೇಕು ಎಂದು ಶಾಸಕ ಹೆಚ್.ಡಿ.ತಮ್ಮಯ್ಯ ಹೇಳಿದರು.

ನಗರದ ಎಐಟಿ ವೃತ್ತದ ಸಮೀಪದ ಒಕ್ಕಲಿಗರ ಬೆಳ್ಳಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಆಯುಷ್ ಇಲಾಖೆ ಹಾಗೂ ವಿವಿಧ ಯೋಗ ಸಂಘಟನೆಗಳ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ 12ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ-ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯ ಎಂಬುದು ಸುಮ್ಮನೆ ಬರುವುದಿಲ್ಲ, ನಮ್ಮ ದೈನಂದಿನ ಚಟುವಟಿಕೆಗಳು ಮತ್ತು ಶಿಸ್ತಿನ ಮೇಲೆ ನಮ್ಮ ಆರೋಗ್ಯ ನಿರ್ಧಾರಿತವಾಗಿರುತ್ತದೆ. ಯೋಗಾಭ್ಯಾಸ ಮಾಡುವ ಆರಂಭಿಕ ಹಂತದಲ್ಲಿ ಶಾರೀರಿಕ ನೋವುಗಳು ಸಹಜ. ಆದರೆ ಆ ನೋವನ್ನು ಯಾರು ಅನಂದಿಸುತ್ತಾರೋ ಅವರಿಗೆ ಜೀವನಪರ್ಯಂತ ಮತ್ತೆಂದೂ ಆ ನೋವು ಮರುಕಳಿಸುವುದಿಲ್ಲ, ಕಷ್ಟಪಟ್ಟರೆ ಮಾತ್ರ ಉತ್ತಮ ಆರೋಗ್ಯ ಸಾಧ್ಯ ಎಂದು ಎಂದರು.

ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಬೋಜೇಗೌಡ ಮಾತನಾಡಿ, ಯೋಗ ಮಾಡುವುದರಿಂದ ಸಾವನ್ನು ಗೆಲ್ಲಲು ಸಾಧ್ಯವಿಲ್ಲ, ಆದರೆ, ಭೂಮಿ ಮೇಲೆ ಬದುಕಿರುವವರೆಗೂ ಆರೋಗ್ಯವಂತರಾಗಿ ಜೀವನ ಸಾಗಿಸಲು ಯೋಗ ಅತ್ಯಂತ ಸಹಕಾರಿಯಾಗಿದೆ ಎಂದು ತಿಳಿಸಿದರು.

ವರನಟ ಡಾ. ರಾಜ್‌ಕುಮಾರ್ ಅವರ ಯೋಗಾಸಕ್ತಿ ಮತ್ತು ಜೀವನ ಶೈಲಿ ಸ್ಮರಿಸಿದ ಶಾಸಕರು, ರಾಜಕುಮಾರ್ ಅವರಂತೆ ಯೋಗ ಮಾಡಿದವರು ಯಾರೂ ಇಲ್ಲ, ಅವರು ತಮ್ಮ ಚಿತ್ರಗಳಲ್ಲಿ ಇಡೀ ಹೊಟ್ಟೆಯನ್ನೇ ತಿರುಗಿಸುವ ನೌಲಿ ಕ್ರಿಯೆಯನ್ನು ಪ್ರದರ್ಶಿಸುತ್ತಿದ್ದರು. ಅವರು 75 ವರ್ಷ ಬದುಕಿದ್ದರೂ ಎಷ್ಟು ಆರೋಗ್ಯವಾಗಿದ್ದರು ಎಂಬುದು ಅವರ ಹತ್ತಿರವಿದ್ದವರಿಗೆ ಗೊತ್ತು. ಅವರ ಊಟ ಮತ್ತು ತಿಂಡಿ ಕ್ರಮದಲ್ಲಿ ಯಾವುದೇ ರಾಜಿ ಇರಲಿಲ್ಲ, ಚೆನ್ನಾಗಿ ಊಟ ಬಲ್ಲವನೇ ಚೆನ್ನಾಗಿ ಆರೋಗ್ಯ ಕಾಪಾಡಿಕೊಳ್ಳಬಲ್ಲ ಎಂದು ಅಭಿಪ್ರಾಯಪಟ್ಟರು.

> ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿರುವ ಯೋಗ ವಿಜ್ಞಾನವನ್ನು ಋಷಿಮುನಿಗಳು ಹಾಗೂ ಯೋಗಿಗಳು ನಮಗೆ ಧಾರೆ ಎರೆದಿದ್ದಾರೆ. ಇಂದು ಜಗತ್ತಿನ ನೂರಾರು ದೇಶಗಳು ಒಂದೇ ಸಮಯದಲ್ಲಿ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ.
>
> ■ ಎಸ್.ಎಲ್. ಬೋಜೇಗೌಡ, ವಿಧಾನ ಪರಿಷತ್ ಸದಸ್ಯ

ರಾಜ್ಯ ಪಂಸರ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಕ್ಷ ಎ.ಎನ್. ಮಹೇಶ್ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಯೋಗವು ನಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸದೃಢವಾಗಿಡಲು ಅತ್ಯಂತ ಸಹಕಾರಿಯಾಗಿದೆ ಎಂದು ಹೇಳಿದರು.

ಇಂದಿನ ಒತ್ತಡದ ಜೀವನದಲ್ಲಿ ಪ್ರತಿಯೊಬ್ಬರಿಗೂ ಆರೋಗ್ಯ ಕಾಪಾಡಿಕೊಳ್ಳುವುದು ದೊಡ್ಡ ಸವಾಲಾಗಿದೆ. ನಮ್ಮ ದಿನನಿತ್ಯದ ಬದುಕಿನಲ್ಲಿ ಕನಿಷ್ಠ ಸ್ವಲ್ಪ ಸಮಯವನ್ನಾದರೂ ಯೋಗಕ್ಕಾಗಿ ಮೀಸಲಿಡಬೇಕು. ಪ್ರತಿದಿನವೂ ನಿಯಮಿತವಾಗಿ ಯೋಗಾಭ್ಯಾಸ ಮಾಡುವುದನ್ನು ಹವ್ಯಾಸವಾಗಿಸಿಕೊಳ್ಳಬೇಕು. ಆ ಮೂಲಕ ಸದೃಢ ಮತ್ತು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂದರು.

ಈ ಸಂದರ್ಭದಲ್ಲಿ ಸಿಡಿಎ ಅಧ್ಯಕ್ಷ ಹೆಚ್.ಪಿ.ಮಂಜೇಗೌಡ, ನಗರಸಭೆ ಅಧ್ಯಕ್ಷೆ ಭವ್ಯ ಮಂಜುನಾಥ್, ಜಿಲ್ಲಾ ಆರೋಗ್ಯಾಧಿಕಾರಿ ಅಶ್ವತ್‌ಬಾಬು, ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವವೃಂದ ಉಪಸ್ಥಿತರಿದ್ದರು.



ಯೋಗ ದಿನಾಚರಣೆಯಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷ ಮಲ್ಲಪ್ಪ

ಮನುಷ್ಯನನ್ನು ಚೈತನ್ಯದಾಯಕವಾಗಿಸುವ ಯೋಗ

• ಬೀರೂರು : ಸರಳ ಯೋಗಗಳ ಆಚರಣೆಯ ಮೂಲಕ ಜೀವನವನ್ನು ಹೆಚ್ಚು ಚೈತನ್ಯದಾಯಕವಾಗಿಸುವ ಹಾಗೂ ಉತ್ತಮ ಚಿಂತನೆಗೆ ಮನಸ್ಸನ್ನು ಹದಗೊಳಿಸುವ ಶಕ್ತಿ ಹೊಂದಿರುವ ದೇಹ ಹಾಗೂ ಮನಸ್ಸನ್ನು ಸದೃಢವಾಗಿಡುವ ಯೋಗ ಜೀವನವನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕಾದ ಅಗತ್ಯತೆ ಇಂದು ಒದಗಿ ಬಂದಿದೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷ ಮಲ್ಲಪ್ಪ ಹೇಳಿದರು.

ಅವರು ಪಟ್ಟಣದ ಗುರುಭವನದಲ್ಲಿ ಭಾನುವಾರ ಶಾಲಾ ಶಿಕ್ಷಣ ಇಲಾಖೆ ಬೀರೂರು ಶೈಕ್ಷಣಿಕ ವಲಯ, ಸುರಭಿ ಯೋಗ ಕೇಂದ್ರ, ಲಯನ್ಸ್ ನಕ್ಷತ್ರ, ಶ್ರೀ ಜಗದ್ಗುರು ರೇಣುಕಾ ಸಾಂಸ್ಕೃತಿಕ ಸಂಘ, ಜೆಸಿಐ ಸಂಸ್ಥೆ, ಅಕ್ಕಮಹಾದೇವಿ ಮಹಿಳಾ ಸಮಾಜ, ಮಲ್ಲಿಗೆ ಬಳಗ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ. ಹಮ್ಮಿಕೊಂಡಿದ್ದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಗೌರವಾಧ್ಯಕ್ಷ ಗೋಪಾಲಕೃಷ್ಣಗುಪ್ತ, ಆಧುನಿಕ ಬದುಕಿನ ಜಂಜಾಟಗಳಿಗೆ ಪ್ರಾಚೀನ ಯೋಗವು ನಿತ್ಯ ಬದುಕಿನ ಸಂಜೀವಿನಿಯಂತೆ ಪ್ರಚಲಿತವಾಗಿದ್ದು ಮನಸ್ಸಿನ ನೆಮ್ಮದಿಗಾಗಿ ನಿತ್ಯ ಯೋಗವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯತೆಯಿದೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷೆ ಸವಿತಾ ರಮೇಶ್ ಮಾತನಾಡಿ, ಪ್ರಪಂಚಕ್ಕೆ ಯೋಗವನ್ನು ಪರಿಚಯಿಸಿದ ಹೆಮ್ಮೆ ನಮ್ಮ ದೇಶಕ್ಕೆ ಸಲ್ಲುತ್ತದೆ, ಕೋಟಿ ಹಣ ನೀಡಿದರೂ ಸಹ ಬಾರದ ಸಂತೋಷ ಮತ್ತು ಆರೋಗ್ಯ ಕೇವಲ ಯೋಗದಿಂದ ದೊರೆಯಲು ಸಾಧ್ಯವಾಗಲಿದೆ. ಪ್ರಾಚೀನ ಕಾಲದ ಋಷಿಮುನಿಗಳು ಯೋಗಸಾಧನೆಯಿಂದ ನೂರಾರು ಕಾಲ ಬಾಳಿದಂತಹ ನಿದರ್ಶನಗಳಿವೆ. ನಾವು ನಿತ್ಯವೂ ಅಲ್ಪಕಾಲದ ಯೋಗದಿಂದ ದೀರ್ಘಕಾಲದ ವ್ಯಾದಿಗಳಿಗೂ ಸಹ ಸರಳ ಉಪಚಾರವನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು.

ಅಂತರಾಷ್ಟ್ರೀಯ ಯೋಗ ಪಟು ಕುಮಾರಿ ಸೀತಾರಾ ಯೋಗ ಶಿಕ್ಷಕರಾದ ಶ್ರೀನಿವಾಸ್‌ರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಶಿಕ್ಷಕ ಸಂತೋಷ್ ಕುಮಾರ್, ಶ್ರೀ ಜಗದ್ಗುರು ರೇಣುಕಾ ಸಾಂಸ್ಕೃತಿಕಸಂಘದ ಕಾರ್ಯದರ್ಶಿಗಳಾದ ಶಿವಮೂರ್ತಿ, ಯೋಗ ಶಿಕ್ಷಕರು ರಮೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಲಯನ್ ಪ್ರದೀಪ್ ಲಯನ್ ಶಬರೀಶ್ ಲಯನ್ ಚೆಲುವರಾಜ್ ಉಪಸ್ಥಿತರಿದ್ದರು. ಸಂಘ, ಸಂಸ್ಥೆಗಳ ಸದಸ್ಯರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಯೋಜನ ಪಡೆದರು. ರಮೇಶ್ ಹಾಗೂ ಚಂದ್ರಶೇಖರ್ ಆಚಾರ್ ಮಕ್ಕಳನ್ನು ಸನ್ಮಾನಿಸಲಾಯಿತು.



ಯೋಗ ಕೇವಲ ವ್ಯಾಯಾಮವಲ್ಲ, ಅದು ವಿಜ್ಞಾನ

• ಚಿಕ್ಕಮಗಳೂರು: ಯೋಗ ಮಾಡುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗ್ಡೆ ಹೇಳಿದರು.

12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಗರದ ನ್ಯಾಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಯೋಗ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯೋಗ ಎಂಬುದು ಕೇವಲ ವ್ಯಾಯಾಮವಲ್ಲ ಅದೊಂದು ಮಹಾನ್ ವಿಜ್ಞಾನ ಹಾಗೂ ಶಾಸ್ತ್ರವಾಗಿದೆ. ಆರೋಗ್ಯ ರಕ್ಷಣೆ ಮತ್ತು ದೀರ್ಘಾಯುಷ್ಯಕ್ಕೆ ಪ್ರತಿಯೊಬ್ಬರು ನಿತ್ಯ ಯೋಗಾಭ್ಯಾಸ ಮಾಡುವುದು ಅತ್ಯಗತ್ಯ. ಆಧುನಿಕ ಯಾಂತ್ರಿಕ ಯುಗದಲ್ಲಿ ಒತ್ತಡದಿಂದ ಕೆಲಸ ಮಾಡುತ್ತಿರುವುದರಿಂದ ಇಂದಿನ ಯುವಕರಲ್ಲಿ ಬಿ.ಪಿ. ಮಧುಮೇಹ, ಮಾನಸಿಕ ಖಿನ್ನತೆ ಮುಂತಾದ ಕಾಯಿಲೆಗೆ ಒಳಗಾಗುವುದನ್ನು ಕಾಣುತ್ತೇವೆ. ಇವುಗಳಿಂದ ದೂರ ಉಳಿಯಬೇಕಾದರೆ ನಾವು ಯೋಗವನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.



ಯೋಗ ತರಬೇತುದಾರರಾದ ಸ್ವಪ್ನಾ ಯೋಗೀಶ್ ಮತ್ತು ಉಷಾ ಕುಮಾರ್ ವಿವಿಧ ರೀತಿಯ ಯೋಗಾಸನಗಳು ಮತ್ತು ಪ್ರಾಣಾಯಾಮ ಹಾಗೂ ಧ್ಯಾನದ ಪ್ರಾತ್ಯಕ್ಷಿಕೆಯನ್ನು ನೀಡಿ ಅವುಗಳ ಮಹತ್ವವನ್ನು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ವಿ. ಹನುಮಂತಪ್ಪ ಯೋಗದ ಮಹತ್ವದ ಕುರಿತು ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ ಸುಜೇಂದ್ರ, ಎಲ್ಲಾ ನ್ಯಾಯಾಂಗ ಅಧಿಕಾರಿಗಳು, ವಕೀಲರು ಭಾಗವಹಿಸಿದ್ದರು.

ಯೋಗದಿಂದ ರೋಗನಿರೋಧಕ ಶಕ್ತಿ ವೃದ್ಧಿ: ಪೂರ್ಣಿಮಾ

• ಕಡೂರು : ಯೋಗದಿಂದ ದೇಹದ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸಿ ನಕಾರಾತ್ಮಕ ಆಲೋಚನೆಗಳನ್ನು ನಿವಾರಿಸಿಕೊಳ್ಳಬಹುದು ಎಂದು ತಹಶೀಲ್ದಾರ್ ಪೂರ್ಣಿಮಾ ಹೇಳಿದರು.

ಪಟ್ಟಣದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ತಾಲೂಕು ಆಡಳಿತ, ಆಯುಷ್ ಇಲಾಖೆ, ಯುವ ಸಬಲೀಕರಣ ಕ್ರೀಡಾ ಇಲಾಖೆ, ಶ್ರೀ ರಾಘವೇಂದ್ರ ಯೋಗ ಶಿಕ್ಷಣ ಕೇಂದ್ರ, ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಘೋಷಣೆಯಡಿ ನಡೆದ ಸಾಮೂಹಿಕ ಯೋಗಾಭ್ಯಾಸದಲ್ಲಿ ಭಾಗವಹಿಸಿ ಬಳಿಕ ಮಾತನಾಡಿದ ಅವರು ಸದೃಢ ದೇಹವನ್ನು ಕಾಪಾಡಿಕೊಳ್ಳಲು ಪ್ರತಿನಿತ್ಯ ಯೋಗಾಭ್ಯಾಸ ದೇಹಕ್ಕೆ ಅತ್ಯಂತ ಅವಶ್ಯವಾಗಲಿದೆ. ಯೋಗ ಅಭ್ಯಾಸ ಮಾಡಲು ಯಾವುದೇ ವಯಸ್ಸಿಗೆ ಮಿತಿ ಇರುವುದಿಲ್ಲ, ಆರೋಗ್ಯಕರ ಮತ್ತು ಶಿಸ್ತುಬದ್ಧ ಜೀವನಶೈಲಿಯನ್ನು ರೂಪಿಸಲು ಯೋಗದಿಂದ ಸಾಧ್ಯ ಎಂದರು.

ಪುರಸಭಾ ಮಾಜಿ ಅಧ್ಯಕ್ಷ ಭಂಡಾರಿ ಶ್ರೀನಿವಾಸ್ ಮಾತನಾಡಿ, ಯೋಗದ ನಿಯಮಗಳನ್ನು ಪಾಲಿಸುವಲ್ಲಿ ಭಾರತ ಪ್ರಪಂಚದ ಇತರ ರಾಷ್ಟ್ರಗಳಿಗಿಂತ ಮುಂಚೂಣಿಯಲ್ಲಿದೆ. ಇಂದಿನ ದಿನಗಳಲ್ಲಿ ಕಲುಷಿತ ಆಹಾರ ಪದ್ಧತಿಯ ಸೇವನೆಯಿಂದ ಅನೇಕ ರೋಗಗಳಿಗೆ ತುತ್ತಾಗಿರುವುದು ದುರಂತವಾಗಿದೆ. ಇದರ ಪರಿಹಾರಕ್ಕೆ ಯೋಗಾಭ್ಯಾಸಗಳಲ್ಲಿ ತೊಡಗಿಸಿಕೊಳ್ಳಬೇಕಿದೆ ಎಂದರು.

ವಿವಿಧ ಶಾಲಾ-ಕಾಲೇಜಿನ ಬಿಸಿಎಂ ಮತ್ತು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ವಿದ್ಯಾರ್ಥಿಗಳು, ಶ್ರೀ ರಾಘವೇಂದ್ರ ಯೋಗಾ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಸೇರಿದಂತೆ ಪಟ್ಟಣದ ನಾಗರೀಕರು ಸಾಮೂಹಿಕ ಯೋಗಾಭ್ಯಾಸದಲ್ಲಿ ಪಾಲ್ಗೊಂಡರು. ಇದೇ ವೇಳೆ ಯೋಗಪಟುಗಳಿಂದ ಆಕರ್ಷಕ ಪ್ರದರ್ಶನ ನಡೆಸಿಕೊಟ್ಟರು. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಯೋಗ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಯೋಗಪಟುಗಳನ್ನು ಗೌರವಿಸಲಾಯಿತು. ಯೋಗ ಶಿಕ್ಷಕ ದಂಪತಿ ಬಿ.ಎಂ. ಗಿರೀಶ್ ಮತ್ತು ವಿಜಯಾ ಗಿರೀಶ್ ಯೋಗದ ಮಹತ್ವದ ಕುರಿತು ಅರಿವು ಮೂಡಿಸಿ ಯೋಗಾಭ್ಯಾಸದ ನಿರ್ವಹಣೆ ನಡೆಸಿಕೊಟ್ಟರು.

ಬಿಇಒ ಎಂ.ಎಚ್. ತಿಮ್ಮಯ್ಯ, ಬಿಸಿಎಂ ಅಧಿಕಾರಿ ದೇವರಾಜ್, ಸಮಾಜ ಕಲ್ಯಾಣಾಧಿಕಾರಿ ನಟರಾಜ್, ಆಯುಷ್ ವೈದ್ಯಾಧಿಕಾರಿ ಡಾ. ದೊಡ್ಡಗಂಗೆ, ನರೇಂದ್ರನಾಥ್, ಶೇಖರಪ್ಪ, ಕ್ರೀಡಾಧಿಕಾರಿ ಮುರುಳಿ, ತೀರ್ಥಕುಮಾರ್ ಮತ್ತಿತರರಿದ್ದರು.



ವಕೀಲ ಹಾಗೂ ನೋಟರಿ ವಿ.ಕೆ. ರಘು ಅವರಿಂದ ಸಾಧನೆ

ನೀರಿನ ಮೇಲೆ ತೇಲುತ್ತಾ ಯೋಗ ಭಂಗಿಗಳ ಪ್ರದರ್ಶನ

• ಚಿಕ್ಕಮಗಳೂರು: ಯೋಗ ಸಾಧಕ ನಗರದ ವಕೀಲ ಹಾಗೂ ನೋಟರಿ ವಿ.ಕೆ. ರಘು ಅವರು ಭಾನುವಾರ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನೀರಿನ ಮೇಲೆ ತೇಲುತ್ತಾ ವಿವಿಧ ಯೋಗ ಭಂಗಿಗಳನ್ನು ಪ್ರದರ್ಶಿಸಿದರು.

ಬೈಪಾಸ್ ರಸ್ತೆಯ ಸರ್ಕಾರ್ ಶಾಲೆ ಹಿಂಭಾಗದ ಅನ್ನಪೂರ್ಣ ಫಿಟ್ನೆಸ್ ಅಕಾಡೆಮಿಯ ಈಜು ಕೊಳದಲ್ಲಿ ಸತತ ಅರ್ಧಗಂಟೆಗೂ ಹೆಚ್ಚು ಕಾಲ ತಲಾ 108 ಬಾರಿ ಶ್ರೀ ಆಂಜನೇಯ ಹಾಗೂ ಶ್ರೀ ರಾಮನಾಮವನ್ನು ಜಪಿಸುತ್ತ ಪದ್ಮಾಸನ, ಶಲಭಾಸನ, ವಜ್ರಾಸನ ಸೇರಿದಂತೆ ವಿವಿಧ ಭಂಗಿಗಳನ್ನು ಪ್ರದರ್ಶಿಸುವ ಮೂಲಕ ನೋಡುಗರ ಹುಬ್ಬೇರಿಸುವಂತೆ ಮಾಡಿದರು.

ಸತತ 35 ವರ್ಷಗಳಿಂದ ಯೋಗಾಭ್ಯಾಸದಲ್ಲಿ ತೊಡಗಿರುವ ಅವರು, ನೀರಿನ ಮೇಲೆ ತೇಲುತ್ತಾ ಅತಿ ಹೆಚ್ಚು ಸಮಯ ಯೋಗ ಪ್ರದರ್ಶಿಸಿ ವಿಶ್ವದಾಖಲೆ ನಿರ್ಮಿಸಬೇಕು ಎನ್ನುವ ಸಂಕಲ್ಪ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಅವರ ಸಾಧನೆಯನ್ನು ಗುರುತಿಸಿ 2023ರಲ್ಲಿ ಅಂದಿನ ಸಂಸದೆ ಶೋಭಾ ಕರಂದ್ಲಾಜೆ ಅವರು ಪ್ರಶಂಸಿಸಿದ್ದಾರೆ. 2024ರಲ್ಲಿ ಜಿಲ್ಲಾಡಳಿತ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಪುರಸ್ಕರಿಸಿವೆ.



ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಮ್ಮ ಯೋಗಾಭ್ಯಾಸದ ಹವ್ಯಾಸಕ್ಕೆ ತುಂಬಾ ಸ್ಫೂರ್ತಿ, ಶಿವಮೊಗ್ಗದ ವರದಹಳ್ಳಿ ಶ್ರೀಧರ ಸ್ವಾಮಿಯವರ ಆಶ್ರಮದ ಕೊಳದಲ್ಲಿ ಮೊದಲ ಬಾರಿಗೆ ಸುಮಾರು ಎರಡೂವರೆ ಗಂಟೆ ಸಮಯ ನೀರಿನ ಮೇಲೆ ತೇಲುತ್ತಾ ಯೋಗ ಪ್ರದರ್ಶಿಸಿದ್ದು, ಅದು ಮುಂದಿನ ಸಾಧನೆಗೆ ದಾರಿಯಾಯಿತು ಎಂದು ರಘು ಹೇಳಿದರು.

ನೀರಿನಲ್ಲಿ ತೇಲುತ್ತಾ ಯೋಗಾಸನ ಮಾಡುವವರ ಸಂಖ್ಯೆ ತುಂಬಾ ಕಡಿಮೆ. ಇದನ್ನು ಕಲಿಯಲು ಆಸಕ್ತಿ ಇದ್ದವರು ಮುಂದೆ ಬಂದರೆ ತರಬೇತಿ ನೀಡಲು ಸಿದ್ಧರಿದ್ದೇವೆ ಎಂದು ತಿಳಿಸಿದರು.

ಯೋಗಾಭ್ಯಾಸದಿಂದ ಆರೋಗ್ಯಕ್ಕಾಗುವ ಪ್ರಯೋಜನಗಳ ಬಗ್ಗೆ ಭಾರತ ಸೇರಿದಂತೆ ವಿಶ್ವಕ್ಕೆ ಮನವರಿಕೆ ಮಾಡಿಕೊಟ್ಟವರು ಪ್ರಧಾನಿ ನರೇಂದ್ರ ಮೋದಿ ಅವರು, ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸುತ್ತಿರುವುದಕ್ಕೂ ಮೋದಿ ಅವರೇ ಕಾರಣಕರ್ತರು. ಯೋಗದಿಂದ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಸಾಧ್ಯ. ದಿನವಿಡೀ ಉಲ್ಲಸಿತ ಮನಸ್ಸು, ಒತ್ತಡ ರಹಿತ ಜೀವನ ಸಾಧಿಸಲು ಸಹಕಾರಿ ಎಂದು ಅಭಿಪ್ರಾಯಿಸಿದರು.

> ನೀರಿನ ಮೇಲೆ ತೇಲುತ್ತ ಯೋಗಾಸನ ಮಾಡುವುದು ಕಠಿಣ ಎಂದು ಕಾಣಿಸುತ್ತದೆ. ಆದರೆ ಅಭ್ಯಾಸ ಮಾಡಿಕೊಂಡರೆ ತುಂಬಾ ಸರಳ ಜೊತೆಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೂ ಬಹಳ ಉಪಕಾರಿ.